# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಅಕ್ಟೋಬರ್ 20 ಭಾನುವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 184 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಇಡಿ ಬೆನ್ನಲ್ಲೇ ಸಿಬಿಐ ಪ್ರವೇಶ?

ಮೈಸೂರು, ಅ. 19(ಆರ್‌ಕೆ)– ರಾಜ್ಯದಲ್ಲಿ ಸ್ವಯಂ ಸಿಬಿಐ ಯಾವುದೇ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳಲು ಅವಕಾಶವಾಗದಂತೆ ನಿರ್ಬಂಧಿಸಿರುವ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಮಧ್ಯೆ ಸಾವಿರಾರು ಕೋಟಿಯ ಮುಡಾ ನಿವೇಶನ ಹಗರಣ ಸಂಬಂಧ ಜಾರಿ ನಿರ್ದೇಶನಾಲಯ (ಇಡಿ)ದ ತನಿಖೆ ಪ್ರಗತಿಯಲ್ಲಿರುವಾಗಲೇ ಸಿಬಿಐ (ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್) ಎಂಟ್ರಿಯಾಗುವ ಸಾಧ್ಯತೆ ಇದೆ ಎಂದು ಕೆಲ ಮೂಲಗಳು ಹೇಳುತ್ತಿವೆ.

ಸಿಎಂ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ 14 ನಿವೇಶನ ಸೇರಿ ಶೇ. 50:50ರ ಅನುಪಾತದಡಿ 5ರಿಂದ 6 ಸಾವಿರ ನಿವೇಶನಗಳನ್ನು ನಿಯಮ ಉಲ್ಲಂಘಿಸಿ ಮುಡಾದಿಂದ ಮಂಜೂರು ಮಾಡಿರುವುದರಿಂದ ಸಾವಿರಾರು ಕೋಟಿ ರೂ. ಹಣದ ವಹಿವಾಟು ನಡೆದಿರುವ ಹಿನ್ನೆಲೆಯಲ್ಲಿ ಈಗಾಗಲೇ ಇಡಿ, ಲೋಕಾಯುಕ್ತ ಹಾಗೂ ನ್ಯಾಯಾಂಗ ತನಿಖೆ ಪ್ರಗತಿಯಲ್ಲಿದ್ದು, ಹಾಗಾಗಿ ಇದು ದೇಶದ ಪ್ರಮುಖ ಹಗರಣಗಳಲ್ಲೊಂದಾಗಿದೆ.

ಬೆಂಗಳೂರಿನಲ್ಲಿರುವ ಸಿಬಿಐ ಘಟಕದ ಅಧಿಕಾರಿಗಳು, ಈ ಕುರಿತಂತೆ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳು ಹಾಗೂ ಪ್ರಧಾನಮಂತ್ರಿಗಳ ಕಚೇರಿ ತಲುಪಿರುವ ■ 6ನೇ ಪುಟಕ್ಕೆ

## ವಯನಾಡ್ ಉಪ ಚುನಾವಣೆ: 23ಕ್ಕೆ ಪ್ರಿಯಾಂಕಾ ನಾಮಪತ್ರ

**ತಿರುವನಂತಪುರ:** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ



ವಾದ್ರಾ ಅವರು ವಯನಾಡ್ ಲೋಕಸಭೆ ಕ್ಷೇತ್ರದ ಉಪಚುನಾವಣೆಗೆ ಇದೇ 23ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಸಹೋದರ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಿಯಾಂಕಾ ಅವರೊಂದಿಗೆ ಕೇರಳಕ್ಕೆ ಇದೇ 22ರ ಸಂಜೆ ಆಗಮಿಸಲಿದ್ದಾರೆ. 23ರ ಮಧ್ಯಾಹ್ನ 12 ಗಂಟೆಯೊಳಗೆ ಪ್ರಿಯಾಂಕಾ ಅವರು ನಾಮಪತ್ರ ಸಲ್ಲಿಸಲಿದ್ದಾರೆ. ನಾಮಪತ್ರ ಸಲ್ಲಿಕೆಗೂ ಮುನ್ನ ವಯನಾಡ್‌ನ ಕಲ್ಪಟ್ಟ ನಗರದಲ್ಲಿ ಬೃಹತ್ ರೋಡ್‌ಶೋವೊಂದನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಆಯೋಜಿಸಿದೆ. ರಾಹುಲ್ ಗಾಂಧಿ ಅವರು 2019 ರಲ್ಲಿ ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿ ವಯನಾಡ್‌ನಿಂದ ಸ್ಪರ್ಧಿಸಿದ್ದರು. ಈ ವೇಳೆ ರಾಹುಲ್ ಅವರೊಂದಿಗೆ ಪ್ರಿಯಾಂಕಾ ಅವರು ರೋಡ್ ಶೋ ಹಾಗೂ ಹಲವು ರ್‍ಯಾಲಿಗಳನ್ನು ನಡೆಸಿದ್ದರು.



### ಎರಡನೇ ದಿನವೂ ಇಡಿ ಹಿಡಿತದಲ್ಲಿ ಮುಡಾ

# ‘ವೈಟ್ನರ್’ ರಹಸ್ಯ ಜಾಲಾಡಿದ ಇಡಿ ಅಧಿಕಾರಿಗಳು



ಶಸ್ತ್ರಸಜ್ಜಿತ ಸಿಆರ್‌ಪಿಎಫ್ ಸಿಬ್ಬಂದಿ ಭದ್ರತೆ ನಡುವೆ ಇಡಿ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸಿದರು.

**ಮೈಸೂರು, ಅ.19(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಿವೇಶನ ಹಂಚಿಕೆಯಲ್ಲಾಗಿರುವ ಅಕ್ರಮದ ಬಗ್ಗೆ ತನಿಖೆ ಆರಂಭಿಸಿರುವ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿ ಗಳು 2ನೇ ದಿನವಾದ ಶನಿವಾರವೂ ಮುಡಾ ಕಚೇರಿಯಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದರು. ಅದರಲ್ಲೂ ವೈಟ್ನರ್ ಬಳಸಿ ತಿದ್ದುಪಡಿ ಮಾಡಲಾಗಿದೆ ಎಂದು ದೂರಲಾಗಿರುವ ದಾಖಲೆಗಳ ಬಗ್ಗೆ ಎಲ್ಲಾ ಆಯಾಮದಿಂದ ಮಾಹಿತಿ ಕಲೆ ಹಾಕಿದ್ದಾರೆ.**

ಶುಕ್ರವಾರ ಬೆಳಗ್ಗೆ ಮುಡಾ ಕಚೇರಿ ಮೇಲೆ ದಾಳಿ ನಡೆಸಿದ್ದ ಇಡಿ ಅಧಿಕಾರಿಗಳು, ಅಂದು ಮಧ್ಯಾಹ್ನದ ಊಟವನ್ನು ಕಚೇರಿಗೇ ತರಿಸಿಕೊಂಡು ಸೇವಿಸಿದ್ದಲ್ಲದೇ, ತಡ ರಾತ್ರಿವರೆಗೂ ಮುಡಾ ಅಧಿಕಾರಿಗಳಿಂದ ತಮ್ಮ ತನಿಖೆಗೆ ಅವಶ್ಯಕತೆ ಇರುವ ದಾಖಲೆಗಳನ್ನು ಕೇಳಿ ಪಡೆದರು. ಶುಕ್ರವಾರ ತಡರಾತ್ರಿ ನಂತರ ಮುಡಾ ಕಚೇರಿಯಿಂದ ಇಡಿ ಅಧಿಕಾರಿಗಳು ನಿರ್ಗಮಿಸಿ, ಮತ್ತೆ ಶನಿವಾರ ಬೆಳಗ್ಗೆ ಆಗಮಿಸಿದರು. ಶುಕ್ರವಾರ ರಾತ್ರಿಯಿಡೀ ಶಸ್ತ್ರಸಜ್ಜಿತ ಸಿಆರ್‌ಪಿಎಫ್‌ಯೋಧರು ಮುಡಾ ಕಚೇರಿಯಲ್ಲಿ ಕಾವಲು ಕಾಯುತ್ತಿದ್ದರು. ಇಂದು ಬೆಳಗ್ಗೆ ಮುಡಾ ಕಚೇರಿಗೆ ಆಗಮಿಸಿದ ಇಡಿ ಅಧಿಕಾರಿಗಳು ತಮ್ಮ ತನಿಖೆಗೆ ಸಹಕರಿಸಲು ಎಫ್‌ಎಸ್‌ಎಲ್ ಅಧಿಕಾರಿಗಳನ್ನು ಕರೆಸಿದ್ದರು ಎಂದು ಹೇಳಲಾಗಿದೆ. ಮುಡಾದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ಹಂಚಿಕೆಯಾಗಿದ್ದ 14 ನಿವೇಶನಗಳಿಗೆ ಸಂಬಂಧಿಸಿದ ಕಡತವೂ ಸೇರಿದಂತೆ ಹಲವು ಕಡತಗಳನ್ನು ಪರಿಶೀಲಿಸಿದ ಇಡಿ ಅಧಿಕಾರಿಗಳು ಕೆಲವು ದಾಖಲೆಗಳ ಬಗ್ಗೆ ಮುಡಾ ■ 6ನೇ ಪುಟಕ್ಕೆ

## ಸರಿರಾತ್ರಿವರೆಗೂ ಇಡಿ ಅಧಿಕಾರಿಗಳ ಪರಿಶೀಲನೆ

ಮೈಸೂರು, ಅ.19–ಮುಡಾದಲ್ಲಿ ಇಡಿ ಅಧಿಕಾರಿಗಳ ಕಾರ್ಯಾಚರಣೆ ಶನಿವಾರ ಮಧ್ಯರಾತ್ರಿವರೆಗೂ ಮುಂದುವರೆದಿತ್ತು.

ಶುಕ್ರವಾರ ಬೆಳಗ್ಗೆ ದಿಢೀರ್ ದಾಳಿ ನಡೆಸಿದ ಇಡಿ ಅಧಿಕಾರಿಗಳ ತಂಡ, ಕ್ಷಣಮಾತ್ರದಲ್ಲೇ ಇಡೀ ಮುಡಾ ಕಚೇರಿಯನ್ನು ಸುಪರ್ದಿಗೆ ಪಡೆಯಿತು. ಸಿಆರ್‌ಪಿಎಫ್‌ನ ಬಿಗಿ ಬಂದೋಬಸ್ತ್ ನಡುವೆ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿತು. ರಾತ್ರಿಯಿಡೀ ಸಿಆರ್‌ಪಿಎಫ್ ಪಡೆ ನಿಗಾ ವಹಿಸಿತ್ತು. ಶನಿವಾರ ಬೆಳಗ್ಗೆಯಿಂದ ಮತ್ತೆ ಕಾರ್ಯಾಚರಣೆ ಮುಂದುವರೆಸಿರುವ ಇಡಿ ತಂಡ, ಹಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದೆ. 50:50ರ ಅನುಪಾತದಲ್ಲಿ ನಿವೇಶನ ಮಂಜೂರು ಮಾಡಿರುವ ಸಂಬಂಧ ಸಮಗ್ರ ದಾಖಲೆಗಳನ್ನೂ ಸಂಗ್ರಹಿಸಿದ್ದಾರೆ ಎನ್ನಲಾಗಿದೆ.

### ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣಕ್ಕೆ ಮತ್ತೊಂದು ಟ್ವಿಸ್ಟ್

## ಹಿಂದಿನ ಮೈಸೂರು ಡಿಸಿ, ಹಾಲಿ ಸಂಸದ ಕುಮಾರ್ ನಾಯಕ್‌ಗೆ ಲೋಕಾಯುಕ್ತ ಡ್ರಿಲ್

**ಬಡಾವಣೆ ನಿರ್ಮಾಣವಾದ ಕೃಷಿ ಭೂಮಿಯ ಅನ್ಯಕ್ರಾಂತ ಮಾಡಿದ್ದೇಗೆ; ಕರಾರು ಪತ್ರದ ಖರೀದಿ ದಿನಾಂಕ ವ್ಯತ್ಯಾಸ ಆಗಿದ್ದೇಗೆ; ಇನ್ನೊಬ್ಬರು ಐಎಎಸ್ ಅಧಿಕಾರಿಗೆ ಸಮನ್ಸ್ ಸಾಧ್ಯತೆ**

ಮೈಸೂರು, ಅ.19(ಬಿಎಲ್‌ಯು)–



ಕುಮಾರ್ ನಾಯಕ್

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಉರುಳು ಈಗ ಮೈಸೂರು ಹಿಂದಿನ ಜಿಲ್ಲಾಧಿಕಾರಿ ಹಾಗೂ ಹಾಲಿ ರಾಯಚೂರು ಸಂಸದ ಕುಮಾರ್‌ನಾಯಕ್ ಕೊರಳಿಗೆ ಸುತ್ತಿಕೊಂಡಿದೆ. ಸಿದ್ದರಾಮಯ್ಯ ಭಾವಮೈದ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿದ್ದ ಕೆಸರೆ ಭೂಮಿಯನ್ನು ಅನ್ಯಕ್ರಾಂತ ಮಾಡಿದ್ದ ಕುಮಾರ್ ನಾಯಕ್ ಅವರನ್ನು ಇಂದು ಮೈಸೂರು ಲೋಕಾಯುಕ್ತ ಪೊಲೀಸರು ತನಿಖೆಗೊಳಪಡಿಸಿದರು.

ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ನೀಡಿದ್ದ ಸಮನ್ಸ್ ಹಿನ್ನೆಲೆಯಲ್ಲಿ ಕುಮಾರ್ ನಾಯಕ್ ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಮಧ್ಯಾಹ್ನ 12.30 ಗಂಟೆಗೆ ಆಗಮಿಸಿ ಸುಮಾರು ಎರಡು ಗಂಟೆಗಳ ಕಾಲ ವಿಚಾರಣೆ ಎದುರಿಸಿದರು. ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464 ರ 3.16 ಎಕರೆಯನ್ನು ದೇವರಾಜು ಅವರಿಂದ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿದ್ದರು. ತರುವಾಯ ಮಲ್ಲಿಕಾರ್ಜುನಸ್ವಾಮಿ ನೀಡಿದ ಕರಾರು ಪತ್ರದ ಆಧಾರದ ಮೇಲೆ ಕುಮಾರ್‌ನಾಯಕ್ ಕೃಷಿ ಭೂಮಿ ಎಂದು ಅನ್ಯಕ್ರಾಂತ ಮಾಡಿದ್ದರು. ಆದರೆ ಅನ್ಯಕ್ರಾಂತ ಮಾಡಿರುವುದೇ ಕಾನೂನು ಬಾಹಿರ ಎಂದು ದೂರುದಾರ ಸ್ನೇಹಮಯಿ ಕೃಷ್ಣ ದಾಖಲಾತಿಯನ್ನು ಲೋಕಾಯುಕ್ತರು ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಮಲ್ಲಿಕಾರ್ಜುನ ಸ್ವಾಮಿ ಜುಲೈ 17, 2005 ರಲ್ಲಿ ಷರತ್ತಿಗೊಳಪಡುವ ಕರಾರು ಪತ್ರ ಕೊಟ್ಟಿದ್ದಾರೆ. ಆದರೆ ಕರಾರು ಪತ್ರದ ಛಾಪಾ ಕಾಗದವನ್ನು ■ 6ನೇ ಪುಟಕ್ಕೆ

## ಪಾರ್ವತಿಯವರಿಗೆ ಮತ್ತೊಂದು ‘ಭೂ ಕಂಟಕ’

**ಕೆಆರ್‌ಎಸ್ ರಸ್ತೆಯಲ್ಲಿ ಸರ್ಕಾರಿ ಭೂಮಿ ಸೇರಿಸಿ ನೋಂದಣಿ; ಮುಡಾ ಹಗರಣ ಬಯಲಾಗುತ್ತಿದ್ದಂತೆ ತಿದ್ದುಪಡಿ ರಿಜಿಸ್ಟರ್ ಮೂಲಕ ಮುಡಾ ಜಾಗಕ್ಕೆ ಮುಕ್ತಿ!**

ಬೆಂಗಳೂರು, ಅ.19(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ವಿರುದ್ಧ ಮತ್ತೊಂದು ಭೂ ಅಕ್ರಮ ಆರೋಪ ಕೇಳಿಬಂದಿದೆ. ಗಣೇಶ್ ದೀಕ್ಷಿತ್ ಎಂಬುವವರಿಗೆ ಸೇರಿದ 4.11 ಎಕರೆ ಜಮೀನಿನಲ್ಲಿ 20 ಗುಂಟೆ ಜಾಗವನ್ನು 1.85 ಕೋಟಿ ರೂ.ಗೆ ಪಾರ್ವತಿ ಅವರು ಖರೀದಿಸಿದ್ದರು. ಈ ಮಧ್ಯೆ ದೀಕ್ಷಿತ್ ಅವರು 8,998 ಚದರಡಿ ಜಾಗವನ್ನು ರಸ್ತೆ ಮತ್ತು ಪೈಪ್‌ಲೈನ್‌ಗೆ ಬಿಟ್ಟುಕೊಟ್ಟಿದ್ದರು, ಪಾರ್ವತಿ ಅವರು ಜಮೀನು ಖರೀದಿ ಮಾಡುವಾಗ ಮುಡಾಗೆ ಬಿಟ್ಟುಕೊಟ್ಟ ಜಾಗ ವನ್ನೂ ಸೇರಿಸಿ ನೋಂದಣಿ ಮಾಡಿಸಿಕೊಂಡಿದ್ದರು. ಈ ಜಮೀನಿಗೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತರೊಬ್ಬರು ಆರ್‌ಟಿಐ ಅಡಿ ಮಾಹಿತಿ ಕೋರುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ ಅವರ ಪತ್ನಿ ಕಳೆದ ಆ.30ರಂದು ಮತ್ತೆ ತಿದ್ದುಪಡಿ ರಿಜಿಸ್ಟರ್ ಮಾಡಿಸಿ ಮುಡಾ ಸ್ಥಳವನ್ನು ಬಿಟ್ಟು ಇನ್ನು ಳಿದ 12,782 ಚದರಡಿ ಜಾಗಕ್ಕೆ ಮಾತ್ರ ನೋಂದಣಿ ಮಾಡಿಸಿಕೊಂಡರು. ಈ ಜಾಗ ಮೈಸೂರು ನಗರದ ಕೆಆರ್‌ಎಸ್ ರಸ್ತೆಯಲ್ಲಿ ಸರ್ವೆ ನಂಬರ್ 454ಕ್ಕೆ ಸೇರಿದ್ದು, ಇದು ವಾಣಿಜ್ಯ ಕೇಂದ್ರಕ್ಕೆ ಪ್ರಶಸ್ತವಾದ ಸ್ಥಳವಾಗಿದೆ. ಹೆಚ್ಚುವರಿಯಾಗಿ ಮುಡಾ ಜಾಗ ದೊರೆಯುತ್ತದೆ ಎಂಬ ದುರುದ್ದೇಶದಿಂದ 20 ಗುಂಟೆ ಜಮೀನನ್ನು ಅದರ ಬದಿಯಲ್ಲೇ ಖರೀದಿಸಿ ಸರ್ಕಾರಿ ಭೂಮಿಯನ್ನೂ ಸೇರಿಸಿಕೊಂಡು ನೋಂದಣಿ ಮಾಡಿಸಿಕೊಂಡಿದ್ದರು.

ಮುಡಾ ಹಗರಣ ತಮ್ಮ ಕುಟುಂಬಕ್ಕೆ ಸಂಕಟ ತರುತ್ತದೆ ಎಂಬ ಹಿನ್ನೆಲೆಯಲ್ಲಿ ತಾವು ಪಡೆದಿದ್ದ 14 ನಿವೇಶನಗಳನ್ನು ಹಿಂತಿರುಗಿಸಿದ ಪಾರ್ವತಿ ಅವರು, ಇದೀಗ ಸರ್ಕಾರದ ಜಾಗವನ್ನು ಒತ್ತುವರಿ ಮಾಡಿ ನೋಂದಣಿ ಮಾಡಿಸಿಕೊಂಡಿದ್ದನ್ನು ಕೈಬಿಟ್ಟು ತಾವು ಖರೀದಿಸಿದ ಸ್ಥಳಕ್ಕಷ್ಟೇ ತೃಪ್ತಿಪಟ್ಟುಕೊಂಡಿದ್ದಾರೆ.

## ಪಟಾಕಿ ಬಿಟ್ಟಾಕಿ ಇಲ್ಲವೆ ಹಸಿರು ಪಟಾಕಿ ಮಾತ್ರ ಸಿಡಿಸಿ

**ಪರಿಸರ ಹಾನಿ ತಡೆಗೆ ಸರ್ಕಾರದ ಕಟ್ಟುನಿಟ್ಟಿನ ಕ್ರಮ**

ಬೆಂಗಳೂರು, ಅ.19(ಕೆಎಂಶಿ)– ದೀಪಾವಳಿ ಆಚರಣೆ ಸಂದರ್ಭದಲ್ಲಿ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ಎಂದು ಸರ್ಕಾರ ಇಂದಿಲ್ಲಿ ಪ್ರಕಟಿಸಿದೆ.

ವಾಯುಮಾಲಿನ್ಯ, ಶಬ್ದಮಾಲಿನ್ಯ ತಡೆಯಲು, ಹಿರಿಯ ನಾಗರಿಕರು ಮತ್ತು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಪಟಾಕಿ ತ್ಯಜಿಸಿ, ಇಲ್ಲವೆ ಹಸಿರು ಪಟಾಕಿಗಳನ್ನು ಮಾತ್ರ ಬಳಸಿ ಎಂದಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಖಂಡ್ರೆ, ಪಟಾಕಿಗಳು ಪರಿಸರಕ್ಕೆ ತೀವ್ರ ಹಾನಿ ಉಂಟು ಮಾಡುತ್ತವೆ, ಈ ನಿಟ್ಟಿನಲ್ಲಿ ಪ್ರಜ್ಞಾವಂತ ನಾಗರಿಕರು ಪರಿಸರಕ್ಕೆ ದಟ್ಟ ಹೊಗೆ ಸೇರಿಸುವ, ರಾಸಾಯನಿಕ, ಭಾರ ಲೋಹಯುಕ್ತ ಪಟಾಕಿ ಬಳಸದಂತೆ ಮನವಿ ಮಾಡಿದ್ದಾರೆ.

ಹಲವು ಮಕ್ಕಳು ಪಟಾಕಿ ಸಿಡಿಸುವಾಗ ಕಣ್ಣಿಗೆ ಪೆಟ್ಟು ಮಾಡಿಕೊಂಡಿದ್ದನ್ನು ನೋಡಿದ್ದೇವೆ, ಹಲ



ವರು ಗಾಯಗೊಳ್ಳುತ್ತಾರೆ, ಆದ್ದರಿಂದ ಸಾಧ್ಯವಾದಷ್ಟು ಪಟಾಕಿ ಹಚ್ಚದಿರುವುದೇ ಉತ್ತಮ, ಪಟಾಕಿ ಸಿಡಿಸಲೇಬೇಕು ಎಂದಾದರೆ ■ 6ನೇ ಪುಟಕ್ಕೆ

# 2028ರವರೆಗೆ ಈ ಸರ್ಕಾರ ನಡೆಯಲ್ಲ, ಮತ್ತೆ ನಾನೇ ಸಿಎಂ!

**ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಚ್ಚರಿಯ ಭವಿಷ್ಯ**

**ಮಂಡ್ಯ:** 2028ರವರೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ನಡೆಯಲ್ಲ, ಮತ್ತೆ ನಾನೇ ಈ ರಾಜ್ಯದ ಮುಖ್ಯಮಂತ್ರಿಯಾಗಲಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಚ್ಚರಿ ಭವಿಷ್ಯ ನುಡಿದಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, "ಜನರು ಒಂದು ಅವಕಾಶ ನೀಡುತ್ತಾರೆ ಎಂಬ ವಿಶ್ವಾಸ ಇದೆ. 2028ರ ಒಳಗೆ ಆ ಅವಕಾಶ ಬರುತ್ತೆ. ನಾನು ಜ್ಯೋತಿಷಿ ಅಲ್ಲ, ಆದರೂ ಹೇಳುತ್ತಿದ್ದೀನಿ. ಜನರು ಬಯಸಿದರೆ ಮತ್ತೆ ಯಾಕೆ ನಾನು ಸಿಎಂ ಆಗಬಾರದಾ? ಜನ ಮತ್ತೆ ತೀರ್ಮಾನ ಮಾಡುತ್ತಾರೆ. ನನಗೆ ಐದು ವರ್ಷ ಸರ್ಕಾರ ನಡೆಸಲು ಅವಕಾಶ ಕೊಡಿ ಎಂದು ಜನತೆಗೆ ಈಗಲೂ ಮನವಿ ಮಾಡುತ್ತೇನೆ ಎಂದು ಹೇಳುವ ಮೂಲಕ 3ನೇ ಬಾರಿ ಮುಖ್ಯಮಂತ್ರಿಯಾಗುವ ಆಸೆ ಬಿಚ್ಚಿಟ್ಟಿದ್ದಾರೆ.

ನನ್ನ 14 ತಿಂಗಳ ಆಡಳಿತ, ಬೇರೆಯವರ ಹಂಗಿನಲ್ಲಿ ಮಾಡಿದ್ದು. ಇನ್ನೊಬ್ಬರ ಹಂಗಿನಲ್ಲಿ ಸರ್ಕಾರ ಮಾಡಿದಾಗಲೂ ನಾಡಿಗೆ ಕೊಟ್ಟ



ಕಾರ್ಯಕ್ರಮ ಜನರ ಮನಸ್ಸಿನಲ್ಲಿ ಉಳಿದಿದೆ. 5 ವರ್ಷಗಳ ಸರ್ಕಾರ ನನಗೆ ಒಂದು ಬಾರಿ ಸಿಕ್ಕಿದ್ರೆ, ನನಗಿರುವ ಅನುಭವದಲ್ಲಿ ಉತ್ತಮ ಕೆಲಸ ಮಾಡುತ್ತೇನೆ' ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಹಣದ ಕೊರತೆ ಇಲ್ಲ. ಕರ್ನಾಟಕ ಸಮೃದ್ಧಿಯ ನಾಡು. ಆದರೆ ಇವತ್ತು ಹಣ ಲೂಟಿಯಾಗುತ್ತಿದೆ. ಸರ್ಕಾರದ ಆಸ್ತಿ ಕಬಳಿಕೆ ಆಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಿದರೆ, ಇವರು ಕೊಡುವ 2,000 ರೂ. ಅಲ್ಲ ಕನಿಷ್ಠ 10 ಸಾವಿರ ರೂ. ಕೊಡುವ ಕಾರ್ಯಕ್ರಮಗಳು ಇವೆ. ಜನರು ಒಂದು ಅವಕಾಶ ನೀಡುತ್ತಾರೆ ಅನ್ನೋ ವಿಶ್ವಾಸ ಇದೆ. 2028ರ ಒಳಗೆ ಆ ಅವಕಾಶ ನನಗೆ ಬರುತ್ತೆ ಎಂದು ತಿಳಿಸಿದರು.

ಇಂದಿನ ಸರ್ಕಾರದ ನಡವಳಿಕೆಗಳಿಂದ ಜನರು ಬೇಸತ್ತಿದ್ದಾರೆ. ಜನರಲ್ಲಿ ಸರ್ಕಾರದ ಬಗ್ಗೆ ಕಿಂಚಿತ್ತೂ ಗೌರವ ಇಲ್ಲ. ಜನರೇ ಈ ಸರ್ಕಾರವನ್ನು ತೆಗೆಯುತ್ತಾರೆ. ನಾವು ತೆಗೆಯಲು ಸಾಧ್ಯವಿಲ್ಲ, ಜನರೇ ತೀರ್ಮಾನ ಮಾಡಬೇಕು. ಈ ಪರಿಸ್ಥಿತಿಯಲ್ಲಿ ಜನರೇ ತೀರ್ಮಾನ ಮಾಡುತ್ತಾರೆ. ಕಾಂಗ್ರೆಸ್ ಶಾಸಕರಲ್ಲೇ ಅಸಮಾಧಾನ ಸ್ಫೋಟ ಆಗಿದೆ. ಅದು ಯಾವಾಗ ಸ್ಫೋಟ ಆಗುತ್ತೋ ಕಾದು ನೋಡೋಣ. ನಾವು ಅವರ ಸರ್ಕಾರ ಅಲ್ಲಾಡಿಸುತ್ತೀವಿ ಅಂತ ಹೇಳಿಲ್ಲ. ಸರ್ಕಾರದ ನಿಷ್ಕ್ರಿಯತೆಯಿಂದ ಶಾಸಕರು ಹಳ್ಳಿಗೆ ಹೋಗಿ ಜನರನ್ನು ಭೇಟಿ ಮಾಡದ ವಾತಾವರಣ ಸೃಷ್ಟಿಯಾಗಿದೆ. ಸರ್ಕಾರದ ನಡವಳಿಕೆ ಬಗ್ಗೆ ಅವರಲ್ಲೇ ಅಸಮಾಧಾನ ಸ್ಫೋಟವಾಗುತ್ತದೆ ಎಂದು ಹೇಳಿದರು.

ಮೈಸೂರು ಮಿತ್ರ

ಭಾನುವಾರ 20 ಅಕ್ಟೋಬರ್ 2024

## ದಸರಾ ವಿದ್ಯುತ್ ದೀಪಾಲಂಕಾರ ವೀಕ್ಷಿಸಿ ಸಂಭ್ರಮಿಸುತ್ತಿರುವ ಪ್ರವಾಸಿಗರು...







ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂಪನ್ನವಾದರೂ ನಗರದಾದ್ಯಂತ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದ್ದು, ಶನಿವಾರ ರಾತ್ರಿ ವಾಹನ ದಟ್ಟಣೆಯ ನಡುವೆ ವಿದ್ಯುತ್ ದೀಪಾಲಂಕಾರ ವೀಕ್ಷಿಸಿ ಸಂಭ್ರಮಿಸುತ್ತಿರುವ ಪ್ರವಾಸಿಗರು.

# ತಾಯಿ, ಮಗುವಿನ ಮರಣ ಪ್ರಮಾಣ ತಗ್ಗಿಸಲು ಮಕ್ಕಳ ವೈದ್ಯರ ಗಮನ ಅಗತ್ಯ

## ಮಕ್ಕಳ ವೈದ್ಯರ ಸಂಘದ ರಾಜ್ಯ ಸಮ್ಮೇಳನದಲ್ಲಿ ಡಾ.ಜಿ.ವಿ.ಬಸವರಾಜು ಅಭಿಮತ

ಮೈಸೂರು, ಅ.19(ಜಿಎ)–ಆಧುನಿಕ ವೈದ್ಯಕೀಯ ವಿಜ್ಞಾನ ಯುಗದಲ್ಲೂ ಹೆಚ್ಚಾಗಿರುವ ತಾಯಿ ಮತ್ತು ಮಗುವಿನ ಮರಣ ಪ್ರಮಾಣವನ್ನು ತಗ್ಗಿಸುವತ್ತ ಮಕ್ಕಳ ವೈದ್ಯರು ಹೆಚ್ಚಿನ ಗಮನಹರಿಸಬೇಕಿದೆ ಎಂದು ಇಂಡಿಯನ್ ದಿ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ರಾಷ್ಟ್ರಾಧ್ಯಕ್ಷ ಡಾ.ಜಿ.ವಿ.ಬಸವರಾಜ ಅಭಿಪ್ರಾಯಪಟ್ಟರು.

ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಕರ್ನಾಟಕ ರಾಜ್ಯ ಮಂಡಳಿ, ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಜಿಲ್ಲಾ ಘಟಕ, ಮೈಸೂರು ಮೆಡಿಕಲ್ ಕಾಲೇಜು, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ 42ನೇ ಕಾರ್ಪೆಡಿ ಕಾಂನ್ ಕರ್ನಾಟಕ ರಾಜ್ಯ ಮಕ್ಕಳ ವೈದ್ಯರ ಸಂಘದ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ, ಮಾತನಾಡಿದರು.

ಹೆರಿಗೆ ಹಾಗೂ ನಂತರ ತಾಯಿ ಮತ್ತು ಮಗುವಿನ ಮರಣ ಪ್ರಮಾಣ ಕಡಿಮೆ ಆಗಿಲ್ಲ. ಇದು ವೈದ್ಯರಿಗಷ್ಟೇ ಅಲ್ಲ, ಸರ್ಕಾರಕ್ಕೂ ಸವಾಲಾಗಿದೆ. ಅಗತ್ಯ ಔಷಧ ನೀಡುವ ಮತ್ತು ಆರೈಕೆ ಮೂಲಕ ಮರಣದ ಪ್ರಮಾಣವನ್ನು ಕಡಿಮೆ ಮಾಡಬೇಕು. ಭ್ರೂಣದ ಹಂತದಿಂದ 18 ವರ್ಷದ ತನಕ ಕಾಪಾಡಬೇಕು. ಪ್ರಸವ ಸಂದರ್ಭದ ಸಾವನ್ನು ತಗ್ಗಿಸುವುದರ ಜತೆಗೆ ಮಕ್ಕಳ ಆರೈಕೆ ಹೇಗೆ ಮಾಡಬೇಕು ಎಂಬುದರ ಬಗ್ಗೆಯ ವೈದ್ಯರು ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ವೃತ್ತಿಯಲ್ಲಿ ಘನತೆ ಹಾಗೂ ಸಾಮಾಜಿಕ ಹೊಣೆ ಗಾರಿಕೆ ನಿಭಾಯಿಸುವುದರ ಜತೆಗೆ ಶುಶ್ರೂಷಕರೇ ವೈದ್ಯ ರೆಂದು ಜನರಿಗೆ ಬಿಂಬಿಸುವಂತಹ ನಕಲಿ ವೈದ್ಯರಿಂದ ಅಂತರ ಕಾಪಾಡಿಕೊಳ್ಳಬೇಕು. ಈ ಮುಂಚೆ ನಮ್ಮಲ್ಲಿ ಕುಟುಂಬ ವೈದ್ಯರು ಎಂಬ ವ್ಯವಸ್ಥೆ ಇತ್ತು. ಕುಟುಂಬವೊಂದರ ಹಿಂದಿನ ಮತ್ತು ಇಂದಿನ ಜನರ ಆರೋಗ್ಯ, ಅವರ ವಂಶವಾಹಿನಿ ಮತ್ತಿತರ ಆರೋಗ್ಯ ಸಂಬಂಧಿ ವಿಷಯಗಳು ಅವರಿಗೆ ಚೆನ್ನಾಗಿ ಗೊತ್ತಿರುತ್ತಿತ್ತು. ಈಗ ಹಾಗಿಲ್ಲ ತಾಯಿ, ಶಿಶುವಿನ ಮರಣ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ಸಂಘವು ಸರ್ಕಾರದೊಂದಿಗೆ ತಿಳುವಳಿಕೆ ಒಪ್ಪಂದದ ಮೂಲಕ ಅಗತ್ಯ ಸಲಹೆ, ಸಹಕಾರವನ್ನು ನೀಡಲಿದೆ ಎಂದು ತಿಳಿಸಿದರು. ಇಂಡಿಯನ್ ಡಿ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ರಾಷ್ಟ್ರ ಉಪಾಧ್ಯಕ್ಷ ಡಾ.ಸಿಂಗಾರ ವೇಲು, ಜೆಎಸ್‌ಎಸ್ ವೈದ್ಯಕೀಯ ವಿವಿ ಕುಲಪತಿ ಡಾ.ಬಿ.ಸುರೇಶ, ಆದಿಚುಂಚನಗಿರಿ ವಿವಿ ಕುಲಪತಿ ಎಂ.ಎ.ಶೇಖರ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಡಾ.ಹೆಚ್.ಬಸವನ ಗೌಡಪ್ಪ, ಕರ್ನಾಟಕ ರಾಜ್ಯ ಮಕ್ಕಳ ವೈದ್ಯರ ಸಂಘದ ಕಾಯದರ್ಶಿ ಡಾ.ಕೆ.ಬಿ.ಶಶಿಕಿರಣ್, ಖಜಾಂಚಿ ಡಾ.ಶಿವು ಉಪಸ್ಥಿತರಿದ್ದರು.




ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಿದ್ದ 42ನೇ ಕಾರ್ಪೆಡಿಕಾಂನ್ ಸಮ್ಮೇಳನವನ್ನು ಇಂಡಿಯನ್ ದಿ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ರಾಷ್ಟ್ರಾಧ್ಯಕ್ಷ ಡಾ.ಜಿ.ವಿ.ಬಸವರಾಜ ಉದ್ಘಾಟಿಸಿದರು.

## ಬಿಜೆಪಿ ಸದಸ್ಯತ್ವ ಅಭಿಯಾನ



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಯಡಹಳ್ಳಿ, ಬೀರಿಹುಂಡಿ, ಮಾದಹಳ್ಳಿ ಹಾಗೂ ರೂಪಾನಗರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನವನ್ನು ಸಂಸದ ಯದುವೀರ್ ಒಡೆಯರ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಬಿಜೆಪಿ ಮುಖಂಡ ಕವೀಶ್‌ಗೌಡ, ಮಂಡಲ ಅಧ್ಯಕ್ಷ ಪೈ.ಟಿ.ರವಿ ಲಕ್ಷ್ಮೀಪುರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜಿಲ್ಲಾ ಕಾರ್ಯದರ್ಶಿ ಎಂ.ಮೋನಿಕಾ ಮತ್ತಿತರರು ಉಪಸ್ಥಿತರಿದ್ದರು.


## ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪವಮಾನ ಹೋಮ



ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪವಮಾನ ಹೋಮ ನಡೆಯಿತು.

ಮೈಸೂರು,ಅ.19–ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಪಂಚಮುಖಿ ಆಂಜನೇಯ ಸ್ವಾಮಿಗೆ ವಿಶೇಷ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಹಾಗೂ ಲೋಕಕಲ್ಯಾಣಾರ್ಥ ಪವಮಾನ ಹೋಮ ದೇವಸ್ಥಾನದ ಪ್ರಧಾನ ಅರ್ಚಕ ವಿದ್ವಾನ್ ಶ್ರೀ ಕೃಷ್ಣಮೂರ್ತಿ ನೇತೃತ್ವದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಭಕ್ತಾದಿಗಳಾದ ಶಿವಮೊಗ್ಗದ ವಿಮಲ್, ಕುಟುಂಬದವರು ಮತ್ತು ಕ್ಯಾಲಿಫೋರ್ನಿಯ ಕುಟುಂಬದವರಾದ ಶ್ರೀನಿವಾಸ್ ಹಾಗೂ ಮೈತ್ರಿ ಪೂಜೆಯಲ್ಲಿ ಭಾಗಿಯಾಗಿದ್ದರು.

## ನಂಜುಂಡಸ್ವಾಮಿ ನೇಮಕ



ಮೈಸೂರು, ಅ.19– ಮೈಸೂರು ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ಹಿರಿಯ ಕಾರ್ಯದರ್ಶಿಯನ್ನಾಗಿ ಕುಕ್ಕರಹಳ್ಳಿಯ ನಿವಾಸಿ ನಂಜುಂಡಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

## ನಿಧನ

### ಡಾ. ಎಸ್.ಪಿ.ತಿರುಮಲರಾವ್




ಮೈಸೂರು, ಅ.19– ಮೈಸೂರಿನ ಗೋಕುಲಂ ನಿವಾಸಿ, ರೈಲ್ವೆ ಇಲಾಖೆಯ ನಿವೃತ್ತ ಹಿರಿಯ ವೈದ್ಯಾಧಿಕಾರಿ ಡಾ. ಎಸ್.ಪಿ. ತಿರುಮಲರಾವ್ (86) ಶನಿವಾರ ಮಧ್ಯಾಹ್ನ ನಿಧನರಾದರು.

ಮೃತರು ಪತ್ನಿ ನಾಗರತ್ನ, ಪುತ್ರರಾದ ಆದರ್ಶ್, ದಾಸ, ಪುತ್ರಿ ಪದ್ಮಿನಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅ.21ರ ಸೋಮವಾರ ಮಧ್ಯಾಹ್ನ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಮಾರು 25 ವರ್ಷಗಳ ಕಾಲ ರೈಲ್ವೆ ಇಲಾಖೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿರುವ ಡಾ.ಎಸ್.ಪಿ.ತಿರುಮಲರಾವ್ ಅವರು, ಮೈಸೂರು ಜಿಲ್ಲಾ ಗ್ರಾಹಕ ರಕ್ಷಣಾ ವೇದಿಕೆ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಗ್ರಾಹಕ ರಕ್ಷಣಾ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 'ಗ್ರಾಹಕ ತರಂಗ' ದ್ವಿಭಾಷಾ ಮಾಸಿಕ ಪತ್ರಿಕೆ ಸಂಪಾದಕರಾಗಿದ್ದ ಇವರಿಗೆ ಗ್ರಾಹಕ ಭೂಷಣ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

20.10.2024 ಭಾನುವಾರ, ಮಳೆ ನಕ್ಷತ್ರ: ಚಿತ್ತ, 10.10.2024 ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ.

■ **ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ :** ಶ್ರೀ ಬನ್ನಿಮಹಾಕಾಳೇಶ್ವರಿ ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ದೇವರ ಜಾತ್ರಾ ಮಹೋತ್ಸವ, ಬೆಳಗ್ಗೆ 9ಕ್ಕೆ ವಾಹನೋತ್ಸವ ಪೂಜೆ, ಸ್ಥಳ: ಕುರುಬಾರಹಳ್ಳಿ ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ಆವರಣ, ಸಿದ್ಧಾರ್ಥನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀಪ್ರಸನ್ನ ಸೀತಾರಾಮ ಮಂದಿರ:** 2023–24ನೇ ಸಾಲಿನ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಮಂದಿರದ ಅಧ್ಯಕ್ಷ ಆರ್.ಗುರು, ಸ್ಥಳ: ಮಂದಿರದ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಸ್ವರಾಂಜಲಿ:** ಹಿರಿಯ ನಾಗರಿಕರಿಗೆ ರಂಗೋಲಿ ಸ್ಪರ್ಧೆ, ಸ್ಥಳ: ಜೆ.ಕೆ.ಮೈದಾನದ ಎಂಎಂಸಿ ಸಭಾಂಗಣ, ಬೆಳಗ್ಗೆ 10ರಿಂದ.

■ **ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ, ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಡಾ.ವಿ.ಲಕ್ಷ್ಮೀನಾರಾಯಣ ಸ್ಮಾರಕ ಚಿಂತನ–ಮಂಥನ ವೇದಿಕೆ:** ಪುಸ್ತಕ–ಸಂವಾದ, ಡಾ.ಬಿ.ಆರ್.ಅಂಬೇಡ್ಕರ್ ಹೋರಾಟಗಳ ಸ್ತ್ರೀವಾದಿ ನೆಲೆಯನ್ನು ಬಿಂಬಿಸುವ 'ನಾವೂ ಇತಿಹಾಸ ಕಟ್ಟಿದೆವು', ಅನುವಾದ: ಡಾ.ಸರಸ್ವತಿ ಅವರಿಂದ ಪುಸ್ತಕದ ವಿಷಯ ಮಂಡನೆ ಮತ್ತು ಮುಕ್ತ ಸಂವಾದ, ಪ್ರಾಸ್ತಾವಿಕ ನುಡಿ: ಡಾ.ಇ.ರತಿರಾವ್, ಪುಸ್ತಕದ ಪ್ರಸ್ತುತತೆ: ನಾ.ದಿವಾಕರ, ಅಧ್ಯಕ್ಷತೆ: ಪಿಯುಸಿಎಲ್ ಅಧ್ಯಕ್ಷ ಕಾಳಚನ್ನೇಗೌಡ, ಸ್ಥಳ: ಶ್ಯಾಗಲೆ ಹೌಸ್, ನಂ. 403, ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್, ಗೋಕುಲಂ 3ನೇ ಹಂತ, ಬೆಳಗ್ಗೆ 10ರಿಂದ.

■ **ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ದಸರಾ ಕವಿ ಕಾವ್ಯ ಸಂಭ್ರಮ, ರಾಜ್ಯ ಮಟ್ಟದ ಕಾವ್ಯೋತ್ಸವ, ಡಾ.ಸಿಪಿಕೆ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕವಯತ್ರಿ ಪ್ರೊ.ಚ.ಸರ್ವಮಂಗಳಾ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಶಯ ನುಡಿ: ಸ್ಪಂದನ ಸಾಂಸ್ಕೃತಿಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಹೆಚ್.ಕೆ.ರಾಮು, ಬಿ.ಎಸ್.ಸತೀಶ್, ಜೆ.ರಾಮಲಿಂಗೇಗೌಡ, ಎಂ.ವಿ.ಭಾಸ್ಕರ್, ಡಾ.ಈ.ಸಿ.ನಿಂಗರಾಜ್‌ಗೌಡ, ಪಿ.ಶಾಂತರಾಜು, ಯೋಗೇಂದ್ರ, ಅರಸು ಮಡಿಲು, ಸ್ಥಳ: ಜಿಲ್ಲಾ ಕಸಾಪ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಸ್‌ಸಿ ಮತ್ತು ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್:** ಕಚೇರಿ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಪ್ರಾದೇಶಿಕ ಮುಖ್ಯಸ್ಥ ಸುನೀಲ್ ವಿ.ಪಾಟೀಲ್, ಮುಖ್ಯ ಅತಿಥಿಗಳು: ನಿರ್ದೇಶಕ ಡಿ. ಚಂದ್ರಶೇಖರಯ್ಯ, ಉಪಸ್ಥಿತರು: ಅಸೋಸಿಯೇಷನ್ ಅಧ್ಯಕ್ಷ ಡಿ.ವಿಜಯಕುಮಾರ್, ಡಿ.ಕೃಷ್ಣಮೂರ್ತಿ, ಜಿ.ಜೆ.ಮುನಿಸ್ವಾಮಿ, ಡಿ.ವೀರಭದ್ರಸ್ವಾಮಿ, ಸ್ಥಳ: ಮಾರಮ್ಮ ದೇವರ ಸೇವಾ ಟ್ರಸ್ಟ್ ಬಿಲ್ಡಿಂಗ್, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ರಾಜ್ಯ ರೈತ ಸಂಘ:** ತಾಲೂಕು ಕಾರ್ಯಕರ್ತರ ಸಭೆ, ಉಪಸ್ಥಿತರು: ಬಡಗಲಪುರ ನಾಗೇಂದ್ರ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಶ್ರೀಮತಿ ನೇತ್ರಾವತಿ, ಪ್ರಸನ್ನ ಎನ್.ಗೌಡ, ಹೊಸಕೋಟೆ ಬಸವರಾಜು, ಸ್ಥಳ: ಕೃಷಿ ಅಧ್ಯಯನ ಮಾರುಕಟ್ಟೆ ಸಂಸ್ಥೆ, ಹುಣಸೂರು ರಸ್ತೆ, ಬೆಳಗ್ಗೆ 10.30 ರಿಂದ.

■ **ಜಮಾ ಅತೆ ಇಸ್ಲಾಮಿ ಹಿಂದ್ ಮೈಸೂರು ಶಾಖೆ :** ಸಾರ್ವಜನಿಕ ಸೀರತ್ ಸಮಾವೇಶ, ಸಾನ್ನಿಧ್ಯ: ಆದಿಚುಂಚನಗಿರಿ ಮಹಾ ಸಂಸ್ಥಾನ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮೌಲಾನಾ ಮಹಮ್ಮದ್ ಉಸ್ಮಾನ್ ಶರೀಫ್, ಸೇಂಟ್ ಫಿಲೋಮಿನಾ ಚರ್ಚ್ ಧರ್ಮಗುರು ಸ್ಟೇನಿ ಡಿ. ಅಲ್ಮೇಡಾ, ಅಧ್ಯಕ್ಷತೆ : ಪ್ರವಾದಿ ಮಹಮ್ಮದ್ ಲೇಖನ ಸಂಕಲನ ಕೃತಿ ಬಿಡುಗಡೆ : ಲೇಖಕ ಡಾ.ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ : ಜ.ಇ. ಹಿಂದ್ ಕರ್ನಾಟಕ ರಾಜ್ಯ ಕಾರ್ಯದರ್ಶಿ ಜನಾಬ್ ಮಹಮ್ಮದ್ ಕುಂಞಿ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಶರೀಫ್, ಮಾಜಿ ಆಯುಕ್ತ ಎ.ಬಿ.ಇಬ್ರಾಹೀಮ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಪಾಲಿಕೆ ಮಾಜಿ ಆಯುಕ್ತ ಎ.ಬಿ.ಇಬ್ರಾಹಿಂ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್, ವೈದ್ಯ ವಾರ್ತಾ ಪ್ರಕಾಶನ:** ಡಾ.ಅರಕಲಗೂಡು ನೀಲಕಂಠಮೂರ್ತಿ ವಿರಚಿತ 'ಸಮಯದ ನೀರು ಮತ್ತೆ ಹರಿಯುವ ಹೊತ್ತು', 'ಹೆಣ್ಣೊಬ್ಬಳು ಗರ್ಭಕೋಶಗಳೆರಡು', 'ಮುಖದಿಂದೆದ್ದು ಎತ್ತಲೋ ನಡೆದ ಕಣ್ಣು' ಕೃತಿಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಕೃತಿ ಲೋಕಾರ್ಪಣೆ: ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್, ಕೃತಿ ಕುರಿತು ಮಾತನಾಡುವವರು: ಮೈಸೂರು ಮೆಡಿಕಲ್ ಕಾಲೇಜು ವಿಶ್ರಾಂತ ಪ್ರಾಧ್ಯಾಪಕ ಡಾ.ಜೆ.ಪ್ರಸನ್ನಕುಮಾರ್, ಅಧ್ಯಕ್ಷತೆ: ವೈದ್ಯವಾರ್ತಾ ಪ್ರಕಾಶನ ನಿರ್ದೇಶಕ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಉಪಸ್ಥಿತರು: ಕೃತಿ ಲೇಖಕ ಡಾ.ಅರಕಲಗೂಡು ನೀಲಕಂಠಮೂರ್ತಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 11ಕ್ಕೆ

■ **ವ್ಯವಸ್ಥಾಪಕರು:** ಡಿ.ಪಿ.ಚಿಕ್ಕಣ್ಣ (ಕಾವ್ಯನಾಮ–ದಾಪುಚಿ) ದಾಸರಹಳ್ಳಿ ಪುಟ್ಟಸ್ವಾಮಿ ಚಿಕ್ಕಣ್ಣ ಅವರ ತೇಜಸ್ಸಿನ ಅಲೆ ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ: ಸುವರ್ಣಮುಖಿ ಸಂಸ್ಕೃತಿಧಾಮ ಅಧ್ಯಕ್ಷ ಆಚಾರ್ಯ ಡಾ. ಎಂ. ನಾಗರಾಜು, ಕೃತಿ ಲೋಕಾರ್ಪಣೆ : ಸಾಹಿತಿ ಬನ್ನೂರು ಕೆ. ರಾಜು, ಅಧ್ಯಕ್ಷತೆ: ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ ಇಲಾಖೆ ಜಂಟಿ ನಿರ್ದೇಶಕ (ವೈದ್ಯಕೀಯ) ಡಾ. ಪಿ. ಮಾಲೇಗೌಡ, ಕೃತಿ ಕುರಿತು ಮಾತನಾಡುವವರು : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು: ಲೇಖಕ ಡಿ.ಪಿ.ಚಿಕ್ಕಣ್ಣ, ಶ್ರೀರಾಜೇಂದ್ರ ಪ್ರಿಂಟರ್ಸ್‌ನ ಡಿ.ಎನ್.ಲೋಕಪ್ಪ, ಗಂಧನಹಳ್ಳಿ ಜಿ.ಎಸ್.ವೆಂಕಟೇಶ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಜಿಲ್ಲಾ ರಂಗಭೂಮಿ ವೃತ್ತಿ ಕಲಾವಿದೆಯರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಎಸ್.ಎಸ್. ಗಾಯಿತ್ರಿ ಅವರ ನೆನಪಿನ ನಾಟಕೋತ್ಸವ, ಜಲವಾಸುದೇವ ನಾಟಕ ಸಭಾ ಟ್ರಸ್ಟ್‌ನ ಮಕ್ಕಳಿಂದ ಶ್ರೀ ಕೃಷ್ಣಲೀಲೆ ಪೌರಾಣಿಕ ನಾಟಕ ಪ್ರದರ್ಶನ, ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಶ್ರೀಮತಿ ಸೌಭಾಗ್ಯಮೂರ್ತಿ, ರಂಗಕರ್ಮಿ ಕೆ.ಎಂ.ಗಿರಿಜಮ್ಮ, ಉಪಸ್ಥಿತರು : ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರೈತ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಮಾಯಣ್ಣಗೌಡ, ಶ್ರೀನಿವಾಸ್, ಬಂಡಿಪಾಳ್ಯ ಗಿರೀಶ್, ಶ್ರೀಮತಿ ನಿರ್ಮಲ ಮಠಪತಿ, ಮಂಜುಳ ಮಂಜುನಾಥ್, ಎಸ್.ಬಿ.ಎಂ.ಮಂಜು, ರಘುರಾಂ ವಾಜಪೇಯಿ, ಅಶೋಕ್, ಶ್ರೀಪುಷ್ಪರಾಣಿ, ಮುನಿವೆಂಕಟಪ್ಪ, ಎಸ್.ಎನ್.ಶ್ರೀನಿವಾಸ್, ಸ್ಥಳ: ಪುರಭವನ, ಮಧ್ಯಾಹ್ನ 1ಕ್ಕೆ

■ **ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ, ಸಂವಹನ ಪ್ರಕಾಶನ:** ಮಲೆಯೂರು ಮಂದಾರ ಕೃತಿ ಲೋಕಾರ್ಪಣೆ ಮತ್ತು ಪ್ರೊ. ಮಲೆಯೂರು ಗುರುಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕುಂದೂರು ಮಠದ ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೃತಿ ಲೋಕಾರ್ಪಣೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಸಾಹಿತಿ ಪ್ರೊ.ಎಚ್.ಎಸ್.ಶಿವಪ್ರಕಾಶ್ ಅವರಿಗೆ ಮ.ಗು. ಪ್ರಶಸ್ತಿ ಪ್ರದಾನ, ಮ.ಗು ಬದುಕು ಮತ್ತು ಸಾಹಿತ್ಯ–ಒಂದು ಚಿಂತನೆ ಕುರಿತು ಡಾ.ಸಿ.ನಾಗಣ್ಣ ಮಾತನಾಡುವರು, ಮುಖ್ಯ ಅತಿಥಿಗಳು: ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್, ನಿವೃತ್ತ ಉಪನ್ಯಾಸಕಿ ಜಯಂತಿ ಮಲೆಯೂರು ಗುರುಸ್ವಾಮಿ, ಸ್ಥಳ: ಜೆಎಸ್‌ಎಸ್ ಕಾಲೇಜು ಸುವರ್ಣ ಮಹೋತ್ಸವ ಸಭಾಂಗಣ, ಊಟಿ ರಸ್ತೆ, ಸಂಜೆ 4ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ವಾಸ್ಪ್ ಥಿಯೇಟರ್ ಬೆಂಗಳೂರು ಅಭಿನಯಿಸುವ ಹಾಸ್ಯ ನಾಟಕ 'ನೀನಾನಾದ್ರೆ ನಾನೀನೇನಾ' ಪ್ರದರ್ಶನ, ನಾಟಕದ ರಚನೆ: ಎಸ್.ಸುರೇಂದ್ರನಾಥ್, ನಿರ್ದೇಶನ : ವಿನಯ್ ಶಾಸ್ತ್ರಿ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ಮೈಸೂರಿನ ಅರಿವು ರಂಗ ತಂಡದಿಂದ 'ಸಲೀಂ ಅಲಿ–ಪಕ್ಷಿಲೋಕದ ಬೆರಗು' ನಾಟಕ ಪ್ರದರ್ಶನ, ರಚನೆ: ಡಾ.ಎಂ.ಸಿ.ಮನೋಹರ, ನಿರ್ದೇಶನ: ಬರ್ಟಿ ಎಫ್ ಒಲಿವೆರಾ, ಸಂಗೀತ: ಸಾಯಿಶಿಫ್, ಸಂಗೀತ ನಿರ್ವಹಣೆ: ಎಂ.ಸಿ.ಗಿರಿಧರ, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ.ಶಕುಂತಲ ಗೋಪಶೆಟ್ಟಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ.ಸುರಭಿ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಜಿಲ್ಲಾಡಳಿತ, ಹಾಸನ, 8.45 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ 'ಆಯಿಷ್ ಯಶೋಗಾಥೆ' ಸರಣಿಯಲ್ಲಿ 'ತೊದಲುವಿಕೆ, ಸ್ಟಟರಿಂಗ್' ಮತ್ತು 'ತಲೆ ಸುತ್ತು' ಕುರಿತು ಕಾರ್ಯಕ್ರಮ. ಭಾಗವಹಿಸುತ್ತಾರೆ: ಮಾನಸ. ಎ.ಎಸ್, ಡಾ. ಸುಜಿತ್ ಸಿನ್ಹಾ, ನಿಖಿಲ್. ಎಸ್, ಗೀತಾ. ಡಿ., ಮತ್ತು ಹೇಮಲತಾ. ಎ.ಸಿ., ಪ್ರಸ್ತುತಿ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ., ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ: ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ: ಪ್ರತಿಭಾ ಪಲ್ಲವ–ಕರಾಟೆ ಪಟುಗಳಾದ ಹೆಚ್.ಸಮರ್ಥ್ ಹಾಗೂ ಹೆಚ್. ಯಾದವಿ ಅವರ ಪರಿಚಯ. ಪ್ರಸ್ತುತಿ: ಎಂ.ಎಸ್.ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿಯಲ್ಲಿ ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ–ಹಣತೆ–ಮಹಿಳಾ ಜಾಗೃತಿಯ ಬೆಳಕು ಸರಣಿಯಲ್ಲಿ ಪ್ರಧಾನ ಮಂತ್ರಿ ಚೌಪಾಲ್ ಯೋಜನೆ ಹಾಗೂ ಸಮರ್ಥ್ ಕಾರ್ಯಕ್ರಮದಡಿಯಲ್ಲಿ ತರಬೇತುದಾರರು ಹಾಗೂ ಫಲಾನುಭವಿಗಳೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ –ಛಾಯಾ ಪ್ರಭು–ಲಘು ಉದ್ಯೋಗ ಭಾರತಿ ಸ್ವಯಂ ಸೇವಾ ಸಂಸ್ಥೆಯ ಮಹಿಳಾ ವಿಭಾಗದ ರಾಜ್ಯ ಕಾರ್ಯದರ್ಶಿ, ಶಾರದಾ ಎಲ್ ಭಾರದ್ವಾಜ್–ಸ್ವಯಂ ಉದ್ಯಮಿ, ಬೀನಾ ಎಲ್–ತಂಜಾವೂರ್ ಪೇಂಟಿಂಗ್ ಕಲಾವಿದೆ, ಮೈತ್ರಿ ಎಲ್ ನಾಯಕ್– ಟೆರ್ರಾಕೋಟಾ ಕಲಾವಿದೆ ಹಾಗೂ ಉಪನ್ಯಾಸಕಿ., ಪ್ರಸ್ತುತಿ– ಪತ್ರಕರ್ತೆ ಹೆಚ್.ಜಿ. ಶೋಭಾ, 12.30 ದೇವರನಾಮ–ಪುಷ್ಪಾ. ವಿ.ಶಂಕರ್, 12.45 ಜನಪದ ಸಂಗೀತ–ಜಯಮ್ಮ ಹಾಗೂ ಸಂಗಡಿಗರಿಂದ ನಾರಾಯಣಸ್ವಾಮಿ ಹಾಡು, 1.20 ಹಾಸನಾಂಬೆ ದರ್ಶನ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ಎ.ಜೆ.ದಿವ್ಯಾ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ವಸಂತ ಗೀತ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಸಾರಥ್ಯ ಪರಿತ್ಯಾಗ, ಪ್ರಸ್ತುತಿ: ಕುಂದಾಪುರ ತಾಲೂಕು ತೆಕ್ಕಟ್ಟೆ ಕೊಮ್ಮೆಯ ಯಶಸ್ವಿ ಕಲಾ ವೃಂದದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ಕೃಷಿ ಹಾಡುಗಳು, 7.00 ದುಬೈ ಇಂಟರ್ ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಮಹಿಳೆಯರ ಟಿ20 ವರ್ಲ್ಡ್ ಕಪ್ ಫೈನಲ್ ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ.

# ಮೈಸೂರಿನ ಗಂಜೀಫಾ ರಘುಪತಿ ಭಟ್‌ರಿಗೆ 'ಕಾಳಿದಾಸ್ ಸಮ್ಮಾನ್' ಪ್ರಶಸ್ತಿ

## 5 ಲಕ್ಷ ನಗದು, ಫಲಕ ಒಳಗೊಂಡ ಪ್ರಶಸ್ತಿ ನ.12ರಂದು ಉಜ್ಜಯಿನಿಯಲ್ಲಿ ಪ್ರದಾನ

ಮೈಸೂರು,ಅ.19(ಪಿಎಂ)– ಮಧ್ಯಪ್ರದೇಶ ಸರ್ಕಾರವು ವಾರ್ಷಿಕವಾಗಿ ಕೊಡಮಾಡುವ ಪ್ರತಿಷ್ಠಿತ 'ಕಾಳಿದಾಸ್ ಸಮ್ಮಾನ್' ಪ್ರಶಸ್ತಿಗೆ ಮೈಸೂರಿನ ಖ್ಯಾತ ಗಂಜೀಫಾ ಕಲಾವಿದರಾದ ರಘುಪತಿ ಭಟ್ ಆಯ್ಕೆಯಾಗಿದ್ದಾರೆ.

50 ವರ್ಷಗಳಿಗೂ ಅಧಿಕ ಕಾಲದಿಂದ ಪ್ರಾಚೀನ ಭಾರತೀಯ ಸಂಸ್ಕೃತಿ ಮತ್ತು ಕಲಾ ಕ್ಷೇತ್ರದಲ್ಲಿನ ಅವರ ಜೀವಮಾನ ಸಾಧನೆ ಪರಿಗಣಿಸಿ ರಘುಪತಿ ಭಟ್ ಅವರನ್ನು 2023ರ ರಾಷ್ಟ್ರೀಯ 'ಕಾಳಿದಾಸ್ ಸಮ್ಮಾನ್' ಪುರಸ್ಕಾರಕ್ಕೆ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ನ.12ರಂದು ಉಜ್ಜಯಿನಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ 5 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಂತೆ ಪ್ರಶಸ್ತಿಯನ್ನು ರಘುಪತಿ ಭಟ್ ಅವರಿಗೆ ಪ್ರದಾನ ಮಾಡಲಾಗುತ್ತಿದೆ.

**ರಘುಪತಿ ಭಟ್ ವೈಶಿಷ್ಟ್ಯ:** ರಘುಪತಿ ಭಟ್ ಅವರು 1957ರಲ್ಲಿ ಕರ್ನಾಟಕದಲ್ಲಿ ಜನಿಸಿದರು. ಇವರು ಚಿತ್ರಕಲೆ ಮತ್ತು ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಆಳವಾದ ಜ್ಞಾನವುಳ್ಳ ಉತ್ಸಾಹಿ ಕಲಾವಿದರು. ಇವರಲ್ಲಿದ್ದ ಕಲೆಯ ಬಗೆಗಿನ ಒಲವಿಗೆ ಅವರ ಚಿಕ್ಕವಯಸ್ಸಿನಿಂದಲೇ ಪೋಷಣೆ ದೊರೆಯಿತು.

ಆಧ್ಯಾತ್ಮಿಕ ಪರಿಸರ ಇವರ ಬೆಳವಣಿಗೆ ಯಲ್ಲಿ ಪ್ರಭಾವ ಉಂಟು ಮಾಡಿತ್ತು. ಇವರ ಅಜ್ಜ ಹಸ್ತಪ್ರತಿ ಬರಹಗಾರರಾಗಿದ್ದರು. ಅವರ ಅಜ್ಜ ತಾಳೆಗರಿಗಳನ್ನು ಸಿದ್ಧಪಡಿಸುತ್ತಿದ್ದರು ಮಾತ್ರವಲ್ಲದೆ ಶ್ರೀ ದುರ್ಗಾಸಪ್ತಶತಿಯಂತಹ ಸಂಸ್ಕೃತ ಗ್ರಂಥವನ್ನು ಲಿಪ್ಯಂತರ ಮಾಡಿದ್ದರು.

ಭಟ್ ಅವರು ಬೆಳೆಯುತ್ತಾ ದೇವಾಲಯಗಳಲ್ಲಿ ಸಾಕಷ್ಟು ಸಮಯ ಕಳೆದರು. ಅಲ್ಲಿ ಅವರು ಶಿಲ್ಪ ಕಲೆಯಲ್ಲಿ ಆಕರ್ಷಿತರಾದರು. ಮತ್ತು ಮಂತ್ರಗಳ ಪಠಣ ಆಲಿಸುತ್ತಿದ್ದರು. ಇವು ಅವರ ಕಲಾತ್ಮಕ ದೃಷ್ಟಿಯನ್ನು ಆಳವಾಗಿ ಪ್ರಭಾವಿಸಿತು. ಭಟ್ ಅವರು ರೇಖಾಚಿತ್ರ ರಚನೆ ಮತ್ತು ಪೇಂಟಿಂಗ್‌ನಲ್ಲಿ ತಮ್ಮ ಕೌಶಲ ಬೆಳೆಸಿಕೊಳ್ಳಲಾರಂಭಿಸಿದರು. ಆಗ ಅವರ ಪ್ರತಿಭೆಯು ಗಮನ ಸೆಳೆಯುವಂತಾಯಿತು.

ಪ್ರಾಚೀನ ಭಾರತೀಯ ಸಂಸ್ಕೃತಿ, ಕಲೆಯಲ್ಲಿನ ಅವರ ಜ್ಞಾನ ಮತ್ತು ಅನ್ವೇಷಣೆಯು ಅವರನ್ನು ಭಾರತದಾದ್ಯಂತ ಪ್ರಯಾಣಿಸಲು ಅನುವು ಮಾಡಿತು. ಜೊತೆಗೆ ವಿವಿಧ ಗುರುಗಳಿಂದ ಕಲೆಯನ್ನು ಕಲಿತು ಇನ್ನಷ್ಟು ಜ್ಞಾನ ಸಂಪಾದಿಸಲು ಸಾಧ್ಯ ಮಾಡಿತು. ತಮ್ಮ ಬಾಲ್ಯದ ವರ್ಷಗಳಲ್ಲಿ ಅವರು ಗಮನಿಸಿದ ಶಿಲ್ಪಗಳು ಅವರ ಕಲಾತ್ಮಕ ಶೈಲಿಯ ಅಡಿಪಾಯವಾಗಿದೆ. ಇದು ಅವರ ಕಲಾಕೌಶಲದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಭಟ್ ಅವರು ಕರ್ನಾಟಕ ಗಂಜೀಫ ಪೇಂಟಿಂಗ್ ಅನ್ನು ಪುನರುಜ್ಜೀವನಗೊಳಿಸುವಲ್ಲಿ ಮಹತ್ವದ ಕೆಲಸ ಮಾಡಿದ್ದು, ಅದಕ್ಕಾಗಿಯೇ ಅವರು ಹೆಸರುವಾಸಿಯೂ ಆಗಿದ್ದಾರೆ ಈ ಪ್ರಯತ್ನದ ಫಲವಾಗಿ ಅವರ ಹೆಸರಿನ ಪೂರ್ವದಲ್ಲೇ 'ಗಂಜೀಫಾ' ಸೇರಿ ಹೋಗಿದೆ.

ಅವರ ಕಾರ್ಯವು ಸಾಂಪ್ರದಾಯಿಕ ಕಲಾ ಪ್ರಕಾರವನ್ನು ಪುನರುಜ್ಜೀವನಗೊಳಿಸುವಲ್ಲಿ ಸಹಕಾರಿಯಾಗಿದೆ ಅಲ್ಲದೆ ಅವರು ಕಾವಳಿ ಕರ್ನಾಟಕದ ಮತ್ತೊಂದು ಅಳಿವಿನಂಚಿನಲ್ಲಿರುವ 'ಕವಿ ಕಲೆ'ಯನ್ನು ಪುನರುಜ್ಜೀವನಗೊಳಿಸುವಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದಾರೆ. ಜೊತೆಗೆ ಅದೇ ಕಲೆಯ ತಂತ್ರಗಳ ಕುರಿತು 'ಕವಿ ಚಿತ್ರಕಲೆ ರಚನಾ ವಿಧಾನ' ಪುಸ್ತಕವನ್ನೂ ಬರೆದಿದ್ದಾರೆ.


ಕಲೆಗೆ ಇವರು ನೀಡಿದ ಕೊಡುಗೆಗಾಗಿ 1993ರಲ್ಲಿ ಅಂದಿನ ಭಾರತದ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಅವರಿಂದ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದ್ದರು. ಇದಲ್ಲದೆ, ಇನ್ನು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಟ್ ಅವರು ಭಾಜನರಾಗಿದ್ದಾರೆ. ಲಂಡನ್‌ನ ಭಾರತೀಯ ವಿದ್ಯಾಭವನದಂತಹ ಪ್ರತಿಷ್ಠಿತ ಸ್ಥಳಗಳಲ್ಲಿ ಅವರು ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶಿಸಿದ್ದಾರೆ.

ವಿಕ್ಟೋರಿಯಾದಲ್ಲಿ ನೈಸರ್ಗಿಕ ಬಣ್ಣಗಳ ತಯಾರಿಕೆ ಸಹ ಪ್ರದರ್ಶಿಸಿದ್ದರು. ಆಲ್ಬರ್ಟ್ ಮ್ಯೂಸಿಯಂ, ಲಂಡನ್‌ನ ಭಾರತದ ರಾಯಭಾರಿ ಕಚೇರಿ, ಟೋಕಿಯೋ ; ಚಯಾಮಾಚಿ ಗ್ಯಾಲರಿ, ಒಸಾಕಾ ; ವರ್ಲ್ಡ್ ಪೀಸ್ ಕಾನ್ಫರೆನ್ಸ್ ಸೆಂಟರ್, ಹಿರೋಷಿಮಾ ವರ್ಲ್ಡ್ ಪೀಸ್ ಕಾನ್ಫರೆನ್ಸ್, ಕ್ಯೋಟೋ ಮೊದಲಾದೆಡೆ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ ಹೆಗ್ಗಳಿಕೆಯನ್ನು ಭಟ್ ಅವರು ಹೊಂದಿದ್ದಾರೆ.


ರಘುಪತಿ ಭಟ್ ಅವರು ಗೋಡೆ ವರ್ಣಚಿತ್ರಗಳ ಉಳಿಸಿ ಬೆಳೆಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮೈಸೂರಿನ ಅಂಬಾವಿಲಾಸ ಅರಮನೆಯ ದರ್ಬಾರ್ ಹಾಲ್, ಖಾಸಗಿ ದರ್ಬಾರ್ ಹಾಲ್ ಮತ್ತು ಕಲ್ಯಾಣ ಮಂಟಪದಲ್ಲಿ ಸ್ವರ್ಣಲೇಪನ ಕಾರ್ಯವನ್ನು ಅತ್ಯಂತ ಮುತುವರ್ಜಿಯಿಂದ ಮಾಡಿದ ಹೆಗ್ಗಳಿಕೆ ಹೊಂದಿದ್ದಾರೆ. ಇವರ ಕಾರ್ಯವು ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂ, ಲಂಡನ್, ಮ್ಯೂಸಿಯಂ ಆಫ್ ಸೇಕ್ರೆಡ್ ಆರ್ಟ್ಸ್, ಬೆಲ್ಜಿಯಂ, ಏಷ್ಯನ್ ಮ್ಯೂಸಿಯಂ, ಸ್ಯಾನ್ ಫ್ರಾನ್ಸಿಸ್ಕೋ ಮೊದಲಾದೆಡೆ ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಶಾಶ್ವತ ಸಂಗ್ರಹಣೆಯಾಗಿವೆ. ಭಟ್ ಅವರ ಕಾರ್ಯವು ಭಾರತದ ಶ್ರೀಮಂತ ಸಾಂಸ್ಕೃತಿಕ ಮತ್ತು ಕಲಾತ್ಮಕ ಪರಂಪರೆಯ ಸಂರಕ್ಷಣೆಯಲ್ಲಿ ಮಹತ್ವದ್ದಾಗಿದೆ.



ಪರಶುರಾಮನ ವಿಷ್ಣು ಧನುಷ್‌ನ್ನು ಎತ್ತುತ್ತಿರುವ ಶ್ರೀರಾಮ



ಶ್ರೀರಾಮ ಪಟ್ಟಾಭಿಷೇಕ



ಗಂಜೀಫಾ ರಘುಪತಿ ಭಟ್

ಕ್ರೈಂ ಬಾಕ್ಸ್

# ಆಟೋ ಕಳವು; ಖದೀಮನ ಬಂಧನ

## ಮೂರು ಪ್ಯಾಸೆಂಜರ್ ಆಟೋ ಜಪ್ತಿ



ಮೈಸೂರು, ಅ.19(ಎಸ್‌ಬಿಡಿ)– ಆಟೋ ಕಳ್ಳತನ ಮಾಡುತ್ತಿದ್ದ ಖದೀಮನನ್ನು ಮೈಸೂರಿನ ಮೇಟಗಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ತಾಲೂಕಿನ ಕಿರಣ್ ಬಂಧಿತನಾಗಿದ್ದು, ಅ.15ರಂದು ರಾಯಲ್ ಇನ್ ಜಂಕ್ಷನ್ ಬಳಿ ರಿಂಗ್ ರಸ್ತೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಆತನಿಂದ ಸುಮಾರು 2.60 ಲಕ್ಷ ರೂ. ಮೌಲ್ಯದ ಮೂರು ಪ್ಯಾಸೆಂಜರ್ ಆಟೋಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಾರಾಯಣ್ ಎಂಬುವವರು ಅ.11ರಂದು ಬಿ.ಎಂ.ಶ್ರೀ ನಗರದ 7ನೇ ಕ್ರಾಸ್‌ನಲ್ಲಿ ತಮ್ಮ ಆಟೋ ನಿಲ್ಲಿಸಿ, ಸ್ನೇಹಿತನ ಮನೆಯಲ್ಲಿ ಊಟ ಮಾಡಿ ಬರುವಷ್ಟರಲ್ಲಿ ಆಟೋ ಕಳ್ಳತನವಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಮೇಟಗಳ್ಳಿ ಠಾಣೆ ಪೊಲೀಸರು, ಪತ್ತೆ ಕಾರ್ಯಾಚರಣೆ ಆರಂಭಿಸಿದ್ದರು. ಅ.15ರಂದು ರಿಂಗ್ ರಸ್ತೆ ಅಂಡರ್‌ಬ್ರಿಡ್ಜ್ ಬಳಿ ಪೊಲೀಸರು ಗಸ್ತು ಮಾಡುವ ವೇಳೆ ನಿಂತಿದ್ದ ಆಟೋ ಬಳಿ ತೆರಳಿದ್ದಾರೆ. ಅಷ್ಟರಲ್ಲಿ ಚಾಲಕ ಆಟೋವನ್ನು ಅಲ್ಲಿಯೇ ಬಿಟ್ಟು ಓಡಲಾರಂಭಿಸಿದ್ದಾನೆ. ಆದರೆ ಪೊಲೀಸರು ಆತನನ್ನು ಬೆನ್ನತ್ತಿ ಹಿಡಿದಿದ್ದಾರೆ. ಬಳಿಕ 'ಮೊಬೈಲ್ ಕ್ರೈಮ್ ಅಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಸಿಸ್ಟಮ್(MCCTNS)' ಆ್ಯಪ್ ಮೂಲಕ ಆ ಆಟೋಗೆ ಸಂಬಂಧಿಸಿದ ವಿವರವನ್ನು ಪರಿಶೀಲಿಸಿದಾಗ, ಅದು ಕಳುವಾಗಿರುವುದೆಂದು ತಿಳಿದಿದೆ.

ಕೂಡಲೇ ಆಟೋದಲ್ಲಿದ್ದ ಆರೋಪಿ ಕಿರಣ್‌ನನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಮೂರು ಆಟೋಗಳನ್ನು ಕಳವು ಮಾಡಿರುವುದಾಗಿ ತಿಳಿಸಿದ್ದಾನೆ. ಈ ಮೂಲಕ ಮೇಟಗಳ್ಳಿ, ದೇವರಾಜ ಹಾಗೂ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ತಲಾ ಒಂದೊಂದು ಆಟೋ ಕಳವು ಪ್ರಕರಣಗಳು ಪತ್ತೆಯಾಗಿವೆ. ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ವಿಜಯನಗರ ವಿಭಾಗದ ಎಸಿಪಿ ಜಿ.ಎಸ್. ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮೇಟಗಳ್ಳಿ ಠಾಣೆಯ ಇನ್ಸ್‌ಪೆಕ್ಟರ್‌ಗಳಾದ ಆರ್. ದಿವಾಕರ್, ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಜ್ಯೋತ್ಸ್ನಾರಾಜ್, ಶಬರೀಶ್, ಎಎಸ್‌ಐ ಜೋಸೆಫ್ ನರ್ಹೋನ, ಸಿಬ್ಬಂದಿ ಕೃಷ್ಣ, ಕೆ.ಎನ್.ಹರೀಶ್, ಪರಶುರಾಮ್ ರಾಠೋಡ್, ಕೆ.ಎಸ್.ಪ್ರತಾಪ್, ಎನ್.ಆರ್.ವಿಠಲ್ ಹಾಗೂ ನಂದೀಶ್ ಭಾಗವಹಿಸಿದ್ದರು.

# ಭಾಮೈದನನ ಹತ್ಯೆ; ಭಾವ, ಮತ್ತೊಬ್ಬನ ಬಂಧನ

ಮೈಸೂರು, ಅ.19(ಎಸ್‌ಬಿಡಿ)–ಲಾಡ್ಜ್‌ನಲ್ಲಿ ಭಾಮೈದನನ್ನು ಅಮಾನುಷವಾಗಿ ಹತ್ಯೆ ಮಾಡಿದ್ದ ವ್ಯಕ್ತಿ ಹಾಗೂ ಆತನ ಸಂಬಂಧಿಯನ್ನು ಮೈಸೂರಿನ ಮೇಟಗಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪಿರಿಯಾಪಟ್ಟಣ ಮೂಲದ ಮನೋಜ್‌ನನ್ನು ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದ ಆತನ ಭಾವ ವಿನೋದ್ ಹಾಗೂ ಸಂಬಂಧಿ ಆನಂದ್‌ನನ್ನು ಎರಡು ದಿನಗಳ ಹಿಂದೆ ಬಂಧಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ವಿನೋದ್ ಹಾಗೂ ಮನೋಜ್ ನಡುವೆ ಆಸ್ತಿ ವಿಚಾರದಲ್ಲಿ ವೈಷಮ್ಯವಿತ್ತು. ಆದಾಗ್ಯೂ ಅ.13ರಂದು ಜಯದೇವ ಆಸ್ಪತ್ರೆಗೆ ಬಂದಿದ್ದ ಮನೋಜ್ ಜೊತೆ ಭಾವ ವಿನೋದ್ ಹಾಗೂ ಸಂಬಂಧಿ ಆನಂದ್ ಕೂಡ ಬಂದಿದ್ದರು. ಅಂದು ರಾತ್ರಿ ಆಸ್ಪತ್ರೆ ಸಮೀಪದ ಲಾಡ್ಜ್‌ವೊಂದರಲ್ಲಿ ಉಳಿದುಕೊಂಡಿದ್ದರು. ಆ ವೇಳೆ ಭಾವ–ಭಾಮೈದನನ ನಡುವೆ ಶುರುವಾದ ಗಲಾಟೆ ತಾರಕ್ಕೇರಿದೆ. ವಿನೋದ್ ಮಾರಕಾಸ್ತ್ರದಿಂದ ಮನೋಜ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಆತನಿಗೆ ಆನಂದ್ ಸಹಕರಿಸಿದ್ದ. ಬಳಿಕ ಇಬ್ಬರೂ ತಲೆಮರೆಸಿಕೊಂಡಿದ್ದರು. ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇನ್ಸ್‌ಪೆಕ್ಟರ್ ದಿವಾಕರ್ ನೇತೃತ್ವದಲ್ಲಿ ತನಿಖೆ ಕೈಗೊಂಡು, ಆರೋಪಿಗಳನ್ನು ಬಂಧಿಸಲಾಗಿದೆ. ವಿನೋದ್ ಪೂರ್ವನಿಯೋಜಿತವಾಗಿಯೇ ತನ್ನ ಭಾಮೈದನನ್ನು ಹತ್ಯೆ ಮಾಡಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದ್ದು, ತನಿಖೆಯಲ್ಲಿ ಸತ್ಯಾಸತ್ಯತೆ ತಿಳಿಯಬೇಕಿದೆ.



# ಶಾಲೆ ಬಳಿ ಮಾದಕ ವಸ್ತು ಮಾರಾಟ ಯತ್ನ; ಆರೋಪಿ ಬಂಧನ



ಮೈಸೂರು, ಅ.19(ಎಸ್‌ಬಿಡಿ)– ಶಾಲೆ ಬಳಿ ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮಹದೇಶ್ವರ ಬಡಾವಣೆಯ ಭೈರವೇಶ್ವರ ಶಾಲೆ ಸಮೀಪದ ಗೋಮಾಳದಲ್ಲಿ ಅ.17ರಂದು ವ್ಯಕ್ತಿಯೊಬ್ಬ ಎಂಡಿಎಂಎ ಮಾದಕ ವಸ್ತುವನ್ನು ಇಟ್ಟುಕೊಂಡು ಮಾರಾಟಕ್ಕೆ ಯತ್ನಿಸುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ. ಆತನ ಬಳಿಯಿದ್ದ 1 ಲಕ್ಷಕ್ಕೂ ಹೆಚ್ಚು ಮೌಲ್ಯದ 35 ಗ್ರಾಂ ಎಂಡಿಎಂಎ ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಮಕ್ಕಳ ಬಗ್ಗೆ ಎಚ್ಚರವಿರಲಿ:** ಶಾಲೆ ಬಳಿಯೇ ಮಾದಕ ವಸ್ತು ಮಾರಾಟಕ್ಕೆ ಯತ್ನಿಸಿರುವುದು ನಿಜಕ್ಕೂ ಆತಂಕಕಾರಿ ಸಂಗತಿ. ಅಲ್ಲದೆ ಸುತ್ತಮುತ್ತ ಕಾಲೇಜು ಹಾಗೂ ಹಾಸ್ಟೆಲ್‌ಗಳಿವೆ. ಖದೀಮರು ವಿದ್ಯಾರ್ಥಿಗಳನ್ನು ಮಾದಕ ವಸ್ತು ನಶೆಯ ಬಲೆಗೆ ಬೀಳಿಸಿಕೊಂಡು ತಮ್ಮ ವ್ಯಾಪಾರ ವಿಸ್ತರಿಸಿಕೊಳ್ಳಲು ಮುಂದಾಗಿದ್ದಾರೆ ಎನ್ನಲಾಗಿದೆ. ಭವಿಷ್ಯದ ಪ್ರಜೆಗಳು ವಿದ್ಯಾರ್ಥಿ ದೆಸೆಯಲ್ಲೇ ಮಾದಕ ವ್ಯಸನಿಗಳಾದರೆ ದೇಶಕ್ಕೇ ನಷ್ಟ. ಮಾದಕ ವಸ್ತುಗಳ ಘಾಟು ಪಸರಿಸುವ ದುಷ್ಕರ್ಮಿಗಳನ್ನು ಪೊಲೀಸರು ಹೆಡೆಮುರಿ ಕಟ್ಟಬೇಕಿದೆ. ಜೊತೆಗೆ ಮಕ್ಕಳ ಬಗ್ಗೆ ಪೋಷಕರು ಹಾಗೂ ಕಾಲೇಜು ಆಡಳಿತ ಮಂಡಳಿಯವರೂ ನಿಗಾ ವಹಿಸಬೇಕಿದೆ. ಮುಖ್ಯವಾಗಿ ಯಾವುದೇ ಕೆಟ್ಟ ಚಟಕ್ಕೆ ಬಲಿಯಾಗಬಾರದೆಂಬ ಅರಿವು ವಿದ್ಯಾರ್ಥಿಗಳಿಗಿರಬೇಕಿದೆ.

# ಲಾಭದ ಆಸೆಗೆ ಬಿದ್ದು ಆನ್‌ಲೈನ್ ಮೂಲಕ ಹಣ ಹೂಡಿದ ಮತ್ತೆ ಮೂವರಿಗೆ ಪಂಗನಾಮ

## ಲಕ್ಷ ಲಕ್ಷ ಕಳೆದುಕೊಂಡವರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಅ.19(ಎಸ್‌ಬಿಡಿ)– ಸೈಬರ್ ಕ್ರೈಂ ದಿನೇ ದಿನೆ ಹೆಚ್ಚುತ್ತಿದ್ದು, ವಿವಿಧ ರೀತಿಯಲ್ಲಿ ಸಾರ್ವಜನಿಕರ ಸುಲಿಗೆ ಮಾಡಲಾಗುತ್ತಿದೆ. ಅದರಲ್ಲೂ ವಿದ್ಯಾವಂತರನ್ನೇ ಸುಲಭವಾಗಿ ವಂಚಿಸಲಾಗುತ್ತಿದೆ. ಆನ್‌ಲೈನ್ ಮೂಲಕ ಹಣ ಹೂಡಿಕೆ ಮಾಡಿ, ಮೋಸ ಹೋಗುತ್ತಿದ್ದಾರೆ. ಹೀಗೆ ಹಣ ಕಳೆದುಕೊಂಡಿರುವ ಮೂವರು ಒಂದೇ ದಿನ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

**ಪೊಲೀಸ್ ಸೋಗಿನಲ್ಲಿ ಸುಲಿಗೆ:** ನೇತಾಜಿನಗರದ ವಿದ್ಯಾರ್ಥಿಯೋರ್ವನಿಗೆ ದೆಹಲಿ ಪೊಲೀಸ್ ಸೋಗಿನಲ್ಲಿ 7.18 ಲಕ್ಷ ರೂ. ವಂಚಿಸಲಾಗಿದೆ. ಅ.8ರಂದು ವಿದ್ಯಾರ್ಥಿ ಮೊಬೈಲ್‌ಗೆ ಕರೆ ಮಾಡಿದ ಅನಾಮಧೇಯ, ಮಾದಕ ವಸ್ತು ಸಾಗಾಣಿಕೆ ಬಗ್ಗೆ ಮಾತನಾಡಿ, ದೆಹಲಿ ಪೊಲೀಸ್ ಠಾಣೆಗೆ ಕಾಲ್ ಕನೆಕ್ಟ್ ಮಾಡುತ್ತೇನೆ ಎಂದಿದ್ದಾನೆ. ಬಳಿಕ ವಾಟ್ಸಾಪ್ ವಿಡಿಯೋ ಕಾಲ್ ಮಾಡಿದ ಮತ್ತೋರ್ವ, ಹ್ಯೂಮನ್ ಟ್ರಾಫಿಕಿಂಗ್ ಮತ್ತು ಮನಿಲಾಂಡ್ರಿಂಗ್ ಕೇಸ್, ಅಲ್ಲದೆ 8 ಕೋಟಿ ರೂ. ವಂಚನೆ ಪ್ರಕರಣದಲ್ಲಿ ನೀವು ಆರೋಪಿಯಾಗಿದ್ದೀರಿ. ನಿಮ್ಮ ಹೆಸರಿನಲ್ಲಿರುವ ಎಲ್ಲಾ ಹಣವನ್ನು ಲೀಗಲೈಸ್ ಮಾಡಬೇಕೆಂದು ಹಣ ಪಡೆದು, ವಂಚಿಸಿದ್ದಾನೆ.

**ಟ್ರೇಡಿಂಗ್ ನೆಪದಲ್ಲಿ ಮೋಸ:** ಬೋಗಾದಿಯ 58 ವರ್ಷದ ವ್ಯಕ್ತಿಯೊಬ್ಬರು ಸ್ಟಾಕ್ ಟ್ರೇಡಿಂಗ್ ಪ್ರೋಸೆಸ್ ಅಂಡ್ ಪ್ರೊಸೀಜರ್ ವೆಬ್ ಸೈಟ್‌ಗಳ ಬಗ್ಗೆ ಅಂತರ್ಜಾಲದಲ್ಲಿ ಹುಡುಕಾಟ ನಡೆಸುತ್ತಿದ್ದ ವೇಳೆಯೇ ಅವರಿಗೆ ವಾಟ್ಸಾಪ್ ಮೆಸೇಜ್ ಬಂದಿದೆ. ನಂತರ ಅವರನ್ನು ಮೋಸದ ಬಲೆಗೆ ಕೆಡವಿ, ಪೇಟಿಎಂ ಮನಿ ಲಿಮಿಟೆಡ್ ಕಂಪನಿ ಹೆಸರಿನಲ್ಲಿ ಒಂದು ಆ್ಯಪ್ ಡೌನ್‌ಲೋಡ್ ಮಾಡಿಸಲಾಗಿದೆ. ಒಂದು ತಿಂಗಳ ಅವಧಿಯಲ್ಲಿ ಒಟ್ಟು 19.56 ಲಕ್ಷ ರೂ. ಹೂಡಿಕೆ ಮಾಡಿಸಿ, ಲಾಭಾಂಶವನ್ನೂ ತೋರಿಸಿದ್ದಾರೆ. ಆದರೆ ಹಣವನ್ನು ವಿತ್ ಡ್ರಾ ಮಾಡಲು ಮುಂದಾದಾಗ ಕ್ರೆಡಿಟ್ ಸ್ಕೋರ್ ಈಸ್ ಲೆಸ್ ಎಂದು ಬಂದಿದ್ದರಿಂದ ಮೋಸ ಹೋಗಿರುವುದು ಗೊತ್ತಾಗಿದೆ.

**ಅಧಿಕ ಲಾಭದಾಸೆಯ ಬಲೆ:** ಭೈರವೇಶ್ವರನಗರದ ಖಾಸಗಿ ಕಂಪನಿ ಉದ್ಯೋಗಿ ಆನ್‌ಲೈನ್ ಮೂಲಕ ಹೂಡಿಕೆ ಮಾಡಿದ್ದ 12 ಲಕ್ಷಕ್ಕೆ 53 ಲಕ್ಷ ಲಾಭ ತೋರಿಸಿ, ವಂಚಿಸಲಾಗಿದೆ. ಅನಾಮಧೇಯ ಸಂಖ್ಯೆಯಿಂದ ಸಂದೇಶ ಬಂದ ನಂತರ ಅವರ ಮೊಬೈಲ್ ಸಂಖ್ಯೆಯನ್ನು ಒಂದು ವಾಟ್ಸಾಪ್ ಗ್ರೂಪ್‌ಗೆ ಆಡ್ ಮಾಡಲಾಗಿದೆ. ಅದರಲ್ಲಿ ಹಂಚಿಕೆಯಾಗುತ್ತಿದ್ದ ಟ್ರೇಡಿಂಗ್‌ಗೆ ಸಂಬಂಧಿಸಿದ ಸಂದೇಶಗಳನ್ನು ನೋಡಿ ಇವರಿಗೂ ಅಧಿಕ ಲಾಭದ ಆಸೆ ಹುಟ್ಟಿದೆ. ಅನಾಮಧೇಯ ಕಳುಹಿಸಿದ್ದ ಲಿಂಕ್ ಮೂಲಕ ಟ್ರೇಡಿಂಗ್ ಖಾತೆ ತೆರೆದು, 12.80 ಲಕ್ಷ ರೂ. ಹಣ ಹೂಡಿಕೆ ಮಾಡಿದ್ದಾರೆ. ಬಳಿಕ ಅವರ ಟ್ರೇಡಿಂಗ್ ಖಾತೆಯಲ್ಲಿ 53 ಲಕ್ಷ ಪ್ರಾಫಿಟ್ ಬಂದಿರುವುದಾಗಿ ತೋರಿಸಿದೆ. ಅದನ್ನು ವಿತ್‌ಡ್ರಾ ಮಾಡಲು ಹೋದಾಗ 18 ಲಕ್ಷ ರೂ. ತೆರಿಗೆ ಪಾವತಿಸುವಂತೆ ತಿಳಿಸಿದ್ದರಿಂದ ಅನುಮಾನಗೊಂಡು ದೂರು ನೀಡಿದ್ದಾರೆ.

## ನಕ್ಕರೆ ಅದೇ ಸ್ವರ್ಗ

**ಕೊನೆ ಆಸೆ ಕೇಳಿ ಜೈಲರ್ ಸುಸ್ತು**

ಜೈಲರ್ : ನಾಳೆ ನಿನ್ನನ್ನು ಗಲ್ಲಿಗೇರಿಸುತ್ತೇವೆ. ಕೊನೆ ಆಸೆ ಏನು ಹೇಳು?
ಕೈದಿ : ತಲೆ ಕೆಳಗೆ ಮಾಡಿ, ಕಾಲು ಮೇಲೆ ಮಾಡಿ ನೇಣು ಹಾಕಿ

ಮೈಸೂರು ಮಿತ್ರ

ಭಾನುವಾರ, 20 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತವಾಹಿನಿ.........**

ಕಂಬಳಿ ಹುಳುವಿನಿಂದಲೇ ಚಿಟ್ಟೆಯಾಗುವುದೆಂದು ಗೊತ್ತಿದ್ದರೂ,
ಕಂಬಳಿ ಹುಳುವನ್ನು ಯಾರೂ ಇಷ್ಟ ಪಡುವುದಿಲ್ಲ.
ಹಾಗೆಯೇ ನಾವೆಷ್ಟೇ ಒಳ್ಳೆಯವರಾಗಿದ್ದರೂ ಜೀವನದಲ್ಲಿ
ಯಶಸ್ವಿಯಾಗುವವರೆಗೆ ನಮ್ಮನ್ನು ಯಾರೂ ಆದರಿಸುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರೋಲ್ಲ

## ನಿಮ್ಮ ಪತ್ರಗಳು

### ■ ಇದು ಯಾವೂರ ನ್ಯಾಯ ಸ್ವಾಮಿ?

ಮಾನ್ಯರೆ,

ಬರುವ ನವೆಂಬರ್ 13 ರಂದು ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾಂವಿ ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆಯಲಿದೆ.

ಶಿಗ್ಗಾಂವಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚನ್ನಪಟ್ಟಣ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಸಂಡೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಇ.ತುಕಾರಾಂ ಬಳ್ಳಾರಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿರುವುದು ಸರಿಯಷ್ಟೆ. ಇವರ ಪೈಕಿ ಹೆಚ್.ಡಿ. ಕುಮಾರಸ್ವಾಮಿಯವರು ಕೇಂದ್ರ ಸಚಿವ ಕೂಡ ಆಗಿದ್ದಾರೆ. ಆದರೆ ಇವರೆಲ್ಲಾ ತಮ್ಮ ತೆವಲಿಗೆ ಅಥವಾ ಪಕ್ಷದ ಆಣತಿಯಂತೆ ಲೋಕಸಭೆಗೆ ಸ್ಪರ್ಧಿಸಿ ಆಯ್ಕೆಯಾಗಿದ್ದು, ಇವರಿಂದ ತೆರವಾಗಿರುವ 3 ವಿಧಾನಸಭಾ ಕ್ಷೇತ್ರಗಳಿಗೆ ಸರ್ಕಾರಿ ಬೊಕ್ಕಸದಿಂದ ಅಂದರೆ ತೆರಿಗೆದಾರರ ಹಣ ಖರ್ಚು ಮಾಡಿ ಚುನಾವಣೆ ನಡೆಸಬೇಕು. ಇದು ಯಾವೂರ ನ್ಯಾಯ ಸ್ವಾಮಿ ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ■ ರಾಜ್ಯ ಸರ್ಕಾರ ಇದಕ್ಕೆ ಉತ್ತರಿಸುವುದೇ?

ಮಾನ್ಯರೆ,

ವಿಜಯದಶಮಿ ಜಾಹೀರಾತಿನಂತೆ ಅ. 17ರ ವಾಲ್ಮೀಕಿ ಜಯಂತಿಯ ಜಾಹೀರಾತು ಕೂಡ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗಿರುವುದಿಲ್ಲ. ಬೇರೆ ಪತ್ರಿಕೆಗಳಲ್ಲಿ ಪೂರ್ಣ ಪುಟ ಜಾಹೀರಾತು ನೀಡಿರುವ ಸರ್ಕಾರ ಮತ್ತೆ 'ಮೈಸೂರು ಮಿತ್ರ' ಪತ್ರಿಕೆಗೆ ಜಾಹೀರಾತು ನೀಡಿರುವುದಿಲ್ಲ. ಇದಕ್ಕೆ ಕಾರಣವೇನು? ಎಂಬ ಬಗ್ಗೆ ವಾರ್ತಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತಗಳ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದಿಂದ ಜಾಹೀರಾತು ನೀಡಲು ಯಾವ ರೀತಿ ಮಾರ್ಗ ಸೂಚಿ ಅನುಸರಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ನೀಡಲು ಕೋರಲಾಗಿದೆ. ಇದಕ್ಕೆ ಕಾರಣರು ಯಾರು? ಎನ್ನುವುದು ಜನರಿಗೆ ತಿಳಿಯಬೇಕಾಗಿರುವುದು ಜನರ ಮಾಹಿತಿ ಹಕ್ಕು

–ಮುಳ್ಳೂರು ಪ್ರಕಾಶ್, ಕನಕದಾಸನಗರ. ಮೈಸೂರು.

### ■ ಸಮಾಜಕ್ಕೆ ಜಗಳ ತೋರಿಸುವುದು ಒಂದು ಸ್ಪರ್ಧೆಯೇ?

ಮಾನ್ಯರೆ,

ಕನ್ನಡ ಮಾಧ್ಯಮದ ಖಾಸಗಿ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳಲ್ಲಿ ಒಂದಾಗಿರುವ 'ಬಿಗ್ ಬಾಸ್' ರಿಯಾಲಿಟಿ ಶೋ ಎಂದು ಹೆಸರಿನಿಂದ ಮನೆ ಮಾತಾಗಿದ್ದು, ಈ ರಿಯಾಲಿಟಿ ಶೋ ಒಂದನ್ನು ಇತ್ತೀಚಿನ ದಿನಗಳಲ್ಲಿ ಕುಟುಂಬ ಸಮೇತರಾಗಿ ಕುಳಿತು ಚಿಕ್ಕಮಕ್ಕಳು, ಹಿರಿಯ ನಾಗರಿಕರು, ಅಧಿಕಾರಿಗಳು, ವಕೀಲರು, ಹದಿಹರೆಯದ ಯುವಕ–ಯುವತಿಯರು, ಮಹಿಳೆಯರು ಸೇರಿದಂತೆ ಇತರರು ಒಟ್ಟಾಗಿ ಕುಳಿತು ವೀಕ್ಷಣೆ ಮಾಡುತ್ತಾರೆ. ಅದೆಲ್ಲವನ್ನೂ ಮರೆತು ಬಿಗ್‌ಬಾಸ್ 11ರ ಸೀಸನ್‌ನಲ್ಲಿ ಸ್ಪರ್ಧೆಯಲ್ಲಿರುವ ಕೆಲ ಸ್ಪರ್ಧಾರ್ಥಿಗಳು, ಅವಾಚ್ಯ, ಅಶ್ಲೀಲ ಪದಗಳ ಬಳಕೆ ಮಾಡಿ ಜಗಳವಾಡುವಾಗ ಜಗಳದಲ್ಲಿ ಹೋಗಲೋ, ಬಾರಲೋ, ಹೊರಗೆ ಬಾ ತೋರಿಸ್ತಿನಿ, ತೊಡೆ ತಟ್ಟುವುದು, ಇಂತಹ ಘಟನೆಯ ಗಲಾಟೆಗಳು ಸಮಾಜಕ್ಕೆ ಬೇಕಾಗಿದಿಯೇ? ಕೂಡಲೇ ಸಂಬಂಧಪಟ್ಟವರು ಸಮಾಜದಲ್ಲಿ ಅನೇಕ ಸ್ಪರ್ಧೆಗಳಿದ್ದು ಅವುಗಳಲ್ಲಿ ಮಾದರಿಯಾಗಿರುವ ಸ್ಪರ್ಧೆಗಳನ್ನು ಗಮನಿಸಬೇಕಾಗಿದೆ. ಇಂತಹ ಜಗಳಗಳೆಲ್ಲವೂ ಸಮಾಜದಲ್ಲಿರುವ ಇಂದಿನ ಯುವ ಪೀಳಿಗೆಗೆ ಮುಂದೆ ದಿನಗಳಲ್ಲಿ ಯಾವ ಸಂದೇಶ ಸಾರುವುದು? ಆದ್ದರಿಂದ ಈ ರಿಯಾಲಿಟಿ ಶೋಗೆ ಸಂಬಂಧಪಟ್ಟವರು ಸರಿಯಾಗಿ ಆಟ ಆಡುವ ಸ್ಪರ್ಧಾರ್ಥಿಗಳಿಗೆ ಅವಕಾಶ ಕಲ್ಪಿಸಿ, ಇಲ್ಲದಿದ್ದರೆ ಈ ರಿಯಾಲಿಟಿ ಶೋ ನಿಲ್ಲಿಸಬೇಕಾಗಿ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

### ■ ಮೈಸೂರು ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಅಶೋಕ ರಸ್ತೆಯಲ್ಲಿ ಎಸ್‌ಬಿಐ ವೃತ್ತದಿಂದ ದೊಡ್ಡ ಗಡಿಯಾರದವರೆಗೆ ವಾಹನಗಳ ಸಂಚಾರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿವೆ. ಮೊದಲೇ ಕಿರಿದಾದ ರಸ್ತೆ. ಆದ್ದರಿಂದ ರಸ್ತೆಯ ಎರಡೂ ಕಡೆಗಳಲ್ಲಿ ಕಾರುಗಳು ಮತ್ತು ದ್ವಿಚಕ್ರ ವಾಹನಗಳ ನಿಲುಗಡೆಯಿಂದಾಗಿ ಮೈಸೂರು ನಗರ ಸಾರಿಗೆ ಬಸ್‌ಗಳ ಚಾಲಕರಿಗೆ ವಾಹನ ಚಾಲನೆ ಮಾಡುವುದು ತುಂಬಾ ಕಷ್ಟಕರವಾಗಿದೆ. ಮೈಸೂರು ಪುರಭವನ ಆವರಣದಲ್ಲಿ ವಿಶಾಲವಾದ ಜಾಗವಿದ್ದು ಅಲ್ಲಿಯೇ ವಾಹನಗಳನ್ನು ನಿಲ್ಲಿಸುವಂತೆ ನಗರ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿ ವಾಹನ ಸಂಚಾರ ಸುಗಮಗೊಳಿಸಲು ಮನವಿ. – ಪ್ರಜ್ಞಾವಂತ ನಾಗರಿಕರು, ಮೈಸೂರು.

### ■ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಆಯ್ಕೆ ಪಾರದರ್ಶಕವಾಗಿರಲಿ

ಮಾನ್ಯರೆ,

ಮೈಸೂರು ಜಿಲ್ಲಾಡಳಿತ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪ್ರತಿ ವರ್ಷ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸುವ ಪರಿಪಾಠವನ್ನು ನಡೆಸಿಕೊಂಡು ಬಂದಿದೆ. ಇದು ಸಾಧಕರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಶ್ಲಾಘನೀಯ ಕೆಲಸ. ವಿಷಾದದ ಸಂಗತಿ ಏನೆಂದರೆ ಜಿಲ್ಲಾಡಳಿತವು ಈ ಸಾಧಕರನ್ನು ಆಯ್ಕೆ ಮಾಡುವಾಗ ಆಯಾ ಕ್ಷೇತ್ರಗಳ ತಜ್ಞರುಗಳನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡದೆ ಕೇವಲ ಕನ್ನಡಪರ ಚಳವಳಿಗಾರರನ್ನು ಮಾತ್ರ ಆಹ್ವಾನಿಸಿ ತನಗೆ ಬಂದಿರುವ ಅರ್ಜಿಗಳನ್ನು ಅವರ ಮುಂದೆ ವಿಲೇವಾರಿ ಮಾಡುತ್ತಾ ಸಾಧಕರನ್ನು ಆಯ್ಕೆ ಮಾಡುತ್ತದೆ. ಇದರಿಂದ ಪ್ರಶಸ್ತಿಯ ಮೌಲ್ಯ ಕುಸಿಯುವುದಿಲ್ಲವೇ? ಕಲೆ, ಶಿಕ್ಷಣ, ಸಾಹಿತ್ಯ, ಕ್ರೀಡೆ, ಯೋಗ, ರಂಗಭೂಮಿ, ಸಮಾಜ ಸೇವೆ ಮುಂತಾದ ಕ್ಷೇತ್ರಗಳ ಸಾಧಕರನ್ನು ಗುರುತಿಸುವಾಗ ಈ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದ ನುರಿತ ತಜ್ಞರುಗಳನ್ನು ಒಳಗೊಂಡ ಸಮಿತಿ ರಚನೆಯಾದರೆ ಮಾತ್ರ ಈ ಪ್ರಶಸ್ತಿಯ ಆಯ್ಕೆಗೆ ನ್ಯಾಯ ಒದಗಿಸಿದಂತಾಗುತ್ತದೆ. ಅದು ಬಿಟ್ಟು ಕೇವಲ ಕನ್ನಡಪರ ಹೋರಾಟಗಾರರನ್ನು ಒಳಗೊಂಡ ಸಮಿತಿಯಿಂದ ಈ ಆಯ್ಕೆ ನಡೆಸುವುದು ಎಷ್ಟು ಸಮಂಜಸ? ಹಾಗೆಯೇ ಪ್ರಶಸ್ತಿಗಳನ್ನು ಆಯ್ಕೆ ಮಾಡುವಾಗ ಜಿಲ್ಲಾ ಮಟ್ಟದ ಸಾಧಕರ ಜೊತೆಗೆ ತಾಲೂಕು ಮಟ್ಟವನ್ನು ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಪ್ರತಿಭೆ ಆಯ್ಕೆಯಲ್ಲಿ ಸಮಗ್ರವಾದ ನ್ಯಾಯ ದೊರಕಿದಂತಾಗುತ್ತದೆ. ಜಿಲ್ಲಾಡಳಿತ ಆತ್ಮಾವಲೋಕನ ಮಾಡಿಕೊಂಡು ಸಾಧಕರ ಆಯ್ಕೆ ಪಾರದರ್ಶಕವಾಗಿ ನಡೆಸಲು ಮನವಿ.

– ಎನ್.ಅನಂತ, ಯೋಗ ಶಿಕ್ಷಕ, ಹಿಮಾಲಯ ಪ್ರತಿಷ್ಠಾನ ಮೈಸೂರು.

## ನಾದ ಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

# ಆನೆಗಳ ಬೆನ್ನೇರಿ...!

(ಅಕ್ಟೋಬರ್ 6ರ ಸಂಚಿಕೆಯಿಂದ)

10000 ಪೌಂಡ್ ತೂಕದ ಈ ಮಿತ್ರ ಪ್ರಾಣಿಗಳು ಪ್ರಾಚೀನ ಕಾಲದಿಂದಲೂ ಮನುಷ್ಯನ ಬದುಕಿನೊಡನೆ ಸಹಕರಿಸುತ್ತಲೇ ಬಂದಿವೆ. ಭೂಮಿಯ ಮೇಲೆ ಬೆಳೆಯುವ ಸಸ್ಯಗಳನ್ನು ತಿಂದು ಬದುಕುವ ಈ ನಿರುಪದ್ರವಿ ಹಾಗೂ ಸ್ನೇಹಮಯಿ ಪ್ರಾಣಿಯನ್ನು ಮಾನವ ತನ್ನ ಸ್ವಾರ್ಥಕ್ಕಾಗಿ ಸಾಕಷ್ಟು ದುಡಿಸಿಕೊಂಡಿದ್ದಾನೆ. ಸ್ವಚ್ಛಂದವಾಗಿ ಕಾಡಿನಲ್ಲಿ ವಿಹರಿಸುತ್ತ, ತನ್ನ ಕುಟುಂಬದೊಡನೆ ಪ್ರೀತಿಯಿಂದ ಇರುತ್ತ, ಪರಿಸರದ ಸಮತೋಲನಕ್ಕೂ ತನ್ನ ಕಾಣ್ಕೆಯನ್ನು ನೀಡುತ್ತ, ಕಾಡಿನ ಕ್ರೂರಪ್ರಾಣಿಗಳೊಡನೆ ಸೆಣಸುತ್ತ ಪ್ರಕೃತಿಯೊಡನೆ ಒಂದಾಗಿ ಬದುಕುವ ಈ ಬೃಹತ್ ಸಸ್ಯಾಹಾರಿಗಳನ್ನು ಮಾನವ ಯಾವಾಗ ತನ್ನ ಕೆಲಸಕ್ಕಾಗಿ ಬಳಸಿಕೊಳ್ಳತೊಡಗಿದನೋ, ಅವುಗಳು ಸೆರೆಯಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಒಗ್ಗಿಕೊಂಡುವು.

ಅತ್ಯಂತ ಬುದ್ಧಿವಂತ ಜೀವಿಗಳಾದ ಆನೆಗಳಿಗೆ ನಮ್ಮಂತೆಯೇ ಭಾವನೆಗಳು, ಮನಸ್ಸು ಮತ್ತು ನೆನಪಿನ ಶಕ್ತಿ ಇದೆ. ಇವುಗಳ ಬಗ್ಗೆ ಅರಿಯುತ್ತಾ ಹೋದಂತೆ ಅನೇಕ ಕುತೂಹಲಕರ ವಿಚಾರಗಳು ನಮ್ಮ ಮುಂದೆ ತೆರೆದುಕೊಳ್ಳುತ್ತಾ ಹೋಗುತ್ತದೆ. ಮನುಷ್ಯರಂತೆ ಆನೆಗಳೂ ಅನೇಕ ಧ್ವನಿಗಳನ್ನು ಹೊರಡಿಸಬಲ್ಲವು. ಅವುಗಳ ಘೀಳಿಡುವಿಕೆ ಪರಿಚಿತವಾದುದು. ಆದರೆ ಅವುಗಳ ಕಂಠವು ಸುಮಾರು ಹತ್ತು ಸ್ಥಾಯಿಗಳಲ್ಲಿ ಶಬ್ದಗಳನ್ನು ಹೊರಡಿಸಬಲ್ಲವು! ಸಾಮಾನ್ಯವಾಗಿ ಮಾನವ ಗಾಯಕರು ಮೂರು ಅಥವಾ ಮೂರೂವರೆ ಸ್ಥಾಯಿಗಳಲ್ಲಿ ಹಾಡಬಲ್ಲರು. ಆದರೆ ಅವು ಈ ಹತ್ತು ಸಪ್ತಕಗಳಲ್ಲಿ ಅಳಬಲ್ಲವು, ಗೊರಗೊರ ಎನ್ನಬಲ್ಲವು, ಗುಟುರು ಹಾಕಬಲ್ಲವು, ಕೆಲವೊಮ್ಮೆ ಹಕ್ಕಿಗಳಂತೆ ಚಿಲಿಪಿಲಿ ಸದ್ದನ್ನೂ ಮಾಡಬಲ್ಲವು.

ದೊಡ್ಡ ದೇಹದ ಆನೆಯ ಪುಟ್ಟ ಕಣ್ಣುಗಳನ್ನು ಗಮನಿಸಿದ್ದೀರಿ. ಮಬ್ಬು ಬೆಳಕಿನಲ್ಲೂ ಸ್ಪಷ್ಟವಾಗಿ ನೋಡಬಲ್ಲವು ಅವು. ಮನುಷ್ಯರ ಕಣ್ಣಿನ ರೆಟಿನಾದಲ್ಲಿ ಮೂರು ಬಣ್ಣಗಳನ್ನು ಅರಿಯಲು ಮೂರು ರೀತಿಯ ಕೋನ್ ಸೆಲ್‌ಗಳು ಇದ್ದರೆ, ಆನೆಗೆ ಎರಡೇ ಕೋನ್ ಸೆಲ್‌ಗಳು ಇವೆ. ಹೀಗಾಗಿ ಅವು ಕೆಂಪು ಮತ್ತು ಹಸಿರು ಬಣ್ಣಗಳನ್ನು ಮಾತ್ರ ಗ್ರಹಿಸುತ್ತವೆ. ತಮ್ಮ ನಡಿಗೆಯ ಅರ್ಧಭಾಗವನ್ನು ಬೆಳಗಿನ ಬೆಳಕಿನಲ್ಲೂ ಮತ್ತರ್ಧವನ್ನು ರಾತ್ರಿಯ ಕತ್ತಲಿನಲ್ಲೂ ಮಾಡುತ್ತವೆ. ಚಂದ್ರನಿಲ್ಲದ ರಾತ್ರಿಯಲ್ಲಿ ಮಾತ್ರ ಅವಕ್ಕೆ ಏನೂ ಕಾಣಿಸದು. ಆನೆಗಳಿಗೆ ಧೂಳು, ಕಸದಿಂದ ರಕ್ಷಿಸಿಕೊಳ್ಳಲು ಅದರ ಉದ್ದನೆಯ ಕೂದಲ ಕಣ್ಣರೆಪ್ಪೆಯ ಜೊತೆಗೆ ಮತ್ತೊಂದು ರೆಪ್ಪೆ ಇರುತ್ತದೆ! ಆನೆಯ ರೋಗ ಪತ್ತೆ ಹಚ್ಚುವಾಗಲೂ ಅವುಗಳ ಕಣ್ಣಿನ ಬಣ್ಣ ಮತ್ತು ಅದರ ಸುತ್ತಲಿನ ಚರ್ಮದ ಸ್ಥಿತಿ ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಅವುಗಳ ಮುಂಗಾಲಿನಲ್ಲಿ 5 ಮತ್ತು ಹಿಂಗಾಲಿನಲ್ಲಿ 4 ಉಗುರುಗಳಿರುತ್ತವೆ. ವೈದ್ಯರು ಅದರ ಆರೋಗ್ಯ ಪರೀಕ್ಷಿಸಲು ಅವುಗಳ ಮುಂಗಾಲ ಮೇಲೆ ಧೂಳನ್ನೆರಚುತ್ತಾರೆ. ಅದು ಮೆತ್ತಿಕೊಂಡರೆ, ಆರೋಗ್ಯವಾಗಿದೆ ಎಂದರ್ಥ. ಮೆತ್ತುಕೊಳ್ಳದಿದ್ದಲ್ಲಿ ಅನಾರೋಗ್ಯ ಎಂದರ್ಥ. ಆನೆಗಳ ಮೇಲ್ತುಟಿ ಮತ್ತು ಮೂಗಿನ ಮುಂದುವರೆದ ಭಾಗವಾದ ಸೊಂಡಿಲು, ವಾಸನೆ, ಉಸಿರಾಟ, ಕುಡಿಯಲು ಮತ್ತು ಘೀಳಿಡುವುದನ್ನು ಬಿಟ್ಟು, ಇನ್ನೂ ಯಾವೆಲ್ಲ ಉದ್ದೇಶಗಳಿಗೆ ಬಳಕೆಯಾಗುತ್ತವೆ ಗೊತ್ತೇ? ಅವು ಪರಸ್ಪರ ಭೇಟಿಯಾದಾಗ ಹೋ ನಿನ್ನನ್ನು ನೋಡಿ ಸಂತೋಷವಾಯಿತು? ಎನ್ನಲು, ಕೆಸರಿನಲ್ಲಿ ಸಿಕ್ಕಿಕೊಂಡ ಮರಿಯನ್ನೆತ್ತಲು, ತಡವಲು, ಹುಡುಕಲು, ನೂಕಲು, ಬಡಿಯಲು, ಭರವಸೆ ನೀಡಲು ಮತ್ತು ಹಸ್ತಲಾಘವ ನೀಡಲು ಸೊಂಡಿಲು ಬಳಕೆಯಾಗುತ್ತದೆ! ತನ್ನ ಸ್ನೇಹಿತನನ್ನು ಭೇಟಿಯಾದಾಗ ತನ್ನ ಸೊಂಡಿಲ ತುದಿಯನ್ನು ಸ್ನೇಹಿತನ ಬಾಯಲ್ಲಿ ಇಡಬಹುದು! ಅಥವಾ ಎರಡೂ ಆನೆಗಳು ಸೊಂಡಿಲನ್ನು ಬಳ್ಳಿಯಂತೆ ಸುತ್ತಬಹುದು! ಈ ಸೊಂಡಿಲು ಎಷ್ಟು ಸೂಕ್ಷ್ಮವೋ ಅಷ್ಟೇ ಸದೃಢವೂ ಹೌದು. ಅದು 600 ಪೌಂಡುಗಳಷ್ಟು ಭಾರವನ್ನೂ ಎತ್ತಬಲ್ಲದು ಮತ್ತು ಅದರ ತುದಿಯಲ್ಲಿರುವ ಬೆರಳಿನಂತಹ ಭಾಗದಿಂದ ಒಂದು ಚಿಕ್ಕ ಹುಲ್ಲಿನ ಗರಿಕೆಯನ್ನೂ ಕಿತ್ತಬಲ್ಲವು. ಅಷ್ಟೇ ಅಲ್ಲ, ಸೊಂಡಿಲಿನಲ್ಲಿ ಅಡಗಿರುವ ವಿಶೇಷ ಸೆಲ್‌ಗಳಿಂದ ಅತ್ಯಂತ ಸೂಕ್ಷ್ಮ ತರಂಗಗಳನ್ನು ಅವು ಗ್ರಹಿಸಬಲ್ಲವು. ಸೊಂಡಿಲಷ್ಟೇ ಅಲ್ಲದೆ ಆನೆಗಳ ಪಾದಗಳೂ ತರಂಗಗಳನ್ನು ಗ್ರಹಿಸಬಲ್ಲವು. ಕೆಲವೊಮ್ಮೆ ಆನೆಗಳು ಆಳವಾದ ಗುಡುಗಿನಂತಹ ಸದ್ದನ್ನು ಮಾಡುತ್ತವೆ. ಈ ಸದ್ದು ಗಾಳಿಯಷ್ಟೇ ಅಲ್ಲದೆ ಭೂಮಿಯ ಮೂಲಕವೂ ಚಲಿಸುತ್ತದೆ. ಮನುಷ್ಯರ ಕಿವಿಗಳು ಗ್ರಹಿಸಲಾಗದ ಈ ಶಬ್ದಗಳನ್ನು ದೂರದಲ್ಲಿರುವ ಆನೆಗಳೊಡನೆ ಮಾತನಾಡಬೇಕಾಗಿ ಬಂದಾಗ ಹೊರಡಿಸುತ್ತವೆ. ಈ ಶಬ್ದದ ಅಲೆಗಳು ಭೂಮಿಯ ಮುಖಾಂತರ ಗಾಳಿಗಿಂತ ದೂರದವರೆಗೆ ಹೋಗಬಲ್ಲದು. ಇಂತಹ ಶಬ್ದದ ಅಲೆಗಳನ್ನು ದೂರದಲ್ಲಿರುವ ಆನೆ ಗ್ರಹಿಸಿದಾಗ, ಥಟ್ಟನೆ ಅದು ಮಾಡುತ್ತಿರುವ ಕೆಲಸವನ್ನು ನಿಲ್ಲಿಸಿ, ಪಾದವನ್ನು ಭೂಮಿಗೆ ಊರಿ ನಿಲ್ಲುತ್ತದೆ. ಪಾದದಲ್ಲಿರುವ ಅದರ ಮೆತ್ತನೆಯ ಭಾಗವು ಇಂತಹ ಅಲೆಗಳನ್ನು ಸ್ವೀಕರಿಸಲೆಂದೇ ವಿಶೇಷ ರಿಸೆಪ್ಟರ್‌ಗಳನ್ನು ಹೊಂದಿರು ತ್ತದೆ. ಅವು ಈ ಶಬ್ದದ ಅಲೆಗಳನ್ನು ಗ್ರಹಿಸಿ, ಮೆದುಳಿಗೆ ಸಂದೇಶ ಕಳುಹಿಸುತ್ತದೆ. ಹೀಗೆ ಇವು ವಿಶೇಷವಾದ ರೀತಿಯಲ್ಲಿ ಕೇಳುತ್ತವೆ!



> ❝ ಸಾವಿರಾರು ವರ್ಷಗಳಿಂದ ಹಿಂದಿನ ತಲೆಮಾರು ಬಳಸುತ್ತಿದ್ದ ದಾರಿಯಲ್ಲೇ ತನ್ನ ಗುಂಪಿನೊಡನೆ ಸಾಗಿ ಬರುವ ಇವಕ್ಕೆ ಈಗ ಸ್ವಚ್ಛವಾದ ನೀರಿನ, ಆಹಾರದ ಕೊರತೆ. ಎಷ್ಟೇ ಆಯಾಸವಾದರೂ ಅವು ಮುಂದುವರೆಯಲೇಬೇಕು, ಉಳಿಯಲು ದಾರಿ ಕಂಡುಕೊಳ್ಳಲೇಬೇಕು. ಆದರೆ ಎಲ್ಲಿ? ಹೇಗೆ? ಕಣ್ಮರೆಯಾಗಿವೆ ದಟ್ಟಕಾಡುಗಳು, ಸ್ವಚ್ಛ ನದಿಗಳು. ಪ್ರಕೃತಿಯ ಅದ್ಭುತ ಕೊಡುಗೆಯಾದ ಈ ಪ್ರಾಣಿಕುಲವನ್ನು ರಕ್ಷಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ.

ಮಸ್ತಿಯಲ್ಲಿರುವ ಆನೆಗಳಿಗೆ ರೋಷ ಹೆಚ್ಚು. ಆಗ ಅದರ ಕಣ್ಣು ಮತ್ತು ಕಿವಿಯ ಮಧ್ಯದಲ್ಲಿರುವ ಗ್ರಂಥಿಯಿಂದ ತೀಕ್ಷ್ಣ ವಾಸನೆಯ ದ್ರವ ಒಸರುತ್ತದೆ. ಗಂಡಾನೆಗಳಲ್ಲಿರುವ ಈ ಮುಷ್ಟಿ ಗಾತ್ರದ ಸುಮಾರು ಒಂದರಿಂದ ಒಂದೂವರೆ ಪೌಂಡ್ ತೂಕದ ಗ್ರಂಥಿಯಿಂದ ಒಸರುವ ದ್ರವವನ್ನು ಕಾಮಸಿಂಧೂರ, ಋತ್ ದ್ರವ ಎಂದು ಕರೆಯಲಾಗುತ್ತದೆ. ಆನೆ ಬೆದೆಗೆ ಬಂದಾಗ ಒಸರುವ ಇದು ಆನೆಗೆ ಬಲು ನೋವನ್ನುಂಟು ಮಾಡುತ್ತದೆ. ಆಗ ಆಗುವ ಊತವು ಆನೆಯ ಕಣ್ಣನ್ನು ಒತ್ತುತ್ತಿರುತ್ತದೆ. ಈ ಎಲ್ಲ ಹಿಂಸೆಯನ್ನು ತಾಳಲಾಗದೆ ಅವು ತಮ್ಮ ಹಣೆಯನ್ನು ನೆಲಕ್ಕೆ ಒತ್ತುವುದೋ ಅಥವಾ ಮರಕ್ಕೆ ತಿಕ್ಕುವುದನ್ನೋ ಮಾಡುವುದನ್ನು ವಿಜ್ಞಾನಿಗಳು ಗಮನಿಸಿದ್ದಾರೆ. ಇಂತಹ ಸ್ಥಿತಿಯಲ್ಲಿ ಅವು ಆಕ್ರಮಣಕಾರಿಯಾಗುವುದು ತೀರಾ ಸಹಜವಲ್ಲವೇ? ಆನೆಗಳು ಕಾಡಿನಲ್ಲಿದ್ದಾಗ ಮಸ್ತಿಗೆ ಒಂದು ಉದ್ದೇಶವಿರುತ್ತದೆ. ಆದರೆ ಸೆರೆಯಲ್ಲಿ ಉಂಟಾದರೆ ಆ ರೋಷವನ್ನು ಅವು ಮನುಷ್ಯರ ಮೇಲೆ ತೋರ್ಪಡಿಸಬೇಕಾಗುತ್ತದೆ. ಮಸ್ತಿಗೆ ಬಂದ ಆನೆಯ ಲಕ್ಷಣಗಳನ್ನು ಮಾವುತರು ಆರಂಭದಲ್ಲೇ ಗುರುತಿಸಿದರೆ, ಬಹಳ ಒಳ್ಳೆಯದು. ಮುಂದೆ ಆಗಬಹುದಾದ ಅನಾಹುತಗಳನ್ನು ಬಹಳಷ್ಟು ತಪ್ಪಿಸಬಹುದು.

ಜಗತ್ತಿನಾದ್ಯಂತ ಸ್ಥಳೀಯರಿಗೆ ಆನೆಗಳ ಬಗ್ಗೆ ಪರಂಪರೆಯಿಂದ ಬಂದ ತಿಳುವಳಿಕೆ ಇರುತ್ತದೆ. ಅಲ್ಲಿಯ ನೆಲ, ಪ್ರಾಕೃತಿಕ ಚಿಕಿತ್ಸೆ, ರೋಗಗಳನ್ನು ಗುಣಪಡಿಸುವ ಪಾರಂಪರಿಕ ನಾಟಿ ಔಷಧಿಗಳ ಜೊತೆಗೆ ಮಸ್ತಿಗೆ ಬಂದ ಆನೆಗಳ ಬಗ್ಗೆಯೂ ಅವರಿಗೆ ಗೊತ್ತಿರುತ್ತದೆ. ಮಸ್ತಿಯ ಲಕ್ಷಣಗಳನ್ನು ಅರಿತಿದ್ದ ಅವರು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಅವಘಡಗಳನ್ನು ತಪ್ಪಿಸಬಲ್ಲವರಾಗಿದ್ದರು. ಯಶಸ್ವಿಯಾಗಿ ಔಷಧಯುಕ್ತ ಸೊಪ್ಪುಗಳ ಬಳಕೆಯನ್ನು ಮಾಡುತ್ತಿದ್ದರು. ಪ್ರಾಚೀನ ಭಾರತದ ಗ್ರಂಥಗಳಲ್ಲಿ ಒಂದಾದ ಗಜಶಾಸ್ತ್ರದಲ್ಲಿ ಇದರ ಉಲ್ಲೇಖವನ್ನೂ ಕಾಣಬಹುದೆನ್ನುತ್ತಾರೆ. ಆದರೆ ನತದೃಷ್ಟವಶಾತ್ ಇಂದಿನ ಮಾವುತರಿಗೆ ಪಾರಂಪರಿಕ ಜ್ಞಾನದ ಕೊರತೆಯಿಂದಾಗಿ ಈ ಬೃಹತ್ ಪ್ರಾಣಿಗಳು ಕಷ್ಟವನ್ನನುಭವಿಸಬೇಕಾಗಿದೆ. ಹಿಡಿತಕ್ಕೆ ಬಾರದ ಆನೆಗಳನ್ನು ಗುಂಡಿಕ್ಕಿ ಕೊಲ್ಲಲು ಎಷ್ಟೋ ವೇಳೆ ಸರಕಾರವೇ ಆದೇಶ ನೀಡುತ್ತದೆ. (ಸರಕಾರವು ಕಾಡುಗಳನ್ನು ನಿಷೇಧಿಸಿದಾಗ, ಆನೆಗಳನ್ನು ಸಾಕುವ ಮನುಷ್ಯರೂ, ಮಾವುತರೂ ಕಡಿಮೆ ಆದರು, ಜೊತೆಗೆ ಆನೆಗಳ ಬಗೆಗಿನ ಪಾರಂಪರಿಕ ತಿಳುವಳಿಕೆಯೂ ಕಡಿಮೆ ಆಯಿತು)

ಸಾವಿರಾರು ವರ್ಷಗಳಿಂದ ಹಿಂದಿನ ತಲೆಮಾರು ಬಳಸುತ್ತಿದ್ದ ದಾರಿಯಲ್ಲೇ ತನ್ನ ಗುಂಪಿನೊಡನೆ ಸಾಗಿಬರುವ ಇವಕ್ಕೆ ಈಗ ಸ್ವಚ್ಛವಾದ ನೀರಿನ, ಆಹಾರದ ಕೊರತೆ. ಎಷ್ಟೇ ಆಯಾಸವಾದರೂ ಅವು ಮುಂದುವರೆಯಲೇಬೇಕು, ಉಳಿಯಲು ದಾರಿ ಕಂಡುಕೊಳ್ಳಲೇಬೇಕು. ಆದರೆ ಎಲ್ಲಿ? ಹೇಗೆ? ಕಣ್ಮರೆಯಾಗಿವೆ ದಟ್ಟ ಕಾಡುಗಳು, ಸ್ವಚ್ಛ ನದಿಗಳು. ಪ್ರಕೃತಿಯ ಅದ್ಭುತ ಕೊಡುಗೆಯಾದ ಈ ಪ್ರಾಣಿಕುಲವನ್ನು ರಕ್ಷಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ.

## ಬೆಳಗಾವಿ ಅಧಿವೇಶನದಲ್ಲಿ ಗಿಗ್ ಕಾರ್ಮಿಕರ ರಕ್ಷಣೆ ಕರಡು ಮಸೂದೆ ಮಂಡನೆ



ಬೆಂಗಳೂರು,ಅ.19– ಸ್ವಿಗ್ಗಿ, ಜೊಮಾಟೊ, ಡಂಜೊ ಮತ್ತು ಓಲಾ ಮುಂತಾದ ಅಗ್ರಿಗೇಟರ್ ಪ್ಲಾಟ್‌ಫಾರ್ಮ್‌ಗಳ ಪ್ರತಿಯೊಂದು ವಹಿವಾಟಿನ ಮೇಲೆ ಸೆಸ್ ವಿಧಿಸಲು ರಾಜ್ಯ ಸರ್ಕಾರ ಪ್ರಸ್ತಾಪಿಸಿದ್ದು, ಗಿಗ್ ಕಾರ್ಮಿಕರಿಗಾಗಿ ಕಲ್ಯಾಣ ನಿಧಿ ರಚಿಸಲಾಗುವುದು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಕರ್ನಾಟಕ ಗಿಗ್ ವರ್ಕರ್ಸ್ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) 2024 ಮಸೂದೆಯನ್ನು ಸರ್ಕಾರವು ಮಂಡಿಸುವ ನಿರೀಕ್ಷೆಯಿದೆ. ಮುಂದಿನ ವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ಕರಡು ಮಸೂದೆ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ. ಇದಾದ ಬಳಿಕ ಚಳಿಗಾಲದ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಮಂಡಿಸಲಾಗುವುದು. ಪ್ರತಿ ವಹಿವಾಟಿನ ಮೇಲೆ ಶೇ.2ರಷ್ಟು ಸೆಸ್ ವಿಧಿಸುವ ಪ್ರಸ್ತಾವನೆ ಇದೆ ಎಂದು ಮೂಲಗಳು ತಿಳಿಸಿದ್ದರೂ, ಸರ್ಕಾರ ಇನ್ನೂ ನಿರ್ಧಾರ ಕೈಗೊಂಡಿಲ್ಲ ಎಂದು ಲಾಡ್ ಹೇಳಿದ್ದಾರೆ.

ವಹಿವಾಟುಗಳ ಬಗ್ಗೆ ನಿಗಾ ಇಡಲು ಸರ್ಕಾರಕ್ಕೆ ಯಾವುದೇ ತಂತ್ರಜ್ಞಾನವಿಲ್ಲ ಮತ್ತು ಈ ನಿಟ್ಟಿನಲ್ಲಿ ಸಹಾಯ ಮಾಡಲು ಸರ್ಕಾರ ಅಗ್ರಿಗೇಟರ್‌ಗಳ ಸಹಾಯ ಪಡೆಯಲಿದೆ. ಗಿಗ್ ಕೆಲಸಗಾರರ ಸಂಖ್ಯೆಯನ್ನು ಪತ್ತೆ ಹಚ್ಚಲು ರಾಜ್ಯ ಸರ್ಕಾರವು ಸಮೀಕ್ಷೆ ನಡೆಸಿಲ್ಲ. ಆದರೆ ಪ್ರತಿ ಗಂಟೆಗೆ ಲಕ್ಷಗಟ್ಟಲೆ ವಹಿವಾಟು ನಡೆಯುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಪ್ರಸ್ತಾವಿತ ಸೆಸ್‌ನಲ್ಲಿ, ಗಿಗ್ ಕಾರ್ಮಿಕರಿಗೆ ಕೆಲಸದಲ್ಲಿ ಅಪಾಯಗಳು ಎದುರಾಗುತ್ತವೆ. ಅವರು ರಸ್ತೆ ಅಪಘಾತಗಳಿಗೆ ಗುರಿಯಾಗುತ್ತಾರೆ. ಅವರು ರಸ್ತೆಗಳಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಕಲುಷಿತ ಗಾಳಿಯನ್ನು ಉಸಿರಾಡುತ್ತಾರೆ. ಇದು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆರೋಗ್ಯ ವಿಮೆ ಮತ್ತು ಅವರ ಮಕ್ಕಳ ಶಿಕ್ಷಣಕ್ಕಾಗಿ ಕಲ್ಯಾಣ ನಿಧಿಯನ್ನು ಬಳಸಿಕೊಳ್ಳಲು ನಾವು ಬಯಸುತ್ತೇವೆ ಎಂದು ವಿವರಿಸಿದ್ದಾರೆ. ಉದ್ದೇಶಿತ ಸೆಸ್ ಕುರಿತು ಶೀಘ್ರದಲ್ಲೇ ವಿವಿಧ ಸಭೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆಯನ್ನು ರೂಪಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ಅವರು ಗುರುವಾರ ನವದೆಹಲಿಯಲ್ಲಿ ಗಿಗ್ ಕಾರ್ಮಿಕರ ಸಂಘಗಳ ಪ್ರತಿನಿಧಿಗಳ ಜೊತೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅವರು ಗಿಗ್ ಕಾರ್ಯಕರ್ತರಿಗೆ ವಿವಿಧ ಕಲ್ಯಾಣ ನಿಧಿಯ ಪ್ರಯೋಜನಗಳ ಬಗ್ಗೆ ಚರ್ಚಿಸಿದರು.

ಕರ್ನಾಟಕದ ಕರಡು ಮಸೂದೆಯು ಕೇಂದ್ರ ಸರ್ಕಾರದ ಪ್ರಸ್ತಾವನೆಯೊಂದಿಗೆ ಘರ್ಷಣೆಯಾಗುವುದಿಲ್ಲ, ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಸಂತೋಷ್ ಲಾಡ್ ಹೇಳಿದರು.

### ಸಚಿವರಿಗೆ ಮನವಿ ಸಲ್ಲಿಕೆ...




ನಂಜನಗೂಡಿನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ರೈಲ್ವೆ ಮೇಲ್ಸೇತುವೆಗೆ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರ ಹೆಸರನ್ನು ನಾಮಕರಣ ಮಾಡುವಂತೆ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿ ಬಳಗದ ಮುಖಂಡರು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಬಳಗದ ಸಂಚಾಲಕ ಭರತ್ ರಾಮಸ್ವಾಮಿ, ಅಧ್ಯಕ್ಷ ಪಿ.ನಂದಕುಮಾರ್, ಕಾರ್ಯದರ್ಶಿ ಡಿ.ವೆಂಕಟರಾಜು, ಉಪಾಧ್ಯಕ್ಷ ಸಿ.ಜಿ.ಶಿವಕುಮಾರ್ ಇತರರಿದ್ದರು.

### ಅ.21ರಂದು ಪೊಲೀಸ್ ಹುತಾತ್ಮರ ದಿನಾಚರಣೆ

ಮೈಸೂರು, ಅ.19–ಪೊಲೀಸ್ ಉಪಮಹಾನಿರೀಕ್ಷಕರು ದಕ್ಷಿಣ ವಲಯ, ಮೈಸೂರು ನಗರ, ಮೈಸೂರು ಜಿಲ್ಲೆ, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್‌ಪಿ ಮತ್ತು ಕೆಎಆರ್‌ಪಿ ಘಟಕಗಳ ವತಿಯಿಂದ ಅ.21ರಂದು ಬೆಳಗ್ಗೆ 8 ಗಂಟೆಗೆ ಮೈಸೂರು ಜಿಲ್ಲಾ ಪೊಲೀಸ್ ಕಚೇರಿ ಪಕ್ಕದಲ್ಲಿರುವ ಪೊಲೀಸ್ ಹುತಾತ್ಮರ ಸ್ಮಾರಕ ಉದ್ಯಾನವನದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

## ದೇಶದ ಜಿಡಿಪಿಗೆ ಪಶುಪಾಲನೆ ಕೊಡುಗೆ ಶೇ.5ರಷ್ಟು

### ಹೈನುಗಾರಿಕೆಯ ಮಹತ್ವ ಮನದಟ್ಟು ಮಾಡಿಕೊಟ್ಟ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ

ಮೈಸೂರು,ಅ.19 (ಎಂಟಿವೈ)– ದೇಶದ ಜಿಡಿಪಿಗೆ ಹೈನುಗಾರಿಕೆ ಕೊಡುಗೆ ಅಪಾರವಾಗಿದ್ದು, ಲಕ್ಷಾಂತರ ಕುಟುಂಬಗಳು ಹೈನುಗಾರಿಕೆಯನ್ನೇ ಅವಲಂಬಿಸಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಡೆದ ಕಾಲುಬಾಯಿ ಲಸಿಕಾ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಾನವ ಹಾಗೂ ಜಾನುವಾರುಗಳ ನಡುವೆ ಅವಿನಾಭಾವ ಸಂಬಂಧವಿದೆ. ರೈತರ ಜೀವನ, ಪಶುಗಳ ಸಾಕಾಣಿಕೆ ಹಾಗೂ ಹೈನುಗಾರಿಕೆ ಒಂದಕ್ಕೊಂದು ಬೆಸೆದುಕೊಂಡಿದೆ. ಪಶುಪಾಲನೆಯಿಂದ ಶೇ.5 ರಷ್ಟು ಜಿಡಿಪಿ ವೃದ್ಧಿಯಾಗುತ್ತಿರುವುದು ಪ್ರಶಂಸೆಯ ವಿಚಾರ. ಬರೀ ಹೆಣ್ಣು ಕರುಗಳೇ ಜನಿಸುವಂತೆ ಗರ್ಭ ಧರಿಸುವಷ್ಟು ತಂತ್ರಜ್ಞಾನ ಮುಂದುವರೆದಿದೆ. ಸಂತಾನಾಭಿವೃದ್ಧಿಯ ಜೊತೆಗೆ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಬೇಕು ಎಂದು ಹೇಳಿದರು.




ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಶನಿವಾರ ನಡೆದ ಕಾಲುಬಾಯಿ ಲಸಿಕಾ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಕೃಷಿ ಕ್ಷೇತ್ರದಲ್ಲಿ ಪಶುಗಳಿಗಿಂತ ಯಂತ್ರದ ಬಳಕೆ ಹೆಚ್ಚಾಗಿದೆ. ಪ್ರಾಣಿಗಳ ಗೊಬ್ಬರವನ್ನು ಹೆಚ್ಚು ಬಳಸದೆ, ರಾಸಾಯನಿಕಗಳ ಮೊರೆ ಹೋಗುತ್ತಿದ್ದಾರೆ. ಇದು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಆದಷ್ಟು ಈ ಕ್ರಮವನ್ನು ತಡೆಗಟ್ಟುವಂತೆ ಜಾಗೃತಿ ಮೂಡಿಸಬೇಕು ಎಂದರು.

ಹೈನುಗಾರಿಕೆ ಹಳ್ಳಿಯ ಜನರ ಬದುಕಿಗೆ ಆಧಾರವಾಗಿದೆ. ಟಿಪ್ಪು ಸುಲ್ತಾನ್ ಕೊಡುಗೆಗಳನ್ನು ಮಾತನಾಡಿದರೆ ಕೆಲವರು ಟೀಕೆ ಮಾಡುತ್ತಾರೆ. ಟಿಪ್ಪು ಸುಲ್ತಾನ್ ಹಳ್ಳಿಕಾರ್ ತಳಿಗಳ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ. ಟಿಪ್ಪು, ಹಳ್ಳಿ ಕಾರ್ ಹಸುಗಳನ್ನು ಸಾಕಿ ಅದರಲ್ಲಿ ಫಿರಂಗಿ ಗಾಡಿಗಳನ್ನು ಸಾಗಿಸಲು ಬಳಸಿದ್ದರು. ಕೈಗಾರಿಕೆ, ರೇಷ್ಮೆ, ವಾಣಿಜ್ಯಕ್ಕೆ ಒತ್ತು ನೀಡಿದ್ದರು. ನಮ್ಮ ದೊಡ್ಡಪ್ಪ ಏನೂ ಓದಿರಲಿಲ್ಲ. ಅವರು ಕೂಡ ಊರಿನಲ್ಲಿ ಅನಾರೋಗ್ಯಕ್ಕೆ ತುತ್ತಾದ ಪಶುಗಳಿಗೆ ಔಷಧಿ ನೀಡುತ್ತಿದ್ದರು. ಆದರೆ ಇಂದು ವೈಜ್ಞಾನಿಕತೆ ಪರಿಣಾಮಕಾರಿಯಾಗಿ ಬೆಳೆದಿದೆ ಎಂದರು.

ವಿಜ್ಞಾನ ಸಾಕಷ್ಟು ಮುಂದುವರಿದಿದೆ. ವೀರ್ಯಾಣು ಸಂಶೋಧನೆಯ ಮೂಲಕ ಹೊಸ ಹೊಸ ತಳಿಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಮಾನವ ಶಕ್ತಿ ಕುಂಠಿತವಾಗದಂತೆ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಹೆಣ್ಣು ಕರುಗಳೇ ಜನಿಸುವಂತೆ ಗರ್ಭ ಧರಿಸುವಷ್ಟು ತಂತ್ರಜ್ಞಾನ ಮುಂದುವರೆದಿದೆ. ಸಂತಾನಾಭಿವೃದ್ಧಿಯ ಜೊತೆಗೆ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಬೇಕು. ಕೃಷಿ ಕ್ಷೇತ್ರದಲ್ಲಿ ಪಶುಗಳಿಗಿಂತ ಯಂತ್ರದ ಬಳಕೆ ಹೆಚ್ಚಾಗಿದೆ. ಪ್ರಾಣಿಗಳ ಗೊಬ್ಬರವನ್ನು ಹೆಚ್ಚು ಬಳಸದೆ, ರಾಸಾಯನಿಕದ ಮೊರೆ ಹೋಗಲಾಗುತ್ತದೆ. ಇದು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಆದಷ್ಟು ಈ ಕ್ರಮವನ್ನು ತಡೆಗಟ್ಟುವಂತೆ ಜಾಗೃತಿ ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕ ಕೆ.ಹರೀಶ್ ಗೌಡ, ಪಶುಪಾಲನಾ ಇಲಾಖೆ ಆಯುಕ್ತರಾದ ರೂಪ, ನಿರ್ದೇಶಕ ಮಂಜುನಾಥ್ ಪಾಳೇಗಾರ್, ಜಂಟಿ ನಿರ್ದೇಶಕ ಶಿವಣ್ಣ, ಉಪನಿರ್ದೇಶಕ ನಾಗರಾಜು ಹಾಗೂ ಡಾ.ವೈ.ಡಿ.ರಾಜಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ಮೈಸೂರು ಮಿತ್ರ ಭಾನುವಾರ 20 ಅಕ್ಟೋಬರ್ 2024

# ಮುಡಾದಲ್ಲಿ ಸಹಕರಿಸಿದ್ದಕ್ಕೆ ಕುಮಾರ್ ನಾಯಕ್‌ಗೆ ಎಂಪಿ ಟಿಕೆಟ್

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ

ಬೆಂಗಳೂರು, ಅ.19–ಮುಡಾ ಕೇಸ್‌ನಲ್ಲಿ ಹಿಂದಿನ ಜಿಲ್ಲಾಧಿಕಾರಿ ಹಾಗೂ ಹಾಲಿ ರಾಯಚೂರು ಸಂಸದ ಕುಮಾರ್ ನಾಯಕ್ ಅವರು ಸಿದ್ದರಾಮಯ್ಯ ಕುಟುಂಬಕ್ಕೆ ಸಹಾಯ ಮಾಡಿದ್ದರಿಂದಲೇ ಅವರಿಗೆ ಎಂಪಿ ಟಿಕೆಟ್ ಕೊಡಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.


ವಿಜಯೇಂದ್ರ


ಕುಮಾರ್‌ನಾಯಕ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರ್ ನಾಯಕ್‌ಗೆ ಎಂಪಿ ಟಿಕೆಟ್ ಕೊಟ್ಟಾಗಲೇ ಅನುಮಾನ ಇತ್ತು. ಸಿಎಂ ಸಿದ್ದರಾಮಯ್ಯ ಕುಟುಂಬ ಮುಡಾದಿಂದ ಲಾಭ ಪಡೆಯಲು ಬೆಂಬಲವಾಗಿ ನಿಂತಿದ್ದು ಕುಮಾರ್ ನಾಯಕ್. ಹೀಗಾಗಿ ಸಿದ್ದರಾಮಯ್ಯ ಅವರು ಟಿಕೆಟ್ ಕೊಟ್ಟಿದ್ದಾರೆ. ಹೈಕೋರ್ಟ್ ಕೂಡಾ ಅವರ ಪಾತ್ರ ಪರಿಗಣಿಸಿದೆ. ಮುಂದೆ ರಾಯಚೂರು ಸಂಸದ ಕುಮಾರ್ ನಾಯಕ್ ಅವರು ಕೂಡ ರಾಜೀನಾಮೆ ಕೊಡುವ ಸಮಯ ಬರಬಹುದು ಎಂದು ಭವಿಷ್ಯ ನುಡಿದರು.

ಮುಡಾ ಅಧ್ಯಕ್ಷರಾಗಿದ್ದ ಮರೀಗೌಡ ರಾಜೀನಾಮೆ ಕೊಡುತ್ತಾರೆ. ಮರೀಗೌಡರು ಬಿಪಿಯಿಂದಾಗಿ ರಾಜೀನಾಮೆ ಕೊಟ್ಟಿದ್ದಾರೆ ಎಂದು ಸಚಿವ ಮಹದೇವಪ್ಪ ಹೇಳಿದ್ದಾರೆ. ಮುಂದೆ ಈ ಸರ್ಕಾರದಲ್ಲಿ ಇನ್ನು ಯಾರ್ಯಾರಿಗೆ ಬ್ಲಡ್ ಪ್ರೆಷರ್ ಬರುತ್ತೆ ನೋಡುತ್ತಿರಿ! ಸಿದ್ದರಾಮಯ್ಯ ರಾಜೀನಾಮೆ ಕೊಡಲೇಬೇಕು. ಕೊಟ್ಟೇ ಕೊಡುತ್ತಾರೆ. ಸಿದ್ದರಾಮಯ್ಯ ಓಡಿ ಹೋಗಲು ಸಾಧ್ಯವಿಲ್ಲ. ಆದಷ್ಟು ಬೇಗ ರಾಜೀನಾಮೆ ಕೊಟ್ಟು ಗೌರವ ಉಳಿಸಿಕೊಳ್ಳಲಿ ಎಂದರು.

ಭಾನುವಾರ ಸಚಿವರ ಜೊತೆ ಸಿಎಂ ಸಭೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಆಮ್ ಆದ್ಮಿ ಅರವಿಂದ್ ಕೇಜ್ರಿವಾಲ್ ಪರಿಸ್ಥಿತಿ ಏನು ಆಗಿದೆ ಅಂತ ಎಲ್ಲರಿಗೂ ಗೊತ್ತು. ನೇರವಾಗಿ ಹೇಳುತ್ತಿದ್ದೇನೆ. ಸಿಎಂ ಅವರು ಭಂಡತನ ಬಿಟ್ಟು ರಾಜೀನಾಮೆ ನೀಡಲಿ. ಹೈಕಮಾಂಡ್ ಬೆಂಬಲ ಇದೆ ಎಂದು ಹೀಗೆ ನಡೆದುಕೊಳ್ಳುವುದು ಸರಿಯಲ್ಲ. ಅದು ದೊಡ್ಡ ವಿಚಾರ ಅಲ್ಲ. ಹೈಕೋರ್ಟ್ ತೀರ್ಪಿನಲ್ಲಿ ಹಲವು ವಿಚಾರ ತಿಳಿಸಿದ್ದಾರೆ. ಸಿದ್ದರಾಮಯ್ಯ ಅವರು ಇನ್ನೊಂದು ಸಾರಿ ತೀರ್ಪು ಓದಲಿ. ಆಗ ರಾಜೀನಾಮೆ ಕೊಡೋಕೆ ಅನುಕೂಲ ಆಗುತ್ತದೆ ಎಂದು ಆಗ್ರಹಿಸಿದರು.

# ಕುಮಾರ್ ನಾಯಕ್ ರಾಜೀನಾಮೆಗೆ ಸಂಸದ ಲೆಹರ್ ಸಿಂಗ್ ಆಗ್ರಹ

## ವಾಲ್ಮೀಕಿ ನಿಗಮದ ಹಣ ರಾಯಚೂರು, ಬಳ್ಳಾರಿ ಚುನಾವಣೆಯಲ್ಲಿ ಹಂಚಿಕೆ ಹಿನ್ನೆಲೆಯಲ್ಲೂ ಕುಮಾರ ನಾಯಕ್, ತುಕಾರಾಂ ಪದವಿ ತ್ಯಾಗಕ್ಕೆ ಒತ್ತಾಯ

ಬೆಂಗಳೂರು, ಅ.19– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ಹಾಗೂ ಹಾಲಿ ಕಾಂಗ್ರೆಸ್ ಸಂಸದ ಜಿ.ಕುಮಾರ್ ನಾಯಕ್ ರಾಜೀನಾಮೆ ನೀಡಿ, ಸ್ವತಂತ್ರ ತನಿಖೆಗೆ ಸಹಕರಿಸಬೇಕು ಎಂದು ಬಿಜೆಪಿ ಸಂಸದ ಲೆಹರ್ ಸಿಂಗ್ ಸಿರೋಯಾ ಅವರು ಆಗ್ರಹಿಸಿದ್ದಾರೆ.


ಲೆಹರ್ ಸಿಂಗ್

ಕುಮಾರ್ ನಾಯಕ್ ಅವರು ಮೈಸೂರು ಜಿಲ್ಲಾಧಿಕಾರಿಯಾಗಿದ್ದಾಗ ಅಸ್ತಿತ್ವದಲ್ಲಿಲ್ಲದ ಭೂಮಿಯನ್ನು ಪರಿವರ್ತಿಸಿದರು ಅದುವೇ ಮುಡಾ ಹಗರಣಕ್ಕೆ ಕಾರಣವಾಯಿತು ಎಂದು ಬಿಜೆಪಿ ಸಂಸದರು ಆರೋಪಿಸಿದ್ದಾರೆ. ಅವರು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ವೇಳೆ ಸಲ್ಲಿಸಿದ್ದ ಸುಳ್ಳು ವರದಿ ಬಗ್ಗೆ ಹೈಕೋರ್ಟ್ ತೀವ್ರ ಟೀಕೆ ಮಾಡಿದೆ. ಮುಡಾ ಹಗರಣದಲ್ಲಿ ಹೆಚ್ಚಿನ ಲಾಭ ಪಡೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರಿಗೆ ಸಹಕರಿಸಿದ್ದ ಕುಮಾರ್ ನಾಯಕ್ ಸಹ ರಾಜೀನಾಮೆ ನೀಡಬೇಕು. ಅವರು ಸ್ವಯಂ ಪ್ರೇರಣೆಯಿಂದ ತನಿಖೆಗೆ ಸಹಕರಿಸಬೇಕು. ಜಾರಿ ನಿರ್ದೇಶನಾಲಯ ಮತ್ತು ಲೋಕಾಯುಕ್ತರು ಈ ಬಗ್ಗೆ ಗಮನಹರಿಸಿ ಅವರ ವಿರುದ್ಧ ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು ಎಂದು ಬಿಜೆಪಿ ಸಂಸದ ಒತ್ತಾಯಿಸಿದ್ದಾರೆ.

ಇನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ರಾಯಚೂರು ಹಾಗೂ ಬಳ್ಳಾರಿ ಮತದಾರರಿಗೆ ಹಂಚಲು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಇಡಿ ಚಾರ್ಜ್ ಶೀಟ್ ಬಹಿರಂಗಪಡಿಸಿದೆ. ಹೀಗಾಗಿ ರಾಯಚೂರು ಸಂಸದ ಕುಮಾರ್ ನಾಯಕ್ ಹಾಗೂ ಬಳ್ಳಾರಿ ಸಂಸದ ತುಕಾರಾಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ವಾಲ್ಮೀಕಿ ಹಗರಣದ ಆರೋಪಿ, ಮಾಜಿ ಸಚಿವ ಬಿ.ನಾಗೇಂದ್ರ ಅವರು ಜಾಮೀನು ಪಡೆದ ನಂತರ ಕ್ಲೀನ್ ಚಿಟ್ ನೀಡಲು ಪ್ರಯತ್ನಿಸಿದರೂ ರಾಜ್ಯದ ಹಣಕಾಸು ಸಚಿವರು ಮತ್ತು ಹಣಕಾಸು ಕಾರ್ಯದರ್ಶಿ ಕೂಡ ಈ ಪ್ರಕರಣದ ಬಿಸಿ ಎದುರಿಸಬೇಕಾಗುತ್ತದೆ ಎಂದು ಬಿಜೆಪಿ ಸಂಸದರು ಎಚ್ಚರಿಸಿದ್ದಾರೆ.

# ಮುಡಾ ದಾಖಲಾತಿ ಸುಟ್ಟು ಹಾಕಿರುವ ಸಚಿವ ಬೈರತಿ ಸುರೇಶ್ ಬಂಧಿಸಿ

## ನಾನಾ ಹಗರಣದ ಸುಳಿಯಲ್ಲಿರುವ ಸಿಎಂ ಸಿದ್ದರಾಮಯ್ಯ ರಾಜೀನಾಮೆಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹ

ಬೆಂಗಳೂರು, ಅ.19(ಕೆಎಂಶಿ)– ಹಗರಣಗಳ ಸುಳಿಗೆ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮುಡಾ ದಾಖಲೆಗಳನ್ನು ಸುಟ್ಟು ಹಾಕಿರುವ ಹಾಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರನ್ನು ತಕ್ಷಣ ಬಂಧಿಸಿ ತನಿಖೆಗೆ ಒಳಪಡಿಸುವಂತೆ ಆಗ್ರಹಿಸಿದ್ದಾರೆ.


ಶೋಭಾ ಕರಂದ್ಲಾಜೆ

ಮುಡಾ, ಮಹರ್ಷಿ ವಾಲ್ಮೀಕಿ ನಿಗಮ ಹಾಗೂ ಮೈಸೂರು ಟರ್ಫ್ ಕ್ಲಬ್ ಸ್ಟೀವರ್ಡ್ ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಸಿದ್ದರಾಮಯ್ಯ ಅವರಿಗೆ ಛೀಮಾರಿ ಹಾಕಿ ತನಿಖೆಗೆ ಆದೇಶಿಸಿವೆ. ಎಲ್ಲಕ್ಕೂ ಮಿಗಿಲಾಗಿ ರಾಜ್ಯಪಾಲರು 17ಎ ಅಡಿ ಪ್ರಾಸಿಕ್ಯೂಷನ್‌ಗೆ ಆದೇಶ ಮಾಡಿದ್ದು, ಇದನ್ನು ಪ್ರಶ್ನಿಸಿದ ಸಿದ್ದರಾಮಯ್ಯ ಅವರಿಗೆ ನ್ಯಾಯಾಲಯಗಳೂ ತೀರ್ಪಿನ ಮೂಲಕ ಛಾಟಿ ಬೀಸಿದ್ದರೂ ಅಧಿಕಾರದಲ್ಲಿ ಮುಂದುವರೆಯುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದ ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಸಾವಿರಾರು ಕೋಟಿ ರೂ.ಗಳ ಭ್ರಷ್ಟಾಚಾರ ನಡೆದಿದೆ ಎಂದು ಜಿಲ್ಲಾಧಿಕಾರಿಗಳು ವರದಿ ನೀಡಿದ್ದಾರೆ.

ಇಷ್ಟೆಲ್ಲಾ ಆರೋಪ ಮತ್ತು ತನಿಖೆಗಳು ನಡೆಯುತ್ತಿದ್ದರೂ ಕಾಂಗ್ರೆಸ್, ಸಿದ್ದ ರಾಮಯ್ಯ ಅವರ ರಾಜೀನಾಮೆ ಏಕೆ ಪಡೆದಿಲ್ಲ. ಆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ವಿದೇಶಕ್ಕೆ ತೆರಳಿ ಉಪನ್ಯಾಸ ನೀಡುತ್ತಾರೆ, ಮೊದಲು ತಮ್ಮ ಪಕ್ಷದ ತಟ್ಟೆಯಲ್ಲಿ ಬಿದ್ದಿರುವ ಹೆಗ್ಗಣವನ್ನು ನೋಡಿಕೊಳ್ಳಲಿ ಎಂದರು.

ಮುಖ್ಯಮಂತ್ರಿಗಳು ತಮ್ಮ ಪರಮಾಪ್ತ, ಮುಡಾ ಅಧ್ಯಕ್ಷ ಮರೀಗೌಡ ಅವರ ರಾಜೀನಾಮೆ ಪಡೆದಿದ್ದು ಏಕೆ, ಅವರ ಮೇಲೆ ಹಗರಣ ಆರೋಪ ಹೊರಿಸಲು ಹೊರಟಿದ್ದಾರೆಯೇ ಎಂದು ಶೋಭಾ ಕರಂದ್ಲಾಜೆ ಪ್ರಶ್ನಿಸಿದರು. ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು, ಸಚಿವ ಬೈರತಿ ಸುರೇಶ್ ಅವರನ್ನು ತಕ್ಷಣ ಬಂಧಿಸಿ ತನಿಖೆ ನಡೆಸಿದರೆ ಸತ್ಯ ಹೊರಬರಲಿದೆ. ಅವರು ಮುಡಾದಿಂದ 1997ರ ನಂತರದ ಎಲ್ಲ ಕಡತಗಳನ್ನು ಕಾರಿನಲ್ಲಿ ತುಂಬಿಸಿ ಕೊಂಡು ಬಂದು ಸುಟ್ಟು ಹಾಕಿದ್ದಾರೆ ಎಂದು ಆರೋಪಿಸಿದರು.

ಮುಡಾದ ಹಿಂದಿನ ಆಯುಕ್ತರ ಅಮಾನತು ಮಾಡಿ ನಂತರ ವಾಪಸ್ ಪಡೆದಿದ್ದಾರೆ, 2013ರಲ್ಲಿ ತಮ್ಮ ಕೇಸುಗಳಿಂದ ಹೊರಬರಲು ಲೋಕಾಯುಕ್ತವನ್ನೇ ಮುಚ್ಚಿದ್ದರು, ಟರ್ಫ್ ಕ್ಲಬ್ ಪ್ರಕರಣದಲ್ಲಿ ಸ್ಟೀವರ್ಡ್ ನೇಮಕ ಮಾಡಲು ಚೆಕ್ ಮೂಲಕ 1.30 ಕೋಟಿ ರೂ. ಪಡೆದ ಸಿದ್ದರಾಮಯ್ಯ ಭ್ರಷ್ಟಾಚಾರ ರಹಿತ ವ್ಯಕ್ತಿ ಆಗಲು ಹೇಗೆ ಸಾಧ್ಯ. ಮುಖ್ಯಮಂತ್ರಿ ಪತ್ನಿ ಅವರಿಗೆ ನಿವೇಶನ ಹಂಚಿಕೆ ಸಂಬಂಧ ಮುಡಾ ನಿರ್ಧಾರ ಕೈಗೊಂಡಾಗ ಸಿದ್ದರಾಮಯ್ಯ ಪುತ್ರ ಯತೀಂದ್ರ ಶಾಸಕರಾಗಿದ್ದರು. ಜೊತೆಗೆ ಮುಡಾ ಸದಸ್ಯರೂ ಆಗಿದ್ದರು. ಅವರ ಒತ್ತಡದಿಂದ ನಿವೇಶನಗಳು ಸಿಕ್ಕಿವೆ. ಇಷ್ಟೆಲ್ಲ ನಡೆದಾಗ ಸಿದ್ದರಾಮಯ್ಯ ಸಾಂವಿಧಾನಿಕ ಹುದ್ದೆಗಳಲ್ಲಿದ್ದರು. ಪ್ರಭಾವ ಬೀರಿ ಹೆಚ್ಚು ಮೌಲ್ಯಯುತ ಪ್ರದೇಶದಲ್ಲಿ ನಿವೇಶನ ಪಡೆಯಲಾಗಿದೆ. ನಿವೇಶನ ವಾಪಸ್ ಕೊಟ್ಟಿದ್ದೇ ಅಪರಾಧಕ್ಕೆ ಮೊದಲ ಸಾಕ್ಷಿ ಎಂದು ವಿಶ್ಲೇಷಿಸಿದರು. ಬೊಕ್ಕಸದ ಹಣ ಕಾಂಗ್ರೆಸ್ ಪಕ್ಷಕ್ಕೆ ವರ್ಗಾವಣೆ ಆಗುತ್ತಿದೆ. ಸಿದ್ದರಾಮಯ್ಯ ತಾನು ಬಹಳ ಶುದ್ಧ ಎಂದು ಹೇಳಿಕೊಳ್ಳುತ್ತಿದ್ದರು. ಅವರ ಪರಿಶುದ್ಧತೆಯ ಒಂದೊಂದೇ ಮುಖವಾಡಗಳು ಕಳಚಿ ಬೀಳುತ್ತಿವೆ.

ಮುಡಾ ಹಗರಣ ಸಂಬಂಧ ಮೈಸೂರು ಜಿಲ್ಲಾಧಿಕಾರಿ 1 ಸಾವಿರ ಕೋಟಿ ರೂ.ಗೂ ಹೆಚ್ಚು ಮೊತ್ತದ ಅವ್ಯವಹಾರ ನಡೆದಿದ್ದು ತನಿಖೆ ಮಾಡಿ ವರದಿ ಕೊಟ್ಟಿದ್ದರು. ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಒಂದು ರೂಪಾಯಿ ಬಿಡುಗಡೆ ಆಗುತ್ತಿಲ್ಲ, ಬೆಂಗಳೂರಿನಲ್ಲಿ ಬಿದ್ದ ಮಳೆ ಇಡೀ ನಗರವನ್ನೇ ಮುಳುಗಿಸಿದೆ, ಜನರನ್ನು ಕೇಳುವವರು, ಹೇಳುವವರು ಇಲ್ಲವಾಗಿದೆ, ಭ್ರಷ್ಟಾಚಾರದಿಂದ ದುಡ್ಡು ಮಾಡುವುದೇ ದಂಧೆಯಾಗಿದೆ ಎಂದು ಟೀಕಿಸಿದರು.

# ಸಿದ್ದರಾಮಯ್ಯ ತಕ್ಷಣ ರಾಜೀನಾಮೆ ನೀಡಿ ತನಿಖೆಗೊಳಪಡಬೇಕು

## ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಒಡೆಯರ್ ಆಗ್ರಹ

### ಮುಡಾ ಹಗರಣದ ಸಿಬಿಐ ತನಿಖೆಯಾಗಬೇಕು: ರಾಷ್ಟ್ರಪತಿ, ರಾಜ್ಯಪಾಲರಿಗೆ ಮನವಿ ಮಾಡುತ್ತೇವೆ: ಇಡಿ ಟ್ರ್ಯಾಕ್ ಚೆನ್ನಾಗಿದೆ

ಮೈಸೂರು, ಅ.19(ಬಿಎಲ್‌ಯು)–ಮುಡಾ ಹಗರಣದ ಆರೋಪ ಎದುರಿಸುತ್ತಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಿ ತನಿಖೆಗೊಳಪಡಬೇಕು ಎಂದು ಮೈಸೂರು ಹಾಗೂ ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಗ್ರಹಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದಿರುವ ಹಗರಣದಲ್ಲಿ ಸಿದ್ದರಾಮಯ್ಯ ಕುಟುಂಬ ನೇರವಾಗಿ ಭಾಗಿಯಾಗಿದೆ ಎಂದು ಆರೋಪಿಸಿದರು.

ಮುಡಾ ಅಕ್ರಮ ನಿವೇಶನ ಹಂಚಿಕೆ ಹಗರಣದಲ್ಲಿ ಸುಮಾರು 5 ಸಾವಿರ ಕೋಟಿ ರೂ.ಗೂ ಹೆಚ್ಚು ಅವ್ಯವಹಾರ ನಡೆದಿದೆ. ಲೋಕಾಯುಕ್ತ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನಕ್ಕೊಳಪಡುವ ಕಾರಣ ಸಿಬಿಐನಂತಹ ಸ್ವತಂತ್ರ ಉನ್ನತ ತನಿಖಾ ಸಂಸ್ಥೆಯಿಂದ ಮಾತ್ರ ಸತ್ಯಾಂಶ ಬಯಲಿಗೆ ಬರಲು ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಯದುವೀರ್ ಒತ್ತಾಯಿಸಿದರು.

ಸಿದ್ದರಾಮಯ್ಯ ವಾಪಸ್ ನೀಡಿರುವ 14 ನಿವೇಶನದ ಜೊತೆಗೆ ಮುಡಾದಲ್ಲಿ ಅಕ್ರಮವಾಗಿ ಹಂಚಿಕೆಯಾಗಿರುವ ಎಲ್ಲಾ ನಿವೇಶನಗಳ ಅವ್ಯವಹಾರದ ಬಗ್ಗೆ ತನಿಖೆ ಮಾಡಬೇಕು ಎಂದು ಕೋರಿದರು.


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸಂಸದ ಯದುವೀರ್ ಒಡೆಯರ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಧ್ಯಮ ವಕ್ತಾರ ಎಂ.ಜಿ.ಮಹೇಶ್, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಗೌಡ ಚಿತ್ರದಲ್ಲಿದ್ದಾರೆ.

62 ಕೋಟಿ ಕೊಟ್ಟರೆ ನಿವೇಶನ ವಾಪಸ್ ಕೊಡುತ್ತೇನೆ ಎಂದು ಸ್ವತಃ ಸಿದ್ದರಾಮಯ್ಯ ಅವರೇ ಹೇಳಿರುವ ಕಾರಣ ಈಗ ಇಡಿ ತನಿಖೆ ನಡೆಯುತ್ತಿರುವುದು ಸೂಕ್ತವಾಗಿದೆ. ಗುಣಮಟ್ಟದ, ಸ್ವತಂತ್ರ ತನಿಖಾ ವಿಚಾರದಲ್ಲಿ ಇಡಿ ಟ್ರ್ಯಾಕ್ ತುಂಬಾ ಚೆನ್ನಾಗಿರುವ ಕಾರಣ ಮುಡಾ ಹಗರಣದಲ್ಲಿ ಇಡಿ ನಡೆಸುತ್ತಿರುವ ತನಿಖೆ ಸಂದರ್ಭೋಚಿತವಾಗಿದೆ. ಇಡಿ ಜೊತೆಗೆ ಸಿಬಿಐನಿಂದ ಕೂಡ ತನಿಖೆ ನಡೆಸುವುದು ಕೂಡ ಸೂಕ್ತ ಎಂದು ಅಭಿಪ್ರಾಯಪಟ್ಟರು.

ಮುಡಾ ಹಗರಣದ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿಗೆ ಬಿಜೆಪಿ ಮನವಿ ಮಾಡಲಿದೆ ಎಂದು ಯದುವೀರ್ ತಿಳಿಸಿದರು.

ಇದೇ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಬಳ್ಳಾರಿ ಹಾಗೂ ರಾಯಚೂರು ಲೋಕಸಭಾ ಚುನಾವಣೆಗೆ ವಾಲ್ಮೀಕಿ ಹಗರಣದ ಹಣ ಬಳಕೆಯಾಗಿದೆ ಎಂಬುದು ತನಿಖೆಯಿಂದ ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಸಂಸದ ತುಕರಾಂ ಹಾಗೂ ರಾಯಚೂರು ಸಂಸದ ಕುಮಾರ್ ನಾಯಕ್ ಅವರ ಸಂಸತ್ ಸದಸ್ಯತ್ವದಿಂದ ವಜಾ ಮಾಡುವಂತೆ ಅ.22 ರಂದು ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಧ್ಯಮ ವಕ್ತಾರ ಎಂ.ಜಿ.ಮಹೇಶ್, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಗೌಡ, ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಗೋವಾ, ಕೊಚ್ಚಿನ್ ವಿಮಾನ ಹಾರಾಟಕ್ಕೆ ಮನವಿ

"ಪ್ರಯಾಣಿಕರಿಂದ ಬಾರೀ ಬೇಡಿಕೆ ಇರುವ ಕಾರಣ ಗೋವಾ ಹಾಗೂ ಕೊಚ್ಚಿನ್‌ಗೆ ಮೈಸೂರು ವಿಮಾನ ನಿಲ್ದಾಣದಿಂದ ಎಟಿಆರ್ ವಿಮಾನ ಹಾರಾಟ ಪುನರಾರಂಭಿಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ ನಾಯ್ಡು ಅವರನ್ನು ಕೋರಿದ್ದೇನೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದರು.

ಗೋವಾ ಹಾಗೂ ಕೊಚ್ಚಿನ್‌ಗೆ ವಿಮಾನ ಹಾರಾಟ ಪುನರಾರಂಭಿಸಲು ಸಚಿವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಮಾಡಿ, ಮೇಲ್ದರ್ಜೆಗೇರಿಸಿದರೆ ಹೆಚ್ಚು ವಿಮಾನ ಹಾರಾಟಕ್ಕೆ ಅವಕಾಶ ದೊರೆಯುತ್ತದೆ ಎಂದು ಯದುವೀರ್ ಅಭಿಪ್ರಾಯಪಟ್ಟರು.

# ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮನೆ, ಕಚೇರಿ ಮೇಲೆ ಇಡಿ ದಾಳಿ ಮಾಡಬೇಕು

## ಶಾಸಕ ಟಿ.ಎಸ್.ಶ್ರೀವತ್ಸ ಆಗ್ರಹ

- ಪ್ರಮುಖ ದಾಖಲಾತಿ ಭೈರತಿ ಸುರೇಶ್ ಬಳಿಯೇ ಇವೆ
- ಹಗರಣದ ಕೇಂದ್ರ ವ್ಯಕ್ತಿಗಳಾದ ಹಿಂದಿನ ಆಯುಕ್ತರಾದ ನಟೇಶ್, ದಿನೇಶ್ ಸೇಫ್
- ಮೊದಲು ಈ ಇಬ್ಬರನ್ನು ತನಿಖೆಗೊಳಪಡಿಸಬೇಕು
- ಲೋಕಾಯುಕ್ತರಿಂದ ನಿಷ್ಪಕ್ಷಪಾತ ತನಿಖೆ ಅಸಾಧ್ಯ

ಮೈಸೂರು, ಅ.19(ಬಿಎಲ್‌ಯು)– ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮನೆ ಹಾಗೂ ಕಚೇರಿ ಮೇಲೆ ಇಡಿ ದಾಳಿ ನಡೆಸಿದರೆ ಪ್ರಮುಖ ದಾಖಲಾತಿ ಪತ್ತೆಯಾಗುತ್ತವೆ ಎಂದು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಶನಿವಾರ ನಗರ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡಿಯವರು ಮೈಸೂರಿನ ಮುಡಾ ಕಚೇರಿ ಮೇಲೆ ದಾಳಿ ಮಾಡಿ, ಶೋಧಿಸುತ್ತಿದ್ದಾರೆ. ಆದರೆ ಅವರಿಗೆ ಪ್ರಮುಖ ದಾಖಲಾತಿ ಸಿಗುವುದಿಲ್ಲ ಎಂದು ಹೇಳಿದರು.

ಆದರೆ ಪ್ರಮುಖ ಕಡತಗಳನ್ನು ಎಲ್ಲಿಗೆ ಕೊಂಡೊಯ್ದಿದ್ದಾರೆ ಎಂಬ ಮಾಹಿತಿ ಲಭ್ಯವಾಗುತ್ತದೆ. ಇದರ ಆಧಾರದ ಮೇಲೆ ಭೈರತಿ ಸುರೇಶ್ ಮನೆ ಹಾಗೂ ಕಚೇರಿ ಮೇಲೆ ದಾಳಿ ಮಾಡಿದರೆ ಪ್ರಮುಖ ದಾಖಲಾತಿಗಳು ಪತ್ತೆಯಾಗುತ್ತವೆ ಎಂದರು.

ಇಡಿಯವರು ಮೊದಲು ಮುಡಾ ಹಗರಣದ ಕೇಂದ್ರ ವ್ಯಕ್ತಿಗಳಾದ ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ತನಿಖೆಗೊಳಪಡಿಸಬೇಕು. ಆಗ ಇಡೀ ಹಗರಣದ ಬಹಳಷ್ಟು ಸ್ಫೋಟಕ ಮಾಹಿತಿಗಳು ಬೆಳಕಿಗೆ ಬರಲಿವೆ ಎಂದು ಶ್ರೀವತ್ಸ ಹೇಳಿದರು.

ಮುಡಾದಲ್ಲಿ ಇಷ್ಟೆಲ್ಲಾ ಹಗರಣ ನಡೆದಿದ್ದರೂ, ತನಿಖೆ–ವಿಚಾರಣೆ ನಡೆಯುತ್ತಿದ್ದರೂ ಈ ತನಕ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಲೀ, ಅವರನ್ನು ಬಂಧಿಸುವುದಾಗಲೀ ಆಗಿಲ್ಲ. ಸಾವಿರಾರು ಕೋಟಿಯ ಅವ್ಯವಹಾರ ನಡೆದಿದ್ದರೂ ಈ ತನಕ ಅವರ ವಿರುದ್ಧ ಯಾವುದೇ ಕ್ರಮವಾಗಿಲ್ಲ. ಇದರಿಂದ ಇಬ್ಬರು ಹಗರಣದಿಂದ ಸುರಕ್ಷಿತರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಡಾದಲ್ಲಿ ಶೇಕಡ 50:50 ಅನುಪಾತದಲ್ಲಿ 4,390 ನಿವೇಶನ ಹಂಚಿಕೆಯಾಗಿದ್ದು, ಇದರಲ್ಲಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ತಾವು ಪಡೆದಿದ್ದ 14 ನಿವೇಶನ ವಾಪಸ್ ಮಾಡಿದ್ದಾರೆ. ಇವರಂತೆ ಉಳಿದ ನಿವೇಶನ ವಾಪಸ್ ನೀಡಬೇಕು. ಇಲ್ಲವೆ ಸರ್ಕಾರ ಹಿಂತೆಗೆದುಕೊಳ್ಳಬೇಕು ಎಂದು ಶಾಸಕ ಶ್ರೀವತ್ಸ ಒತ್ತಾಯಿಸಿದರು.

ಮುಡಾ ಆಡಳಿತ ಮಂಡಳಿಯನ್ನು ಸರ್ಕಾರ ವಜಾ ಮಾಡಿದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಕೆಲವು ಶಾಸಕರು ಮಂಡ್ಯ ಹಾಗೂ ಇತರೆಡೆ ವಾಸವಾಗಿದ್ದರೂ ಮೈಸೂರಿನಲ್ಲಿ ವಾಸ ಮಾಡುತ್ತಿರುವುದಾಗಿ ವಿಳಾಸ ಬದಲಾವಣೆ ಮಾಡಿಕೊಂಡು ಮುಡಾ ಸದಸ್ಯರಾಗಿದ್ದಾರೆ. ಮುಡಾಗೆ ಶಾಸಕರ ಸದಸ್ಯತ್ವದ ಅವಶ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಶೇಕಡ 50:50 ಅನುಪಾತದ ನಿವೇಶನ ಹಂಚಿಕೆ ಮಾಡದಂತೆ ನಗರಾಭಿವೃದ್ಧಿ ಕಾರ್ಯದರ್ಶಿ ಪತ್ರ ಬರೆದು ಸೂಚನೆ ನೀಡಿದ್ದರೂ, ಹಿಂದಿನ ಆಯುಕ್ತರಾದ ಡಾ.ನಟೇಶ್ ಹಾಗೂ ದಿನೇಶ್ ಕುಮಾರ್ ಕಾನೂನುಬಾಹಿರವಾಗಿ ಅಕ್ರಮವಾಗಿ ನಿವೇಶನ ಮಂಜೂರು ಮಾಡಿದ್ದಾರೆ ಎಂದು ದೂರಿದರು. ಮೊದಲು ಈ ಇಬ್ಬರು ಅಧಿಕಾರಿಗಳನ್ನು ವಿಚಾರಣೆ ಮಾಡಿದರೆ ಬಹಳಷ್ಟು ಮಾಹಿತಿಗಳು ಲಭ್ಯವಾಗುತ್ತವೆ ಎಂದರು. ಮುಡಾ ಹಗರಣದ ಬಗ್ಗೆ ಸಿಬಿಐ ಹಾಗೂ ಇಡಿ ತನಿಖೆ ಅವಶ್ಯವಿಲ್ಲ ಎಂದು ಕಾಂಗ್ರೆಸ್‌ನವರು ಹೇಳುತ್ತಾರೆ. ತಪ್ಪು ಮಾಡಿದ್ದರೆ ಹೆದರಬೇಕು, ತಪ್ಪು ಮಾಡಿಲ್ಲವೆಂದರೆ ಇವರೇಕೆ ಇಡಿ ಹಾಗೂ ಸಿಬಿಐ ತನಿಖೆಗೆ ಹೆದರಬೇಕಿದೆ ಎಂದು ಪ್ರಶ್ನಿಸಿದರು.

ಲೋಕಾಯುಕ್ತ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನಕ್ಕೊಳಪಡುವ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತನಿಖೆ ನಿಷ್ಪಕ್ಷಪಾತವಾಗಿ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಿಬಿಐ ತನಿಖೆಯಿಂದ ಮಾತ್ರ ನಿಷ್ಪಕ್ಷಪಾತ ತನಿಖೆ ಸಾಧ್ಯ ಎಂದು ಎಲ್.ನಾಗೇಂದ್ರ ಅಭಿಪ್ರಾಯಪಟ್ಟರು.

# ಮುಡಾ ಕೇಸ್‌ನಲ್ಲಿ ನಿಜವಾದ ಕಳ್ಳ ಸಚಿವ ಭೈರತಿ ಸುರೇಶ್

- ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ
- ಸಿಎಂ ಸಿದ್ದರಾಮಯ್ಯ ಬೇನಾಮಿ ಸುರೇಶ್ ಅಂತಾ ಎಲ್ಲರೂ ಹೇಳುತ್ತಾರೆ...!

ಬೆಂಗಳೂರು,ಅ.19–ಮುಡಾ ಕೇಸ್‌ನಲ್ಲಿ ನಿಜವಾದ ಕಳ್ಳ ಸಚಿವ ಭೈರತಿ ಸುರೇಶ್ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.


ನಾರಾಯಣಸ್ವಾಮಿ


ಭೈರತಿ ಸುರೇಶ್

ನಿನ್ನೆ ಗೃಹ ಕಚೇರಿ ಕೃಷ್ಣದಲ್ಲಿ ಸಚಿವ ಬೈರತಿ ಸುರೇಶ್ ಮಾತನಾಡಿ, ಛಲವಾದಿ ನಾರಾಯಣಸ್ವಾಮಿ ಮುಡಾ ದಾಖಲೆ ಕದ್ದಿರಬಹುದು ಎಂದು ಆರೋಪ ಮಾಡಿದ್ದರು. ಇದಕ್ಕೆ ಇಂದು ಛಲವಾದಿ ನಾರಾಯಣಸ್ವಾಮಿ ತಿರುಗೇಟು ನೀಡಿದ್ದಾರೆ.

ಈ ಕುರಿತು ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ಶುಕ್ರವಾರ ಮುಡಾ ಕಚೇರಿ ಮೇಲೆ ಇಡಿ ದಾಳಿ ಮಾಡಿದೆ. ದಾಖಲೆಗಳನ್ನು ಕಲೆ ಹಾಕುತ್ತಿದೆ. ಸಿಎಂ ರಾಜೀನಾಮೆ ಕೊಡಬೇಕು ಎಂದು ಕೇಳಿದ್ದೆ. ಬೈರತಿ ಸುರೇಶ್ ಅವರು ಹೆಲಿಕಾಪ್ಟರ್‌ನಲ್ಲಿ ಹೋಗಿ ದಾಖಲೆ ಹೊತ್ತು ತಂದಿದ್ದರು ಎಂದು ಚರ್ಚೆ ಆಗುತ್ತಿತ್ತು. ಹೀಗಾಗಿ ಅವರನ್ನು ತನಿಖೆ ಮಾಡಬೇಕು ಎಂದು ಹೇಳಿದ್ದೆ. ಇದಕ್ಕೆ ನನ್ನನ್ನೇ ಸುರೇಶ್ ಕಳ್ಳ ಅಂದಿದ್ದಾರೆ. ಆದರೆ ನಿಜವಾದ ಕಳ್ಳ ನೀವು ಎಂದು ಕಿಡಿಕಾರಿದರು.


ಮುಡಾ ಕೇಸ್ ಹೊರಗೆ ಬಂದ ಕೂಡಲೇ ಹೆಲಿಕಾಪ್ಟರ್‌ನಲ್ಲಿ ಮುಡಾ ಕಚೇರಿಗೆ ಹೋಗಿದ್ದು ಸುರೇಶ್. ಅವತ್ತು ಅವರು ಹೆಲಿಕಾಪ್ಟರ್‌ನಲ್ಲಿ ದಾಖಲಾತಿ ತರದೇ ಇದ್ದರೆ ಈ ಕೇಸ್ ಇಷ್ಟು ಹೈಪ್ ಆಗುತ್ತಿರಲಿಲ್ಲ. ಸಿಎಂ ಅವರನ್ನು ಸಿಕ್ಕಿಸಿದ್ದು ಇದೇ ಸುರೇಶ್. ಶುಕ್ರವಾರ ಸುರೇಶ್, ಕುಮಾರಸ್ವಾಮಿ ಫೈಲ್ ತಂದಿರಬಹುದು ಎಂದು ಆರೋಪಿಸಿದರು. ಛಲವಾದಿ ನಾರಾಯಣಸ್ವಾಮಿ ದಾಖಲಾತಿ ಕದ್ದಿದ್ದಾರೆ ಎಂದು ಹೇಳಿದ್ದಾರೆ. ಮಿಸ್ಟರ್ ಸುರೇಶ್ ಅವರೇ, ನೀವು ಮಂತ್ರಿ ಆಗೋಕೆ ಯೋಗ್ಯರು ಅಲ್ಲ. ನಾನು ದಾಖಲಾತಿ ಕದ್ದಿದ್ದರೆ ನೀವು ಏನು ಕಡ್ಲೆಪುರಿ, ಚುರುಮುರಿ ತಿಂತಿದ್ರಾ?, ನನ್ನ ಮೇಲೆ ದೂರು ಕೊಡಬೇಕಿತ್ತು. ನಾಲಿಗೆ ಹೇಗೂ ಹೊರಳುತ್ತೆ ಅಂತ ಮಾತಾಡಬಾರದು. ನನ್ನನ್ನು ಕಳ್ಳ ಅಂತ ಹೇಳಿದ್ದೀರಿ. ಕುಮಾರಸ್ವಾಮಿ ಅವರನ್ನು ಯಾಕೆ ಕಳ್ಳ ಅಂದಿಲ್ಲ. ನಾನು ದಲಿತ ಸಮುದಾಯದವನು ಅಂತ ನನ್ನನ್ನು ಕಳ್ಳ ಅಂದ್ರಾ, ನಾನು ಏನು ಮಾತಾಡಲ್ಲ ಅಂತ ನನ್ನನ್ನ ಕಳ್ಳ ಅಂದ್ರಾ. ಸಮಯ ಬಂದಾಗ ನಮ್ಮ ಸಮುದಾಯದ ಜನ ನಿಮಗೆ ಉತ್ತರ ಕೊಡುತ್ತಾರೆ. ತಪ್ಪು ಮಾಡಿದ್ದು ನೀವು. ನೀವು ಕಳ್ಳ ಎಂದು ವಾಗ್ದಾಳಿ ನಡೆಸಿದರು.

ನಿಮಗೆ ತಾಕತ್ ಇದ್ದರೆ ನನ್ನ ಮೇಲೆ ಒಂದು ಕೇಸ್ ಹೇಳಿ ನೋಡೋಣ. ಬಿರಿಯಾನಿ ಅಂಗಡಿ ಇಟ್ಟಿದ್ದಾನೆ ಛಲವಾದಿ ನಾರಾಯಣಸ್ವಾಮಿ ಅಂತ ನಿಮಗೆ ಹೊಟ್ಟೆ ಉರಿ. ನಾನು ಯಾವುದೇ ಬಿರಿಯಾನಿ ಅಂಗಡಿ ಇಟ್ಟಿಲ್ಲ. ದಲಿತರು ಅಂಗಡಿ ಇಟ್ಟರೆ ನೀವು ತಿನ್ನುತ್ತೀರಾ? ಹಾರಿಕೆ ಉತ್ತರ ನೀಡೋದು, ಅಪಾದನೆ ಮಾಡೋದು ಕಾಂಗ್ರೆಸ್‌ಗೆ ಒಂದು ಚಟ ಆಗಿದೆ. ಮುಡಾ ಫೈಲ್ ಕದ್ದು ತಂದಿದ್ದು ನೀವು. ವೈಟ್ನರ್ ಹಾಕಿದ್ದು ಯಾರು?. ನೀವು ಕದ್ದು ಆಸ್ತಿ ಮಾಡಿರೋದು ಪಟ್ಟಿ ಹೇಳಲಾ? ನೂರಾರು ಇದೆ. ನನ್ನನ್ನು ಕೆಣಕಿದರೆ ನಾನು ಸುಮ್ಮನೆ ಇರಲ್ಲ. ನಾನು ಯಾರಿಗೂ ಜಗ್ಗೋನು ಅಲ್ಲ, ಬಗ್ಗೋದು ಇಲ್ಲ ನೀವು ಯಾರಿಗೂ ಜಗ್ಗಲ್ಲ ಅಂದರೆ ಯಾಕೆ ಸೈಟ್ ವಾಪಸ್ ಕೊಟ್ರಿ ಎಂದು ಪ್ರಶ್ನಿಸಿದರು.

ಇಡಿ ಕೇಳಿದಾಗ ತಕ್ಷಣ ದಾಖಲೆ ಕೊಡಬೇಕಿತ್ತು 3 ಸಾರಿ ನೋಟಿಸ್ ಬಂದರೂ ಯಾಕೆ ದಾಖಲೆ ಕೊಡಲಿಲ್ಲ. ಸಿದ್ದರಾಮಯ್ಯ ಬೇನಾಮಿ ಸುರೇಶ್ ಎಂದು ಎಲ್ಲರೂ ಹೇಳುತ್ತಾರೆ. ನೀವು ಏನು ಕದ್ದಿದ್ದೀರಿ ಎಂದು ನಾನು ಮುಂದೆ ಸಾಬೀತು ಮಾಡುತ್ತೇನೆ ಎಂದು ಸವಾಲು ಹಾಕಿದರು.

### ಜೆಡಿಎಸ್‌ಗೆ ಪುನರ್ಜನ್ಮ ಕೊಟ್ಟಿದ್ದೇವೆ; ಕುಮಾರಸ್ವಾಮಿ ಚನ್ನಪಟ್ಟಣ ತ್ಯಾಗ ಮಾಡಲಿ

ಹುಬ್ಬಳ್ಳಿ: ಜೆಡಿಎಸ್‌ಗೆ ನಾವು ಪುನರ್ಜನ್ಮ ನೀಡಿದ್ದೇವೆ. ಹೀಗಾಗಿ ಹೆಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಟಿಕೆಟ್ ತ್ಯಾಗ ಮಾಡಲಿ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹಿಸಿದ್ದಾರೆ.


ಯತ್ನಾಳ್

ಹುಬ್ಬಳ್ಳಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ನಮಗೆ ಹೆಚ್.ಡಿ.ಕುಮಾರಸ್ವಾಮಿ ಸಹಾಯಬೇಕು. ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರ ಶಕ್ತಿ ಬೇಕು. ಮೈತ್ರಿಯಿಂದ ಎರಡೂ ಪಕ್ಷದವರಿಗೆ ಲಾಭ ಆಗಿದೆ. ನಮ್ಮ ಪಕ್ಷದ ಕಾರ್ಯಕರ್ತರಿಗೆ ಟಿಕೆಟ್ ಕೊಡಬೇಕು ಎಂಬುದು ಮುಖ್ಯ. ನಾವು ಜೆಡಿಎಸ್‌ಗೆ ಪುನರ್ಜನ್ಮ ಕೊಟ್ಟಿದ್ದೇವೆ. ಹೀಗಾಗಿ ಕುಮಾರಸ್ವಾಮಿ ಟಿಕೆಟ್ ತ್ಯಾಗ ಮಾಡಬೇಕು, ಚನ್ನಪಟ್ಟಣದಲ್ಲಿ ಸಿಪಿ ಯೋಗೇಶ್ವರ್‌ಗೆ ಎನ್‌ಡಿಎ ಟಿಕೆಟ್ ನೀಡಬೇಕು ಎಂದು ಹೇಳಿದರು.

# ಸಿಎಂ ಸಿದ್ದರಾಮಯ್ಯ ವಿರುದ್ಧ ಕೇಂದ್ರದ ಷಡ್ಯಂತ್ರ

## ಕಾಂಗ್ರೆಸ್ ನೇತೃತ್ವದಲ್ಲಿ ಪಂಜಿನ ಪ್ರತಿಭಟನೆ

ಮೈಸೂರು, ಅ.19(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಸಲು ಹಾಗೂ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಬಿಜೆಪಿ ಸರ್ಕಾರ ಇಡಿ(ಜಾರಿ ನಿರ್ದೇಶನಾಲಯ)ಯನ್ನು ತನ್ನ ಕೈಗೊಂಬೆಯನ್ನಾಗಿಸಿಕೊಂಡಿದೆ ಎಂದು ಆರೋಪಿಸಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ, ದಲಿತ ಮಹಾಸಭಾ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಪಂಜಿನ ಪ್ರತಿಭಟನೆ ನಡೆಸಲಾಯಿತು.


ಟೌನ್‌ಹಾಲ್ ಎದುರು ಶನಿವಾರ ಪಂಜಿನ ಪ್ರತಿಭಟನೆ ನಡೆಸಲಾಯಿತು.

ನಗರದ ಟೌನ್‌ಹಾಲ್ ಎದುರಿನ ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಕೈಯಲ್ಲಿ ಪಂಜು ಹಿಡಿದು ಕೇಂದ್ರ ಬಿಜೆಪಿ ಸರ್ಕಾರ, ರಾಜ್ಯ ಬಿಜೆಪಿ ನಾಯಕರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ರಾಜ್ಯದ ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ಎಣೆಯಲಾಗಿದೆ. ಇಡಿ ಕೇಂದ್ರ ಸರ್ಕಾರದ ಕೈಗೊಂಬೆಯಾಗಿದೆ ಎಂದು ಕಿಡಿಕಾರಿದರು. ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನೇರವಾಗಿ ಎದುರಿಸಲು ಸಾಧ್ಯವಿಲ್ಲ. ಅವರ ಹಿಂದೆ ಇಡೀ ಅಹಿಂದ ಸಮುದಾಯವಿದೆ ಎಂದು ಕೇಂದ್ರ ಬಿಜೆಪಿ ಸರ್ಕಾರ ಕುತಂತ್ರದ ಹಾದಿ ಹಿಡಿದಿದೆ. ಇಡಿ ಅಧಿಕಾರಿಗಳ ಮುಂದಿಟ್ಟುಕೊಂಡು ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಯವರ ರಾಜಕೀಯ ಹುನ್ನಾರಕ್ಕೆ ಅಹಿಂದ ಸಮುದಾಯ ತಕ್ಕ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು. ದಲಿತ ಮಹಾಸಭಾದ ಎಸ್.ಮರಿದೇವಯ್ಯ ಮಾತನಾಡಿ, ಸಿದ್ದರಾಮಯ್ಯ ಅವರ ವಿರುದ್ಧ ದ್ವೇಷ ಸಾಧನೆಗಾಗಿಯೇ ಮುಡಾ ಮೇಲೆ ಇಡಿ ದಾಳಿ ನಡೆಸಿರುವುದು ಖಂಡನೀಯ. ಸಿದ್ದರಾಮಯ್ಯ ಅವರನ್ನು ಎದುರಿಸಲು ಬಿಜೆಪಿಯಲ್ಲಿ ಸಮರ್ಥ ನಾಯಕರೂ ಇಲ್ಲ. ವಿರೋಧ ಪಕ್ಷದ ನಾಯಕರೂ ಇಲ್ಲ. ಆದ್ದರಿಂದ ಹೇಗಾದರೂ ಮಾಡಿ ಅಧಿಕಾರದಿಂದ ಕೆಳಗಿಸಲೇಬೇಕು ಎಂದು ಪಿತೂರಿ ನಡೆಸುತ್ತಿದ್ದಾರೆ.

ಜನಪರ ಸರ್ಕಾರವನ್ನು ಸಹಿಸದೆ ಈ ರೀತಿಯ ವಾಮಮಾರ್ಗ ಹಿಡಿದಿದ್ದಾರೆ. ಇದೇ ರೀತಿ ಬಿಜೆಪಿ ದ್ವೇಷದ ರಾಜಕಾರಣ ಮುಂದುವರಿಸಿದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ಲೋಕೇಶ್ ಮಾದಾಪುರ, ಯೋಗೇಶ್, ರವಿನಂದನ್, ಪ್ರಕಾಶ್, ರವಿ, ಸಿದ್ದರಾಜು, ಕೇಶವ, ಸುನೀಲ್, ರವಿನಾಯಕ, ಶ್ರೀನಿವಾಸ್ ಮತ್ತಿತರರಿದ್ದರು.

# 1100 ನಿರುದ್ಯೋಗಿಗಳಿಗೆ ಉದ್ಯೋಗ, ಇದು ಅಂತ್ಯವಲ್ಲ ಆರಂಭ

## ಎರಡು ದಿನಗಳ ಉದ್ಯೋಗ ಮೇಳ ಯಶಸ್ವಿಯಾಗಿದೆ: ಕೇಂದ್ರ ಸಚಿವ ಕುಮಾರಸ್ವಾಮಿ



ಪ್ರತಿಷ್ಠಿತ ಟಾಟಾ ಮೋಟಾರ್ಸ್ ಕಂಪನಿಯಲ್ಲಿ ಉದ್ಯೋಗ ಪಡೆದ ಅವಳಿ ಯುವತಿಯರಾದ ನವ್ಯಾ ಮತ್ತು ನಂದಿತಾ ಅವರಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ನೇಮಕಾತಿ ಆದೇಶ ಪತ್ರ ವಿತರಿಸಿದರು.

### ಮಳವಳ್ಳಿ, ನಾಗಮಂಗಲದಲ್ಲಿ ಕಾರ್ಖಾನೆ

ಮಂಡ್ಯ ಜಿಲ್ಲೆಯ ಮಳವಳ್ಳಿ, ನಾಗಮಂಗಲದ ಕಡೆ ಕೆಲವು ಕಾರ್ಖಾನೆ ತರಲು ಪ್ರಯತ್ನಿಸುತ್ತೇನೆ. ರಾಜ್ಯ-ರಾಜ್ಯಗಳ ನಡುವೆ ಸ್ಪರ್ಧೆ ಇದೆ. ನನಗೆ ಸಿಕ್ಕಿರುವ ಅಧಿಕಾರವನ್ನು ಸದ್ಬಳಕೆ ಮಾಡಿಕೊಂಡು, ಹೊಸ ಉದ್ಯಮ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಉತ್ತಮ ಉದ್ಯೋಗ ಕಲ್ಪಿಸಲು ಚಾಮುಂಡೇಶ್ವರಿ ಅನುಗ್ರಹ ನಮ್ಮ ಮೇಲೆ ಇದೆ ಎಂದು ಭಾವಿಸಿದ್ದೇನೆ. ನಾನು ಸಿಎಂ ಆಗಿದ್ದಾಗ ಜನತಾ ದರ್ಶನದಲ್ಲಿ ಸ್ಥಳದಲ್ಲೇ ಪರಿಹಾರ ಕಲ್ಪಿಸಲು ಕ್ರಮ ಕೈಗೊಂಡಿದ್ದೆ. ಒಂದು ಸಾವಿರ ವಿಕಲಚೇತನರಿಗೆ ಉದ್ಯೋಗ ಕೊಡಿಸಿದ್ದೆ. ಮುಂದೆ ಬಂದ ಸರ್ಕಾರ ಅವರನ್ನು ಪರ್ಮನೆಂಟ್ ಮಾಡಲಿಲ್ಲ. ಮತ್ತೆ ಸಿಎಂ ಆದಾಗ 700-800 ಅಂಗವಿಕಲರನ್ನು ಪರ್ಮನೆಂಟ್ ಮಾಡಿಸಲು ಕ್ರಮ ಕೈಗೊಂಡೆ. ಅವರುಗಳು ಒಂದು ಲಕ್ಷದವರೆಗೆ ಸಂಬಳ ತೆಗೆದುಕೊಂಡು ನೆಮ್ಮದಿಯಾಗಿ ಬದುಕುತ್ತಿದ್ದಾರೆ.- **ಹೆಚ್.ಡಿ.ಕುಮಾರಸ್ವಾಮಿ**



ನಾನು ಎಂಜಿನಿಯರಿಂಗ್ ಓದಿದ್ದೇನೆ. ಟೆಕ್ಸ್ ಕಂಪನಿಯಲ್ಲಿ ಉದ್ಯೋಗ ಸಿಕ್ಕಿದೆ. ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರಿಗೆ ಧನ್ಯವಾದಗಳು. ಮೊದಲ ಬಾರಿಗೆ ಉದ್ಯೋಗ ಮೇಳದಲ್ಲಿ ಪಾಲ್ಗೊಂಡ ತಕ್ಷಣವೇ ಉದ್ಯೋಗ ಸಿಕ್ಕಿರುವುದು ಖುಷಿ ತಂದಿದೆ. ಎರಡು ರೌಂಡ್‌ನಲ್ಲಿ ಇಂಟರ್‌ವ್ಯೂ ಎದುರಿಸಿದ್ದೆ. ಎರಡು ರೌಂಡ್‌ನಲ್ಲೂ ಆಯ್ಕೆಯಾಗಿದ್ದೇನೆ. ಕೆಲಸ ಸಿಕ್ಕಿರುವುದು ಖುಷಿ ತಂದಿದೆ.- **ಭೂಮಿಕಾ, ಕಲ್ಲಹಳ್ಳಿ, ಮಂಡ್ಯ**

ಮಂಡ್ಯ,ಅ.19(ಮೋಹನ್‌ರಾಜ್)- ಕಳೆದೆರಡು ದಿನಗಳಿಂದ ಮಂಡ್ಯದಲ್ಲಿ ನಡೆದ ಉದ್ಯೋಗ ಮೇಳದಲ್ಲಿ 1100 ನಿರುದ್ಯೋಗಿಗಳಿಗೆ ಉದ್ಯೋಗ ನೀಡಲಾಗಿದೆ. ಮೇಳದಲ್ಲಿ 5ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದರು. ಅವರಲ್ಲಿ ಹಲವರಿಗೆ ಉದ್ಯೋಗ ಪತ್ರ ನೀಡಿದ್ದೇನೆ. ಮನೆ ಬಾಗಿಲಿನಲ್ಲೇ ಕೆಲಸ ಕೊಡುವುದು ಕಷ್ಟ, ಇಂತಹ ಕಾರ್ಯಕ್ರಮ ಅಂತ್ಯವಲ್ಲ, ಆರಂಭ ಎಂದು ಕೇಂದ್ರದ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಉದ್ಯೋಗ ಮೇಳ(ಮಂಡ್ಯ ಟು ಇಂಡಿಯಾ)ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಉದ್ಯೋಗಾಕಾಂಕ್ಷಿಗಳಿಗೆ ಸಂದರ್ಶನ ಮತ್ತು ಆದೇಶ ಪ್ರತಿ ನೀಡಿ ಮಾತನಾಡಿದ ಅವರು, ಎರಡು ದಿನ ಉದ್ಯೋಗ ಮೇಳ ಯಶಸ್ಸಿಗೆ ಕಾರಣಕರ್ತರಾಗಿರುವ ಕಂಪನಿಗಳು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮತ್ತು ಎನ್‌ಸಿಸಿ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ಉದ್ಯೋಗ ಪತ್ರ ಪಡೆದಿರುವ ಕೆಲವರಿಗೆ ಬೇರೆ ಕಡೆ ಹೋಗಲು ಹಿಂಜರಿಕೆ ಇದೆ ವಿಶ್ವಾಸದ ಕೊರತೆ ಕಾಣುತ್ತಿದೆ ಆದರೆ ಧೈರ್ಯದಿಂದ ತಮ್ಮ ಜೀವನ ರೂಪಿಸಿಕೊಳ್ಳಲು ಮುಂದಾಗಿ ಎಂದು ಕರೆ ನೀಡಿದರು.

ಕೇಂದ್ರ ಮಂತ್ರಿಯಾದ ನಂತರ ಸ್ಟೀಲ್ ಉತ್ಪಾದಕ ಕಂಪನಿಗಳಿಗೆ ಭೇಟಿ ನೀಡಿದ್ದೇನೆ. ತಮಿಳುನಾಡಿನಲ್ಲಿ ಸ್ವಲ್ಪ ಸಮಸ್ಯೆ ಎದುರಿಸುತ್ತಿದ್ದಾರೆ. ಹಲವಾರು ಕನ್ನಡಿಗರು 25 ವರ್ಷಗಳಿಂದ ನೆಮ್ಮದಿಯಾಗಿ ಬದುಕು ಕಟ್ಟಿಕೊಂಡಿದ್ದಾರೆ. ಛತ್ತೀಸ್‌ಘಡ್ ಬಿಲಾಯಿ ಸ್ಟೀಲ್ ಇಂಡಸ್ಟ್ರಿ ಪ್ಲಾಂಟ್‌ನಲ್ಲಿ ಕನ್ನಡ ಸಂಘ ಕಟ್ಟಿದ್ದಾರೆ. 800 ಕುಟುಂಬಗಳ ಕೆಲವರು ನಿವೃತ್ತಿಯಾದ ನಂತರವೂ ಅಲ್ಲೇ ಉಳಿದಿದ್ದಾರೆ. ಕರ್ನಾಟಕಕ್ಕೆ ಬಾರದೇ ಅಲ್ಲೇ ನೆಮ್ಮದಿಯಿಂದ ಬದುಕುತ್ತಿದ್ದೇವೆ ಎನ್ನುತ್ತಾರೆ. ಇಂತಹ ಜನರು ನಮ್ಮ ಯುವಕರಿಗೆ ಮಾದರಿ ಎಂದರು.

ಅಮೆರಿಕದಲ್ಲಿ ಮಂಡ್ಯದ 400 ರಿಂದ 500 ಕುಟುಂಬಗಳಿವೆ ಬೆಂಗಳೂರು, ಚೆನ್ನೈಗೆ ಹೋಗಲು ನಮ್ಮ ಯುವಕರು ಹಿಂಜರಿಯುತ್ತಾರೆ. ಬೆಂಜ್ ಕಂಪನಿಯು ವಾರ್ಷಿಕ 6 ಲಕ್ಷ, ಹೋಂಡಾ ಕಂಪನಿಯು ವಾರ್ಷಿಕ 8 ಲಕ್ಷದ ಉದ್ಯೋಗ ನೀಡಿವೆ. ನಾಲ್ಕೂವರೆ ಸಾವಿರ ಉದ್ಯೋಗಾಕಾಂಕ್ಷಿಗಳು ನಮ್ಮ ಸಂಸದರ ಕಚೇರಿಗೆ ಭೇಟಿ ನೀಡಿ. ಮುಂದಿನ 3 ತಿಂಗಳ ಒಳಗೆ ಉದ್ಯೋಗ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇವೆ. ಕಂಪ್ಯೂಟರ್, ಎಲೆಕ್ಟ್ರಾನಿಕ್ ಓದಿದವರಿಗೆ 100ರಲ್ಲಿ 70ರಷ್ಟು ಮಂದಿಗೆ ಉದ್ಯೋಗ ಕಲ್ಪಿಸಲಾಗುವುದು. ಬಿಇ ಸಿವಿಲ್ ಮಾಡಿದವರು ದೇಶದ ಯಾವುದೇ ಭಾಗಕ್ಕೆ ಹೋಗಲು ತಯಾರಾದರೆ ಉದ್ಯೋಗ ಕೊಡಿಸಲು ಅನುಕೂಲ ಕಲ್ಪಿಸುವೆ ಎಂದರು.

ಉದ್ಯೋಗದ ವಿಂಗ್ ರಚಿಸಲಾಗುವುದು. ಅಂತಿಮ ವರ್ಷದಲ್ಲಿ ಓದುತ್ತಿರುವವರು ಮುಂದಿನ ಮೇ ತಿಂಗಳಲ್ಲಿ ಉದ್ಯೋಗ ಕಲ್ಪಿಸಲು ಚರ್ಚೆ ನಡೆಸುತ್ತಿದ್ದೇನೆ. ಕೆಲಸ ಸಿಗದವರು ನಿರಾಸೆಗೊಳ್ಳಬೇಡಿ. ನೀವು ಕೊಟ್ಟಿರುವ ಅಧಿಕಾರದ ಶಕ್ತಿಯನ್ನು ನಿಮಗೇ ಧಾರೆ ಎರೆಯುತ್ತೇನೆ. ನನಗೆ ಸಂಪೂರ್ಣ ಅಧಿಕಾರ ಸಿಕ್ಕಿದ್ದರೆ ಪ್ರತಿ ಜಿಲ್ಲೆಯಲ್ಲಿ 1 ಲಕ್ಷ ಉದ್ಯೋಗ ಕಲ್ಪಿಸುತ್ತಿದ್ದೆ. ನನಗೆ 5 ವರ್ಷಗಳ ಅಧಿಕಾರ ಸಿಕ್ಕಿಲ್ಲ. ಮುಂದಿನ ದಿನಗಳಲ್ಲಿ ಪೂರ್ಣಾವಧಿ ಸರ್ಕಾರದ ಅವಕಾಶ ಸಿಕ್ಕಿದರೆ ನಿರುದ್ಯೋಗ ನಿವಾರಣೆ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಪ್ರಧಾನಿ ಮೋದಿ ಅವರು ನಿರುದ್ಯೋಗ ನಿವಾರಣೆಗೆ ಯಾವ ಕಾರ್ಯಕ್ರಮ, ಯೋಜನೆ ತರಬೇಕು ಅಂತ ಚರ್ಚಿಸುತ್ತಿದ್ದಾರೆ. ಕೆಲವು ಯೋಜನೆಗಳಲ್ಲಿರುವ ಲೋಪಗಳನ್ನು ಸರಿಪಡಿಸಲು ಚಿಂತನೆ ನಡೆಸುತ್ತಿದ್ದಾರೆ. ನಾಗಾಲ್ಯಾಂಡ್, ವೈಜಾಗ್‌ನಲ್ಲಿ ನಿಂತಿರುವ ಕಾರ್ಖಾನೆಗಳಿಗೆ ಮರುಜೀವ ಕೊಡಲು ಕ್ರಮ ಕೈಗೊಂಡಿದ್ದೇವೆ. ವಿಎಸ್‌ಎಲ್ ಕಾರ್ಖಾನೆ ಪುನಶ್ಚೇತನ ಮಾಡಲು 15 ಸಾವಿರ ಕೋಟಿ ಬೇಕು. ಎಚ್‌ಎಂಟಿಯ 6 ಯುನಿಟ್‌ಗಳಿವೆ. ಆದರೆ ಅವು ಮುಚ್ಚಿ ಹೋಗಿವೆ. ರಾತ್ರೋರಾತ್ರಿ ನೂರಾರು ಎಂಜಿನಿಯರ್‌ಗಳು ರಾಜೀನಾಮೆ ಕೊಟ್ಟು ಖಾಸಗಿ ಕಂಪನಿಗಳಿಗೆ ಹೋದ ಪರಿಣಾಮ ಎಚ್‌ಎಂಟಿ ಕಂಪನಿಗೆ ಹಿನ್ನಡೆಯಾಯಿತು. ಜೀವನದಲ್ಲಿ ಅಸಾಧ್ಯ ಯಾವುದೂ ಇಲ್ಲ, ಛಲವಿದ್ದರೆ ಏನು ಬೇಕಾದರೂ ಸಾಧನೆ ಮಾಡಬಹುದು ಎಂದು ಉದ್ಯೋಗಾಕಾಂಕ್ಷಿಗಳಿಗೆ ಕರೆ ನೀಡಿದರು.

ವೇದಿಕೆಯಲ್ಲಿ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಬಂಡೆಪ್ಪ ಕಾಶೆಂಪುರ, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ, ಶಾಸಕರಾದ ಹೆಚ್.ಟಿ.ಮಂಜು, ಕೆ.ವಿವೇಕಾನಂದ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಉಪಾಧ್ಯಕ್ಷ ಎಂ.ಪಿ.ಅರುಣ್‌ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಶಿರೂರು ದುರಂತದಲ್ಲಿ ತಂದೆ ಕಳೆದುಕೊಂಡ ಯುವತಿ ಸೇರಿ ಹಲವರಿಗೆ ಉದ್ಯೋಗಾದೇಶ ಪತ್ರ ವಿತರಣೆ



ವಿಶೇಷ ಚೇತನ ಯುವಕ ಅಜಯ್ ಕುಮಾರ್‌ಗೆ ಅಲೋರಿಕಾ ಗ್ಲೋಬಲ್ ಬಿಪಿಒ ಕಂಪನಿಯ ಉದ್ಯೋಗ ಸಿಕ್ಕಿದ್ದು, ನೇಮಕಾತಿ ಆದೇಶ ಪತ್ರವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ವಿತರಿಸಿದರು.



ಶಿರೂರು ಗುಡ್ಡ ಕುಸಿತ ದುರಂತದಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡ ಕೃತಿಕಾ ಎಂಬ ಯುವತಿಗೆ ಬಿಎಚ್‌ಇಎಲ್ ಕಂಪನಿಯಲ್ಲಿ ಉದ್ಯೋಗ ದೊರೆತಿದ್ದು, ಆದೇಶ ಪ್ರತಿಯನ್ನು ಕೇಂದ್ರ ಸಚಿವ ಕುಮಾರಸ್ವಾಮಿ ವಿತರಿಸಿದರು.

**ಮಂಡ್ಯ:** ಉದ್ಯೋಗ ಮೇಳದಲ್ಲಿ ಪ್ರಮುಖವಾಗಿ ಉತ್ತರ ಕನ್ನಡ ಜಿಲ್ಲೆಯ ಶಿರೂರು ಗುಡ್ಡ ಕುಸಿತ ದುರಂತದಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡ ಕೃತಿಕಾ ಎಂಬ ಯುವತಿಗೆ ಬಿಎಚ್‌ಇಎಲ್ ಕಂಪನಿಯಲ್ಲಿ ಉದ್ಯೋಗ ದೊರೆತಿದ್ದು, ಕುಮಾರಸ್ವಾಮಿ ಅವರು ನೇರ ನೇಮಕಾತಿ ಆದೇಶ ಪತ್ರ ನೀಡಿದರು. ಗುಡ್ಡ ಕುಸಿತ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದ ಹೆಚ್ಡಿಕೆ, ತಂದೆ ಕಳೆದುಕೊಂಡ ಯುವತಿಗೆ ಉದ್ಯೋಗ ಕೊಡಿಸುವ ಭರವಸೆ ನೀಡಿದ್ದರು. ಅದರಂತೆ ಮಂಡ್ಯಗೆ ಶನಿವಾರ ಕರೆಸಿ, ನೇರ ನೇಮಕಾತಿಯ ಆದೇಶ ಪ್ರತಿಯನ್ನು ವಿತರಿಸಿದರು.

ಮತ್ತೊಂದು ವಿಶೇಷ ಎಂದರೆ ವಿಶೇಷ ಚೇತನ ಯುವಕ ಅಜಯ್ ಕುಮಾರ್ ಎಂಬುವವರಿಗೆ ಅಲೋರಿಕಾ ಗ್ಲೋಬಲ್ ಬಿಪಿಒ ಕಂಪನಿಯಲ್ಲಿ ಉದ್ಯೋಗ ನೀಡಲಾಯಿತು. ಇವರಿಗೂ ಸಹ ಕಂಪನಿಯು ಈ ಮೇಲ್ ನಿಂದ ನೇರ ನೇಮಕಾತಿ ಆದೇಶ ಪತ್ರ ಬಂದಿದ್ದು, ಕೇಂದ್ರ ಸಚಿವರು ಅಭಿನಂದಿಸಿದರು. ಇದಲ್ಲದೇ ಖಾಸಗಿ ರಂಗದ ಪ್ರತಿಷ್ಠಿತ ಟಾಟಾ ಮೋಟಾರ್ಸ್ ಕಂಪನಿಯಲ್ಲಿ ಉದ್ಯೋಗ ಪಡೆದ ಅವಳಿ ಯುವತಿಯರಾದ ನವ್ಯಾ ಮತ್ತು ನಂದಿತಾ ಎಂಬುವವರಿಗೆ ಕುಮಾರಸ್ವಾಮಿ ನೇಮಕಾತಿ ಆದೇಶ ಪತ್ರ ವಿತರಿಸಿದರು. ಇವೆಲ್ಲವೂ ಸೇರಿದಂತೆ ಬಹುತೇಕ ಕಂಪನಿಗಳು ನೂರಾರು ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಿದರೆ, ಇನ್ನು ಕೆಲವು ಕಂಪನಿಗಳು ಸಂದರ್ಶನಕ್ಕೆ ಬರುವಂತೆ ಆಹ್ವಾನ ಪತ್ರ ನೀಡಿವೆ.

## ಕಿಕ್ಕೇರಿ ಬಳಿ ಚಿರತೆ ದಾಳಿಗೆ ಸಾಕು ನಾಯಿ ಬಲಿ

**ಕಿಕ್ಕೇರಿ:** ಹೋಬಳಿಯ ಐಕನಹಳ್ಳಿ ಗ್ರಾಮದ ಹೊರವಲಯದ ತೋಟದ ಮನೆಗೆ ಚಿರತೆ ನುಗ್ಗಿ ಸಾಕು ನಾಯಿ ತಿಂದು ಹಾಕಿರುವ ಘಟನೆ ಶುಕ್ರವಾರ ರಾತ್ರಿ ಜರುಗಿದೆ.

ಚಿರತೆ ದಾಳಿಗೆ ಮೃತಪಟ್ಟ ನಾಯಿ ಗ್ರಾಮದ ಮಿಠಾಯಿ ಬಿ.ಬಾಲಚಂದ್ರ ಅವರದಾಗಿದೆ. ಗ್ರಾಮದ ಹೊರವಲಯದ ತೋಟದಲ್ಲಿ ಕೃಷಿ ಜೊತೆಗೆ ಮಿಠಾಯಿ ತಯಾರಿಕೆ ಮಾಡಲು ಷೆಡ್ ನಿರ್ಮಿಸಿಕೊಂಡಿದ್ದರು. ಇಲ್ಲಿ ಇವರ ತಂದೆ ಬಸವಶೆಟ್ಟಿ ರಾತ್ರಿ ವೇಳೆ ಮಲಗುತ್ತಿದ್ದರು.

ಎಂದಿನಂತೆ ನಾಯಿಯನ್ನು ಷೆಡ್ ಮುಂದೆ ಕಟ್ಟಿಹಾಕಿದ್ದರು. ತಡರಾತ್ರಿಯಲ್ಲಿ ಚಿರತೆ ತೋಟಕ್ಕೆ ನುಗ್ಗಿ ಕಟ್ಟಿಹಾಕಲಾಗಿದ್ದ ನಾಯಿಯ ದೇಹವನ್ನು ತಿಂದು ತಲೆ ಬಿಟ್ಟು ಹೋಗಿದೆ.



ಬೆಳಗ್ಗೆ ನಾಯಿ ಶಬ್ಧವಿಲ್ಲದಿರುವುದನ್ನು ಕಂಡು ನೋಡಲಾಗಿ ನಾಯಿ ತಲೆ ಮಾತ್ರ ಇರುವುದು ಕಂಡು ಗಾಬರಿಗೊಂಡಿದ್ದಾರೆ. ನಂತರ ಗ್ರಾಮಸ್ಥರು ಸ್ಥಳ ಪರಿಶೀಲನೆ ನಡೆಸಲಾಗಿ ತೋಟದಲ್ಲಿ ಚಿರತೆ ಓಡಾಟದ ಹೆಜ್ಜೆ ಗುರುತು ಕಂಡಿದ್ದಾರೆ. ಷೆಡ್ ಮುಂದೆ ಅಳವಡಿಸಲಾಗಿದ್ದ ಸಿಸಿ. ಕ್ಯಾಮೆರಾ ಫೂಟೇಜ್ ನೋಡಲಾಗಿ ಚಿರತೆ ಬಂದಿರುವುದು ಕಾಣಿಸಿದೆ

## ನಿಶ್ಚಿತಾರ್ಥಕ್ಕೆ ಬಟ್ಟೆ ತರಲು ಹೋಗಿದ್ದ ಯುವಕ ನಾಪತ್ತೆ

ಶ್ರೀರಂಗಪಟ್ಟಣ,ಅ,19-ನಿಶ್ಚಿತಾರ್ಥದ ಉಂಗುರ ಹಾಗೂ ಬಟ್ಟೆ ತರಲು ಹೋಗಿದ್ದ ಕೆ.ಆರ್.ಸಾಗರ ಗ್ರಾಮದ ಜನತಾ ಕಾಲೋನಿ ನಿವಾಸಿ ಕುಮಾರ (29) ನಾಪತ್ತೆಯಾಗಿದ್ದಾರೆ. ಈತನ ಬಗ್ಗೆ ಮಾಹಿತಿ ಸಿಕ್ಕರೆ ಪ್ರಕರಣ ದಾಖಲಾಗಿರುವ ಕೆ.ಆರ್.ಸಾಗರ ಪೊಲೀಸ್ ಠಾಣೆ ಅಥವಾ ಪಿ.ಎಸ್ಐ ಮೊಬೈಲ್ ಸಂಖ್ಯೆ 9480804856 ಸಂಪರ್ಕಿಸಲು ಕೋರಲಾಗಿದೆ.



## ಕಬ್ಬು ನುರಿಸುವ ಕಾರ್ಯ ಪ್ರಾರಂಭ

ಮಂಡ್ಯ,ಅ.19- ಮೈಸೂರು ಸಕ್ಕರೆ ಕಂಪನಿಯಲ್ಲಿ 2024-25 ನೇ ಸಾಲಿನ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಪ್ರಸ್ತುತ ಉತ್ಪಾದನೆಯಾಗುತ್ತಿರುವ ಸಕ್ಕರೆ ಎಸ್.30 (2024-25 ನೇ ಸಾಲು) ಮತ್ತು ಎಂ.30 (2023-24ನೇ ಸಾಲು) ಮಾರಾಟ ಮಾಡಲು ನವದೆಹಲಿಯ ಸಕ್ಕರೆ ನಿರ್ದೇಶಕರ ಆದೇಶದಂತೆ ಅಕ್ಟೋಬರ್ ಮಾಹೆಯ ದರ ರೂ.36.80 ಪ್ರತಿ ಕೆ.ಜಿಗೆ ನಿಗದಿಪಡಿಸಲಾಗಿದೆ. ಆದ್ದರಿಂದ ಆಸಕ್ತರು ಅಗತ್ಯ ದಾಖಲಾತಿಗಳೊಂದಿಗೆ ಭದ್ರತಾ ಕಛೇರಿಗೆ ಭೇಟಿ ನೀಡಿ ಸಕ್ಕರೆ ಗುಣಮಟ್ಟವನ್ನು ಪರಿಶೀಲಿಸಬಹುದಾಗಿರುತ್ತದೆ. ನಂತರ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9845937173/7353328103 ಮುಂದುವರೆದು. ಸಕ್ಕರೆಯನ್ನು ಎತ್ತುವಳಿ ಮಾಡಲು ಅಕ್ಟೋಬರ್ 31 ರಂದು ಕೊನೆಯ ದಿನಾಂಕವಾಗಿರುತ್ತದೆ ಎಂದು ಮೈಸೂರು ಸಕ್ಕರೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

## ಜಾಲಾಡಿದ ಇಡಿ ಅಧಿಕಾರಿಗಳು

ಅಧಿಕಾರಿ ಗಳಿಂದ ವಿವರಣೆ ಪಡೆದು, ಅವರು ನೀಡಿದ ವಿವರಣೆಯನ್ನು ದಾಖಲಿಸಿಕೊಂಡರು. ಅಲ್ಲದೇ ತಾವು ಪರಿಶೀಲಿಸಿದ ಕಡತಗ ಳನ್ನು ಹಾರ್ಡ್ ಡಿಸ್ಕ್‌ನಲ್ಲಿ ಸಂಗ್ರಹಿಸಿ ಕೊಂಡರು ಎಂದು ಹೇಳಲಾಗಿದೆ.

ಇಡಿ ಅಧಿಕಾರಿಗಳ ಪರಿಶೀಲನೆ ಹಿನ್ನೆಲೆಯಲ್ಲಿ ಮುಡಾ ಕಚೇರಿಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿತ್ತು. ಇಡಿ ಅಧಿಕಾರಿಗಳು ತಮ್ಮ ತನಿಖೆಗೆ ಅವಶ್ಯವಿರುವ ಅಧಿಕಾರಿಗಳನ್ನು ಮಾತ್ರ ಮುಡಾ ಕಚೇರಿಯಲ್ಲಿ ಇರಿಸಿಕೊಂಡು ಉಳಿದಂತೆ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಹೊರ ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ಮತ್ತು ಶನಿವಾರ ಇಡೀ ಮುಡಾ ಕಚೇರಿ ಸಿಆರ್‌ಪಿಎಫ್ ಯೋಧರ ವಶದಲ್ಲಿತ್ತು ಸ್ಥಳೀಯ ಪೊಲೀಸರಿಗೆ ಮುಡಾ ಹೊರ ಆವರಣಕ್ಕೆ ಮಾತ್ರ ಪ್ರವೇಶವಿತ್ತೇ ಹೊರತು, ಕಟ್ಟಡದೊಳಗೆ ಪ್ರವೇಶವಿರಲಿಲ್ಲ. ಪತ್ರಕರ್ತರೂ ಸೇರಿದಂತೆ ಬೇರೆ ಯಾರಿಗೂ ಮುಡಾ ಹೊರ ಆವರಣಕ್ಕೂ ಕೂಡ ಪ್ರವೇಶವಿರಲಿಲ್ಲ.

ಶುಕ್ರವಾರ ಇಡಿ ಅಧಿಕಾರಿಗಳ ತಂಡವೊಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಮೈದ ಮಲ್ಲಿಕಾರ್ಜುನಸ್ವಾಮಿ ಅವರಿಗೆ ಭೂಮಿ ಮಾರಾಟ ಮಾಡಿದ್ದ ದೇವರಾಜು ಅವರ ಬೆಂಗಳೂರಿನ ಕೆಂಗೇರಿ ನಿವಾಸದ ಮೇಲೆ ದಾಳಿ ನಡೆಸಿ ಅವರಿಂದ ಕೆಲವು ದಾಖಲೆಗಳನ್ನು ವಶಪಡಿಸಿಕೊಂಡದ್ದಲ್ಲದೇ, ಭೂಮಿಗೆ ಸಂಬಂಧಿಸಿದಂತೆ ಹೇಳಿಕೆಯನ್ನೂ ಪಡೆದಿತ್ತು. ಅದರ ವಿವರಗಳನ್ನು ಮೈಸೂರಿನ ಮುಡಾ ಕಚೇರಿಯಲ್ಲಿ ಕಡತಗಳನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳಿಗೆ ರವಾನಿಸಲಾಗಿತ್ತು ಎಂದು ಹೇಳಲಾಗಿದ್ದು, ದೇವರಾಜು ನೀಡಿದ ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡು ಇಡಿ ಅಧಿಕಾರಿಗಳು ಕೆಸರೆ ಭೂಮಿಗೆ ಸಂಬಂಧಿಸಿದಂತೆ ತಮಗೆ ಮುಡಾ ಅಧಿಕಾರಿಗಳು ನೀಡಿದ ಕಡತದಲ್ಲಿನ ಕೆಲ ದಾಖಲೆಗಳ ಬಗ್ಗೆ ವಿವರಣೆಯನ್ನು ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇಡಿ ಅಧಿಕಾರಿಗಳ ಪರಿಶೀಲನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಮುಡಾಗೆ ನೀಡಿದ್ದ ಅರ್ಜಿಯೊಂದರಲ್ಲಿ ಕೆಲ ವಾಕ್ಯಗಳನ್ನು ವೈಟ್ನಾರ್‌ನಿಂದ ಅಳಿಸಿರುವ ಬಗ್ಗೆಯೂ ಮುಡಾ ಅಧಿಕಾರಿಗಳಿಂದ ಇಡಿ ಅಧಿಕಾರಿಗಳು ಕೆಲವು ವಿವರಣೆ ಹಾಗೂ ಸ್ಪಷ್ಟನೆಗಳನ್ನು ಕೇಳಿ ದಾಖಲಿಸಿಕೊಂಡರು ಎನ್ನಲಾಗಿದೆ.

## ಲೋಕಾಯುಕ್ತ ಡ್ರಿಲ್

ಜುಲೈ 22, 2005 ರಂದು ಖರೀದಿ ಮಾಡಿದ್ದಾರೆ. 7 ದಿನದ ನಂತರದ ಕರಾರು ಪತ್ರವನ್ನು ಅದು ಹೇಗೆ ನೀಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಪ್ರಶ್ನಿಸಿದ್ದರು. ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3.16 ಎಕರೆ ಭೂಮಿಯನ್ನು ಮುಡಾ ಸ್ವಾಧೀನಕ್ಕೆ ಪಡೆದು ಅಲ್ಲಿ ಬಡಾವಣೆ ನಿರ್ಮಾಣ ಮಾಡಿತ್ತು. ರಸ್ತೆ ಒಳ ಚರಂಡಿ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಿತ್ತು.

ಅಲ್ಲದೆ ಅಲ್ಲಿನ 5 ನಿವೇಶನಗಳನ್ನು ಫಲಾನುಭವಿಗಳಿಗೆ ಮುಡಾ ಮಂಜೂರು ಮಾಡಿ ಸ್ವಾಧೀನಕ್ಕೆ ನೀಡಿತ್ತು. ಹೀಗಿರುವಾಗ 3.16 ಎಕರೆ ಬಡಾವಣೆ ಭೂಮಿಯನ್ನು ಕೃಷಿ ಭೂಮಿ ಎಂದು ಅಂದಿನ ಜಿಲ್ಲಾಧಿಕಾರಿ ಕುಮಾರ್ ನಾಯಕ್ ಹೇಗೆ ಅನ್ಯಕ್ರಾಂತ ಮಾಡಿದ್ದರು ಎಂದು ಪ್ರಶ್ನಿಸಿದ್ದರು. ಅಲ್ಲದೆ ಮಲ್ಲಿಕಾರ್ಜುನ ಸ್ವಾಮಿ ನೀಡಿದ ಷರತ್ತಿಗೊಳಪಡುವ ಕರಾರು ಪತ್ರದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಸಹಿಯಾಗಲಿ ಅಥವಾ ಸಾಕ್ಷಿದಾರರ ಸಹಿಯಾಗಲಿ ಇಲ್ಲ. ಹೀಗಿರುವಾಗ ಕುಮಾರ್ ನಾಯಕ್ ಅದು ಹೇಗೆ ಅನ್ಯಕ್ರಾಂತ ಮಾಡಿದ್ದರು ಎಂದು ಸ್ನೇಹಮಯಿ ಕೃಷ್ಣ ಸರಣಿ ಪ್ರಶ್ನೆಗಳನ್ನು ಕೇಳಿದ್ದರು ಎನ್ನಲಾಗಿದೆ. ದೂರುದಾರ ಸ್ನೇಹಮಯಿ ಕೃಷ್ಣ ಮಾಡಿರುವ ಆರೋಪದ ಹಿನ್ನೆಲೆ ಲೋಕಾಯುಕ್ತರು ಇಂದು ಕುಮಾರ್ ನಾಯಕ್ ಅವರನ್ನು ವಿಚಾರಣೆಗೊಳಪಡಿಸಿದರು. ಸುಮಾರು ಎರಡು ಗಂಟೆಗಳ ವಿಚಾರಣೆ ವೇಳೆ ಕುಮಾರ್ ನಾಯಕ್ ಲೋಕಕಾಯುಕ್ತರ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ. ಆದರೆ ಲೋಕಾಯುಕ್ತರಿಗೆ ಆ ಉತ್ತರಗಳು ಎಷ್ಟರ ಮಟ್ಟಿಗೆ ಸಮರ್ಪಕವಾಗಿದೆ ಎಂಬುದು ಸ್ಪಷ್ಟವಾಗಿಲ್ಲ.

ಇದೇ ವಿಚಾರವಾಗಿ ಲೋಕಾಯುಕ್ತರು ಮತ್ತೊಬ್ಬ ಐಎಎಸ್ ಅಧಿಕಾರಿಗೂ ಸಮನ್ಸ್ ಜಾರಿ ಮಾಡಿ ವಿಚಾರಣೆ ಮಾಡುವ ಸಾಧ್ಯತೆ ಇದೆ. ಒಟ್ಟಾರೆ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ಹಲವರನ್ನು ಸುತ್ತಿಕೊಳ್ಳುತ್ತಿದೆ.

## ಪ್ರಜ್ವಲ್ ಜಾಮೀನು ಅರ್ಜಿ: ಅ. 21ಕ್ಕೆ ಆದೇಶ

ಬೆಂಗಳೂರು: ಅತ್ಯಾಚಾರ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಂಸದ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳ ಮೇಲಿನ ಆದೇಶವನ್ನು ಹೈಕೋರ್ಟ್ ಇದೇ 21ಕ್ಕೆ ಪ್ರಕಟಿಸಲಿದೆ. ಒಂದು ಪ್ರಕರಣದಲ್ಲಿ ಜಾಮೀನು ಹಾಗೂ ಇನ್ನೆರಡು ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಗಳನ್ನು ವಿಚಾರಣೆ ನಡೆಸಿ ಕಾಯ್ದಿರಿಸಲಾಗಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಲಿದೆ. ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿದ್ದರೆ, ಸಿಐಡಿ ಸೈಬರ್ ಸೆಲ್‌ನಲ್ಲಿ ದಾಖಲಾಗಿದ್ದ ಇನ್ನೆರಡು ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿದ್ದಾರೆ.

## ಇಡಿ ಬೆನ್ನಲ್ಲೇ ಸಿಬಿಐ ಪ್ರವೇಶ?

ಸಾರ್ವಜನಿಕರ ದೂರುಗಳು ಹಾಗೂ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಕೆಲ ಜನಪ್ರತಿನಿಧಿಗಳ ಹೇಳಿಕೆ, ಆರ್‌ಟಿಐ ಕಾರ್ಯಕರ್ತರ ಲಿಖಿತ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ್ದಾರೆಂದು ಮೂಲಗಳು ತಿಳಿಸಿವೆ. ರಾಜ್ಯ ಹೈಕೋರ್ಟ್ ಮತ್ತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಗಳಲ್ಲಿ ನಡೆದ ವಾದ-ಪ್ರತಿವಾದ ಹಾಗೂ ತೀರ್ಪಿನಲ್ಲಿ ಉಲ್ಲೇಖಿಸಿರುವ ಅಂಶಗಳನ್ನೂ ಗಮನಿಸಿರುವ ಸಿಬಿಐ ಅಧಿಕಾರಿಗಳು, ಸಾವಿರಾರು ಕೋಟಿ ರೂ.ಗಳ ಹಗರಣ ಗಂಭೀರ ಸ್ವರೂಪದ್ದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆಂದು ಹೇಳಲಾಗುತ್ತಿದೆ. ಅನಧಿಕೃತವಾಗಿ ನಿವೇಶನಗಳನ್ನು ಮನಸ್ಸೋ ಇಚ್ಛೆ ಮಂಜೂರು ಮಾಡಿ ಸರ್ಕಾರಕ್ಕೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಪಾರ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಿರುವುದರಿಂದ ಈ ಸಂಬಂಧ ಸ್ವಯಂ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಲು ಮುಂದಾಗಿರುವ ಸಿಬಿಐ, ಪ್ರಾಥಮಿಕ ಮಾಹಿತಿ ಹಾಗೂ ದಾಖಲೆಗಳನ್ನು ಸಂಗ್ರಹಿಸುತ್ತಿದೆ ಎಂದು ಹೇಳಲಾಗುತ್ತಿದೆ.

ಈಗಾಗಲೇ ಹಿರಿಯ ಐಎಎಸ್ ಅಧಿಕಾರಿ ನೇತೃತ್ವದ ನಾಲ್ವರು ಅಧಿಕಾರಿಗಳ ತಂಡವು ಮುಡಾ ಹಗರಣದ ಸಂಬಂಧ ತನಿಖೆ ಆರಂಭಿಸಿತ್ತು. ಅದರ ಬೆನ್ನಲ್ಲೇ ರಾಜ್ಯ ಸರ್ಕಾರವು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ದೇಸಾಯಿ ನೇತೃತ್ವದ ಆಯೋಗ ರಚಿಸಿದ್ದು, ಅವರು ಬೆಂಗಳೂರಿನ ಕುಮಾರ ಕೃಪವನ್ನು ಕೇಂದ್ರ ಸ್ಥಾನವಾಗಿಸಿಕೊಂಡು ತನಿಖೆ ನಡೆಸುತ್ತಿದೆ.

ಜೊತೆಗೆ ನ್ಯಾಯಾಲ ಯಗಳ ಆದೇಶದಂತೆ ಲೋಕಾಯುಕ್ತ ಎಸ್ಪಿ ಉದೇಶ್ ಅವರು ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತಿರುವಾಗಲೇ ನಿನ್ನೆಯಿಂದ ಇಡಿ ಅಧಿಕಾರಿ ಗಳೂ ಸಹ ಮುಡಾ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆ ಪತ್ರಗಳನ್ನು ಶೋಧಿಸುತ್ತಿದ್ದಾರೆ. ಹಗರಣ ಈಗಾಗಲೇ ನ್ಯಾಯಾ ಲಯದ ಕಟಕಟ್ಟೆ ಹತ್ತಿರುವುದರಿಂದ ಕಾನೂನಾತ್ಮಕವಾಗಿಯೇ ಸಿಬಿಐ ರಂಗ ಪ್ರವೇಶ ಮಾಡುವ ಸಾಧ್ಯತೆ ಹೆಚ್ಚಿವೆ ಎಂದು ಹೇಳಲಾಗುತ್ತಿದೆ.

## ಹಸಿರು ಪಟಾಕಿ ಮಾತ್ರ ಸಿಡಿಸಿ

ಪರಿಸರಕ್ಕೆ ಹಾನಿ ಉಂಟು ಮಾಡದ ಹಸಿರು ಪಟಾಕಿ ಮಾತ್ರವೇ ಸಿಡಿಸಿ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಮತ್ತು ಸುಪ್ರೀಂಕೋರ್ಟ್ ತನ್ನ ಹಲವು ತೀರ್ಪುಗಳಲ್ಲಿ 125 ಡೆಸಿಬಲ್‌ಗಿಂತ ಹೆಚ್ಚು ಶಬ್ದ ಮಾಡುವ ಮತ್ತು ಹೆಚ್ಚು ಹೊಗೆ ಹೊರಸೂಸುವ ರಾಸಾಯನಿಕಯುಕ್ತ ಪಟಾಕಿಗಳನ್ನು ನಿಷೇಧಿಸಿದೆ. ರಾತ್ರಿ 8 ರಿಂದ 10ಗಂಟೆವರೆಗೆ ಮಾತ್ರ ಹಸಿರು ಪಟಾಕಿಗಳನ್ನು ಹಚ್ಚಲು ಅವಕಾಶ ಕಲ್ಪಿಸಿದೆ, ಸಾರ್ವಜನಿಕರು ಈ ನಿಯಮಗಳನ್ನು ಪಾಲಿಸಬೇಕು ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಪಟಾಕಿ ಮಳಿಗೆಗೆ ಅನುಮತಿ ನೀಡುವಾಗ ಹಸಿರು ಪಟಾಕಿ ಮಾತ್ರ ದಾಸ್ತಾನು, ಸಾಗಾಟ ಹಾಗೂ ಮಾರಾಟ ಮಾಡುವುದಾಗಿ ಮಳಿಗೆ ಮಾಲೀಕರಿಂದ ಮುಚ್ಚಳಿಕೆ ಬರೆಸಿಕೊಳ್ಳಲು ಸೂಚಿಸಲಾಗಿದೆ, ನಿಯಮ ಉಲ್ಲಂಘಿಸುವವರಿಗೆ ಮುಂದಿನ ವರ್ಷದಿಂದ ಪಟಾಕಿ ಮಳಿಗೆಗಳಿಗೆ ಅನುಮತಿ ನೀಡದಂತೆ ತಿಳಿಸಲಾಗಿದೆ, ಜಿಲ್ಲಾಡಳಿತ ಈ ಬಗ್ಗೆ ಕ್ರಮ ವಹಿಸಬೇಕು ಎಂದಿದ್ದಾರೆ.

ಸಂಘ-ಸಂಸ್ಥೆಗಳು, ಶಿಕ್ಷಕರು, ಬೋಧಕರು, ಉಪನ್ಯಾಸಕರು, ಪರಿಸರ ಪ್ರೇಮಿಗಳು, ಜನಪ್ರತಿನಿಧಿಗಳು ಜನರಲ್ಲಿ, ಅದರಲ್ಲೂ ಮಕ್ಕಳಲ್ಲಿ ಪಟಾಕಿಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿ ಪಟಾಕಿ ತ್ಯಜಿಸುವಂತೆ, ಇಲ್ಲವೆ ಹಸಿರು ಪಟಾಕಿ ಮಾತ್ರ ಬಳಸಲು ಮನವಿ ಮಾಡಬೇಕು ಎಂದು ಪರಿಸರ ಸಚಿವರು ಮನವಿ ಮಾಡಿದ್ದಾರೆ. ಹೆಚ್ಚು ಶಬ್ದ ಮತ್ತು ದಟ್ಟ ಹೊಗೆ ಹೊರಸೂಸುವ ರಾಸಾಯನಿಕ ಮತ್ತು ಭಾರ ಲೋಹಯುಕ್ತ ಪಟಾಕಿಗಳಿಂದ ಉಸಿರಾಟಕ್ಕೂ ತೊಂದರೆ ಆಗುವುದಲ್ಲದೆ, ಭಾರಿ ಶಬ್ದ ಮಾಡುವ ಪಟಾಕಿಗಳಿಂದ ಪಶು, ಪಕ್ಷಿಗಳಿಗೂ ಕಿರಿಕಿರಿ ಉಂಟಾಗುತ್ತದೆ, ಆದ್ದರಿಂದ ಪಟಾಕಿ ಸಿಡಿಸುವುದನ್ನು ತ್ಯಜಿಸೋಣ ಎಂದು ಮನವಿ ಮಾಡಿದ್ದಾರೆ.

ಯಶೋದೆ ಕೃಷ್ಣನ ಕನವರಿಕೆಯಲ್ಲಿ ಬದುಕು ಕಳೆಯುವ ದೃಶ್ಯ... ದ್ರೌಪದಿ ವಸ್ತ್ರಾಹರಣ ಯತ್ನದ ಸನ್ನಿವೇಶ...

# ಭರತನಾಟ್ಯದ ಭಾವಾಭಿನಯದಲ್ಲಿ ಅನಾವರಣ; ಮನಸೋತ ಪ್ರೇಕ್ಷಕರು

### ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಆಶ್ರಯದ 139ನೇ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಅ.19(ಪಿಎಂ)- ಮಹಾಭಾರತದಲ್ಲಿ ಬರುವ ದ್ರೌಪದಿ ವಸ್ತ್ರಾಹರಣ ಯತ್ನದ ಸನ್ನಿವೇಶ... ಬಾಲ ಗೋಪಾಲನ ಲಾಲನೆ-ಪಾಲನೆ ಮಾಡಿದ ಯಶೋಧೆಯು ಪುತ್ರ ಕೃಷ್ಣನ ಕನವರಿಕೆಯಲ್ಲಿ ಬದುಕು ಕಳೆಯುವ ದೃಶ್ಯ... ಭರತನಾಟ್ಯದಲ್ಲಿ ಅನಾರವಣಗೊಂಡಿತು. ಹೀಗೆ ಅಭಿವ್ಯಕ್ತಗೊಂಡ ಭಾವಭಂಗಿ, ಬೆಡಗು-ಬಿನ್ನಾಣಕ್ಕೆ ಪ್ರೇಕ್ಷಕರು ಮನಸೋತು ಚಪ್ಪಾಳೆಯ ಮಳೆ ಸುರಿಸಿದರು.




ಮೈಸೂರಿನ ಬಿವಿಬಿಯಲ್ಲಿ ಶನಿವಾರ ಭರತನಾಟ್ಯ ಪ್ರದರ್ಶನ ನಡೆಯಿತು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು-ಮೈಸೂರು ಕೇಂದ್ರಗಳ ಜಂಟಿ ಆಶ್ರಯದಲ್ಲಿ 139ನೇ ಸಾಂಸ್ಕೃತಿಕ ಕಾರ್ಯಕ್ರಮದಡಿ 'ಭರತನಾಟ್ಯ-ಪ್ರತಿಬಿಂಬ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ವಿದುಷಿ ಗೌರಿ ಸಾಗರ್ ಮತ್ತು ವಿದುಷಿ ಪೃಥ್ವಿ ಪಾರ್ಥಸಾರಥಿ ಹಾಗೂ ಇವರ ಶಿಷ್ಯವೃಂದದ ಪ್ರದರ್ಶನವು ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿತು. ಮಹಾಭಾರತದಲ್ಲಿ ನಡೆದ ದ್ರೌಪದಿ ವಸ್ತ್ರಾಹರಣ ಯತ್ನದ ದೃಶ್ಯವನ್ನು ಗೌರಿ ಸಾಗರ್ ತಮ್ಮ ನೃತ್ಯದಲ್ಲಿ ಮೂಡಿಸಿದರು. ವಿದ್ವಾನ್ ಅರ್ಜುನ್ ಭಾರದ್ವಾಜ್ ಅವರಿಂದ ರಚಿತವಾದ ಗೀತೆಗೆ ಅವರು ಮನಮೋಹಕವಾಗಿ ಹೆಜ್ಜೆ ಹಾಕಿದರು. ವಿದ್ವಾನ್ ತಿರುಮಲೆ ಶ್ರೀನಿವಾಸ್ ಅವರ ಸಂಗೀತ ಹಾಗೂ ವಿದುಷಿ ವಸುಧಾ ಬಾಲಕೃಷ್ಣ ಅವರ ಕಠಸಿರಿಯಲ್ಲಿ ಸುಶ್ರಾವ್ಯವಾಗಿ ಮೂಡಿಬಂದಿರುವ ಗೀತೆಗೆ ಅವರು ನಾಟ್ಯ ಸಾದರಪಡಿಸಿದರು. ಪಗಡೆಯಾಟದಲ್ಲಿ ಧರ್ಮರಾಯ ಸೋತಾಗ ದ್ರೌಪದಿ ಸೀರೆಯನ್ನು ಎಳೆದು ವಿವಸ್ತ್ರಗೊಳಿಸಲು ಯತ್ನಿಸುವ ಸನ್ನಿವೇಶ ಹಾಗೂ ಈ ವೇಳೆ ಶ್ರೀಕೃಷ್ಣನು ದ್ರೌಪದಿಗೆ ವಸ್ತ್ರ ಕರುಣಿಸುವ ದೃಶ್ಯಾವಳಿಯನ್ನು ತಮ್ಮ ನಾಟ್ಯ ಕಲಾಕೌಶಲ್ಯದಲ್ಲಿ ಪ್ರೇಕ್ಷಕರ ಮುಂದೆ ಅನಾವರಣಗೊಳಿಸಿ ಅಭಿಮಾನದ ಚಪ್ಪಾಳೆ ಗಿಟ್ಟಿಸುವಲ್ಲಿ ಸಫಲರಾದರು.

ಇದಕ್ಕೂ ಮುನ್ನ ಮುತ್ತುಸ್ವಾಮಿ ದೀಕ್ಷಿತರ ರಚನೆಯ 'ಅರ್ಧನಾರಿಶ್ವರ' ಗೀತೆಗೂ ಗೌರಿ ಸಾಗರ್, ಭಾವಾಭಿನಯದೊಂದಿಗೆ ಹೆಜ್ಜೆ ಹಾಕಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ಕುಮುದ ಕ್ರಿಯೆ ರಾಗ ಹಾಗೂ ರೂಪಕ ತಾಳದಲ್ಲಿ ಮೂಡಿರುವ ಈ ಗೀತೆಗೆ ಮನೋಜ್ಞ ನೃತ್ಯ ಪ್ರದರ್ಶಿಸಿ ಸಭಿಕರಿಂದ ಚಪ್ಪಾಳೆ ಮಳೆ ತರಿಸಿದರು.

ಡಾ.ಎನ್.ರಘು ಬರೆದಿರುವ ನಿರೀಕ್ಷೆ ಎಂಬ ಪ್ರಸಂಗದ ಗೀತೆಗೆ ವಿದುಷಿ ಪೃಥ್ವಿ ಪಾರ್ಥಸಾರಥಿ ಭಾವಪೂರ್ಣ ನೃತ್ಯ ಪ್ರದರ್ಶಿಸಿದರು. ಕೃಷ್ಣನ ಸಾಕು ತಾಯಿ ಯಶೋಧೆ ಪುತ್ರನ ಕಾಣಲು ಪರಿತಪಿಸುವ ಪರಿ, ಕೃಷ್ಣನು ಗೋಕುಲ ಬಿಟ್ಟು ಮಥುರೆಗೆ ಹೋದ ಸನ್ನಿವೇಶವನ್ನು ಕಣ್ಮುಂದೆ ತಂದು ಭಾವನಾ ಲೋಕ ಅನಾವರಣಗೊಳಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಅಲ್ಲದೆ, ಇವರ ಶಿಷ್ಯ ವೃಂದವು ಜಯಚಾಮರಾಜ ಒಡೆಯರ್ ರಚನೆ ಹಾಗೂ ಹಂಸ ವಿನೋದಿನಿ ರಾಗ, ಮಿಶ್ರ ಜಾತಿ ಝಂಪೆ ತಾಳದಲ್ಲಿ ಮೂಡಿಬಂದಿರುವ 'ಸರಸ್ವತಿಂ ಭಗವತಿಂ ಸಮಾಮ್ಯುಹಂ' ಗೀತೆಗೆ ಸಮೂಹ ನೃತ್ಯ ಪ್ರದರ್ಶಿಸಿಸಿ ಪ್ರೇಕ್ಷಕರ ಅಭಿಮಾನಕ್ಕೆ ಪಾತ್ರವಾಯಿತು. ಶ್ರೀ ಲಕ್ಷ್ಮೀ ನಾರಾಯಣ್, ಎಂ.ನಿತ್ಯಶ್ರೀ, ಸ್ನೇಹ, ಶ್ರೇಯಾ, ಎಲ್.ಮಧುಮಿತಾ, ಸ್ನಿಗ್ಧ, ಶ್ರೀಮತಿ ಸ್ಮೃತಿ ಮತ್ತು ಸಿ.ಐಶ್ವರ್ಯ ಅವರು ಇದೂ ಸೇರಿದಂತೆ ವಿವಿಧ ಗೀತೆಗಳಿಗೆ ಹೆಜ್ಜೆ ಹಾಕಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು. ಇದಕ್ಕೂ ಮುನ್ನ ಭರತನಾಟ್ಯ ಕಾರ್ಯಕ್ರಮವನ್ನು ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಡಾ.ವಸುಂಧರ ದೊರೆಸ್ವಾಮಿ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯರಾದ ಡಾ.ಗಾಯತ್ರಿ, ಡಾ.ಗಂಗಾಧರ್, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್ ಮತ್ತಿತರರು ಹಾಜರಿದ್ದರು.




ವಿದುಷಿ ಗೌರಿ ಸಾಗರ್ ಅವರ ನೃತ್ಯ ಭಂಗಿ.



ವಿದುಷಿ ಪೃಥ್ವಿ ಪಾರ್ಥಸಾರಥಿ ಭಾವಪೂರ್ಣ ನೃತ್ಯ

# ಬೋವಿ ನಿಗಮದ ಹಗರಣ: ಬಿಜೆಪಿ ಎಂಎಲ್‌ಸಿ ಸುನೀಲ್ ವಲ್ಯಾಪುರೆ ಮನೆ ಮೇಲೆ ಸಿಐಡಿ ದಾಳಿ





ಕಲಬುರಗಿ,ಅ.19–2022ರಲ್ಲಿ ಬೋವಿ ನಿಗಮದಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಲಿ ಬಿಜೆಪಿ ಎಂಎಲ್‌ಸಿ ಸುನೀಲ್ ವಲ್ಯಾಪುರೆ ಮನೆ ಮೇಲೆ ಸಿಐಡಿ ದಾಳಿ ನಡೆಸಿದೆ. ಸುನೀಲ್ ವಲ್ಯಾಪುರೆ ಅವರ ಪುತ್ರ ವಿನಯ ವಲ್ಯಾಪುರೆ ಮೇಲೆ ಭೋವಿ ನಿಗಮದ 12 ಕೋಟಿ ರೂ. ಅವ್ಯವಹಾರದ ಆರೋಪವಿದೆ.

ಭೋವಿ ನಿಗಮದ ಹಗರಣದ ಬಗ್ಗೆ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿತ್ತು. ಈ ಹಿನ್ನೆಲೆಯಲ್ಲಿ ಸಿಐಡಿ ಅಧಿಕಾರಿಗಳ ತಂಡ ವಲ್ಯಾಪುರೆ ಮನೆ ಮೇಲೆ ದಾಳಿ ಮಾಡಿ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ. ಸಿಐಡಿ ಡಿವೈಎಸ್ಪಿ ಅಸ್ಲಂ ಭಾಷಾ ನೇತೃತ್ವದಲ್ಲಿ ಎಂಟು ಅಧಿಕಾರಿ ಹಾಗೂ ಸಿಬ್ಬಂದಿ ದಾಳಿ ಮಾಡಿದ್ದಾರೆ. ಮನೆಯೊಳಗೆ ಎಂಟ್ರಿ ಕೊಟ್ಟ ಸಿಐಡಿ ತಂಡ ಹಗರಣದ ಬಗ್ಗೆ ವಿವರಣೆ ಮತ್ತು ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದೆ.

ಸಿಐಡಿ ದಾಳಿ ವೇಳೆ ಎಂಎಲ್‌ಸಿ ಸುನೀಲ್ ವಲ್ಯಾಪುರೆ ಮನೆಯಲ್ಲೇ ಉಪಸ್ಥಿತರಿದ್ದರು ಎಂದು ತಿಳಿದು ಬಂದಿದೆ. ಸುನೀಲ್ ವಲ್ಯಾಪುರೆ ಮತ್ತು ಅವರ ಪುತ್ರ ಭೋವಿ ನಿಗಮದ ಸಹಾಯ ಧನ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಎತ್ತಿ ಹಾಕಿರುವ ಆರೋಪ ಎದುರಿಸುತ್ತಿದ್ದಾರೆ. ಸುಮಾರು ನೂರಾರು ಕೋಟಿ ರೂ. ಅವ್ಯವಹಾರದಲ್ಲಿ ಭೋವಿ ಸಮಾಜದವರೇ ಆಗಿರುವ ಸುನೀಲ್ ವಲ್ಯಾಪುರೆ ಅವರ ಪಾತ್ರದ ಆರೋಪ ಬಂದ ಹಿನ್ನಲೆಯಲ್ಲಿ ಸಿಐಡಿ ದಾಳಿ ನಡೆಸಿದೆ. ರಾಜ್ಯದಲ್ಲಿ ವಾಲ್ಮೀಕಿ ನಿಗಮದ ಹಗರಣ ತೀವ್ರ ಚರ್ಚೆಯಾಗುತ್ತಿರುವ ಹೊತ್ತಲ್ಲೇ ಹಿಂದಿನ ಸರ್ಕಾರದದ ಭೋವಿ ನಿಗಮದ ಹಗರಣ ಹೊರಬಿದ್ದಿದೆ. ಸುನೀಲ್ ವಲ್ಯಾಪುರೆ ತಮ್ಮ ರಾಜಕೀಯ ಪ್ರಭಾವ ಬಳಸಿ ಭೋವಿ ನಿಗಮದಲ್ಲಿ ಹಣ ದುರುಪಯೋಗಕ್ಕೆ ಕಾರಣವಾಗಿದ್ದಾರೆ ಎನ್ನುವ ಆರೋಪ ಎದುರಿಸುತ್ತಿದ್ದಾರೆ.

ಚಿಂಚೋಳಿಯಲ್ಲಿ ಸೋಲಾರ ಪ್ಲ್ಯಾಂಟ್ ಸ್ಥಾಪನೆ ಹೆಸರಲ್ಲಿ ನಯಾ ಪೈಸೆಯ ಕೆಲಸವೂ ಮಾಡದೇ ಮಗನ ಮೂಲಕ ಸುನೀಲ್ ವಲ್ಯಾಪುರೆ ಹಣ ಲೂಟಿ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಇದಷ್ಟೇ ಅಲ್ಲದೇ ಭೋವಿ ನಿಗಮದಿಂದ ಸಮುದಾಯದ ಫಲಾನುಭವಿಗಳಿಗೆ ಸಿಗಬೇಕಾದ ಸಹಾಯ ಧನದಲ್ಲೂ ಸಾಕಷ್ಟು ಅವ್ಯವಹಾರ ನಡೆದಿದೆ. ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ 11 ಕೋಟಿ ರೂ.ಗೂ ಅಧಿಕ ಹಣ ಅವ್ಯವಹಾರ ಮಾಡಲಾಗಿದೆ. ಸುನೀಲ್ ವಲ್ಯಾಪುರೆ ಮತ್ತು ಮಗ ವಿನಯ ವಲ್ಯಾಪೂರೆ ಒಟ್ಟು 22 ಕೋಟಿಗೂ ಹೆಚ್ಚು ಹಣ ಅವ್ಯವಹಾರದ ಆರೋಪ ಎದುರಿಸುತ್ತಿದ್ದಾರೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗಿನ ಅವಧಿಯಲ್ಲಿನ ಅವ್ಯವಹಾರದ ತನಿಖೆಗೆ ಸಿದ್ದರಾಮಯ್ಯ ಸರ್ಕಾರ ಮುಂದಾಗಿದೆ.

# ದಸರಾ ಬೊಂಬೆ ಪ್ರದರ್ಶನ ಸ್ಪರ್ಧಾ ವಿಜೇತರಿಗೆ ಬಹುಮಾನ



ದಸರಾ ಬೊಂಬೆ ಪ್ರದರ್ಶನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಅ.19(ಎಂಕೆ)– ಭಾರತ ವಿಕಾಸ ಪರಿಷದ್ ಭಾರದ್ವಾಜ ಶಾಖೆ ಮೈಸೂರು ಮತ್ತು ರಾಮ್ ಸನ್ಸ್ ಬೊಂಬೆ ಮನೆ ವತಿಯಿಂದ ಆಯೋಜಿಸಿದ್ದ ದಸರಾ ಬೊಂಬೆ ಪ್ರದರ್ಶನ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು ಮೃಗಾಲಯ ಎದುರಿನ ರಾಮ್ ಸನ್ಸ್ ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬೃಹತ್ ವಿಭಾಗದಲ್ಲಿ ರೇವತಿ ರಾಮಸ್ವಾಮಿ ಪ್ರಥಮ, ಗೀತಾ ಶ್ರೀಹರಿ ದ್ವಿತೀಯ, ರಾಜೇಶ್ವರಿ ಗಣೇಶನ್ ತೃತೀಯ ಹಾಗೂ ಶೃತಿ ಹರೀಶ್ ಸಮಾಧಾನಕರ ಬಹುಮಾನ ಪಡೆದರೆ, ಹಿರಿಯ ವಿಭಾಗದಲ್ಲಿ ಶ್ರೀದೇವಿ ಶ್ರೀವತ್ಸ ಪ್ರಥಮ, ಹೇಮಲತಾ ಕುಮಾರಸ್ವಾಮಿ ದ್ವಿತೀಯ, ರಮಾಮಣಿ ಗುರುದತ್ ತೃತೀಯ ಹಾಗೂ ಸುಧಾ ರಾಜಾ ಸಮಾಧಾನಕರ ಬಹುಮಾನ ಪಡೆದರು.

ಮಧ್ಯಮ ವಿಭಾಗದಲ್ಲಿ ಉಷಾ ನಾಗರಾಜ್ ಪ್ರಥಮ, ಕಮಲಾಕ್ಷಿ ದ್ವಿತೀಯ, ಪೂಜಾ ಪುನೀತ್ ತೃತೀಯ ಹಾಗೂ ಬಿ.ಅಕ್ಷಯ್ ಸಮಾಧಾನಕರ ಬಹುಮಾನ ಪಡೆದರೆ, ಕಿರಿಯ ವಿಭಾಗದಲ್ಲಿ ಸ್ವರ್ಣಲತಾ ಪ್ರಥಮ, ಡಾ.ನಮಿತಾ ದ್ವಿತೀಯ, ನವ್ಯಾ ಯೋಗಾನಂದ್ ತೃತೀಯ, ವೀಣಾ ಮೂರ್ತಿ ಸಮಾಧಾನ ಕರ ಬಹುಮಾನ ಪಡೆದುಕೊಂಡರು. ಹಾಗೆಯೇ ಸಂಘ–ಸಂಸ್ಥೆ ವಿಭಾಗದಲ್ಲಿ ಕೇಂಬ್ರಿಡ್ಜ್ ಶಾಲೆ ಪ್ರಥಮ, ಡಿಎವಿ ಪಬ್ಲಿಕ್ ಶಾಲೆ ದ್ವಿತೀಯ, ಅಭ್ಯುದಯ ಮಹಿಳಾ ಸಮಾಜ ತೃತೀಯ ಹಾಗೂ ಬಿಕೆಜಿ ಸಮಾಧಾನಕರ ಬಹುಮಾನ ಪಡೆಯಿತು. ರಾಘವೇಂದ್ರ ಹಾಗೂ ಶ್ಯಾಮಲಾ ಪ್ರಸನ್ನ ಅವರಿಗೆ ವಿಶೇಷ ಬಹುಮಾನ ನೀಡಲಾಯಿತು.

ವಿಜೇತರಿಗೆ ಬಹುಮಾನ ವಿತರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಬೊಂಬೆ ಮನೆಯ ಅಲಂಕಾರ ನೋಡುವುದೇ ಅದ್ಭುತ. ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಬಗ್ಗೆ ಗೌರವ ಕೊಡುವ ಯಾರೇ ಆದರೂ ಈ ರೀತಿಯ ಪರಂಪರಾಗತವಾಗಿ ಬಂದಂತಹ ಅದ್ಭುತ ಕಿನ್ನರ ಕಲೆಯನ್ನು ಗೌರವಿಸುತ್ತಾರೆ. ನಮ್ಮ ಪೂರ್ವಜರು ತಮ್ಮ ಶ್ರಮದ ಬದುಕಿನ ನಡುವೆಯೂ ಇಂತಹ ಅದ್ಭುತ ಕಲೆಯನ್ನು ಉಳಿಸಿ ಕೊಟ್ಟಿದ್ದಾರೆ. ಕಲೆಯ ಸೃಷ್ಟಿಸಿ, ನಂತರ ಅದರ ಸೌಂದರ್ಯವನ್ನು ಕೆತ್ತಿ ನಿಲ್ಲಿಸುವುದು ಸುಲಭದ ಮಾತಲ್ಲ. ಹಾಗಾಗಿ ನಮ್ಮ ನಾಡಿನ ಕಲಾವಿದರನ್ನು, ಅವರ ಕಲೆಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ರಾಮ್‌ಸನ್ಸ್ ಬೊಂಬೆಮನೆಯ ಆರ್.ಜಿ. ಸಿಂಗ್, ಭಾರತ ವಿಕಾಸ ಪರಿಷದ್ ಪ್ರಾಂತ್ಯಾಧ್ಯಕ್ಷ ಆರ್.ನಾಗಭೂಷಣ್, ಶಾಖಾ ಅಧ್ಯಕ್ಷ ಡಾ.ಬಿ.ಎನ್.ರಂಗನಾಥ ರಾವ್, ಶಿವಕುಮಾರ್ ಮತ್ತಿತರರಿದ್ದರು.

## ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು, ಅ. 19– ಅಮೃತಾಂಶು ಟ್ರಸ್ಟ್, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆಆರ್.ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಅ.21ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ, 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ ಇಲ್ಲಿ ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಉಚಿತ ಮಸೂರ (ಲೆನ್ಸ್) ಅಳವಡಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ. 9945270646, 9742634110 ಸಂಪರ್ಕಿಸಬಹುದು.

# ಇಂದು ಕೆಆರ್ ಬ್ಯಾಂಕ್ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

## ಸಂಜೆ ಮತ ಎಣಿಕೆ, ರಾತ್ರಿ ವೇಳೆಗೆ ಫಲಿತಾಂಶ ಪ್ರಕಟ



ಅರುಣ್ | ಗಣೇಶ್‌ಮೂರ್ತಿ | ನವೀನ್‌ಕುಮಾರ್ | ನಾಗಜ್ಯೋತಿ | ನಂ ಸಿದ್ದಪ್ಪ | ಪಾರ್ಥಸಾರಥಿ | ಪಂಚಾಕ್ಷರಿ | ಪ್ರತಿಧ್ವನಿ ಪ್ರಸಾದ್ | ಬಸವರಾಜು | ಭಾಸ್ಕರ್ | ಶಿವಪ್ರಕಾಶ್ | ಸರ್ವಮಂಗಳ

ಮೈಸೂರು, ಅ.19(ಜಿಎ)–ಮೈಸೂರಿನ ಮಾಧವರಾವ್ ವೃತ್ತದಲ್ಲಿರುವ(ಅಗ್ರಹಾರ ವೃತ್ತ) ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ 2024–29ನೇ ಸಾಲಿನ ನಿರ್ದೇಶಕರ ಸ್ಥಾನಕ್ಕೆ ಭಾನುವಾರ(ಅ.20) ಬೆಳಗ್ಗೆ 9 ಗಂಟೆಯಿಂದ ಸಂಜೆ 4ರವರೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್‌ವಿಕ್ ಪ್ರೌಢ ಶಾಲೆಯಲ್ಲಿ ಚುನಾವಣೆ ನಡೆಯಲಿದೆ.

ಚುನಾವಣೆಯು ಸಾಕಷ್ಟು ಪೈಪೋಟಿಯಿಂದ ಕೂಡಿದ್ದು, ಕಣದಲ್ಲಿ ಅರುಣ್ ಎಂ.ಎಸ್.(ಪ್ರವರ್ಗ–ಬಿ), ಗಣೇಶ್ ಮೂರ್ತಿ ಟಿ.ವಿ.(ಸಾಮಾನ್ಯ), ನವೀನ್ ಕುಮಾರ್ ಎಂ.ಎನ್.(ಹಿಂದುಳಿದ ವರ್ಗ ಪ್ರವರ್ಗ–ಎ), ನಾಗಜ್ಯೋತಿ(ಜ್ಯೋತಿ ಪ್ರತಿಧ್ವನಿ ಪ್ರಸಾದ್, ಮಹಿಳಾ ಮೀಸಲು), ನಂ.ಸಿದ್ದಪ್ಪ(ಸಾಮಾನ್ಯ), ಎಂ.ಡಿ. ಪಾರ್ಥಸಾರಥಿ (ಪಾತಿ,ಸಾಮಾನ್ಯ), ಜಿ.ಎಂ.ಪಂಚಾಕ್ಷರಿ(ಸಾಮಾನ್ಯ) ಹಾಲಿ ಅಧ್ಯಕ್ಷರಾದ ಪ್ರತಿಧ್ವನಿ ಪ್ರಸಾದ್ (ಸಾಮಾನ್ಯ), ಹಾಲಿ ಉಪಾಧ್ಯಕ್ಷರಾದ ಡಿ.ಬಸವರಾಜು (ಬಸಪ್ಪ, ಸಾಮಾನ್ಯ), ಭಾಸ್ಕರ್ ಹೆಚ್.ವಿ (ಸಾಮಾನ್ಯ), ಶಿವಪ್ರಕಾಶ್ ಎಂ(ಪರಿಶಿಷ್ಟ ಪಂಗಡ), ಸರ್ವಮಂಗಳ ಹೆಚ್.ಎನ್ (ಮಹಿಳಾ ಮೀಸಲು) ಸೇರಿದಂತೆ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಅಭ್ಯರ್ಥಿಗಳು ಈಗಾಗಲೇ ಬ್ಯಾಂಕಿನ ಸದಸ್ಯರನ್ನು ಖುದ್ದಾಗಿ ಮತ್ತು ಮೊಬೈಲ್ ಮೂಲಕ ಸಂಪರ್ಕಿಸಿ ಮತಯಾಚಿಸುತ್ತಿದ್ದಾರೆ. ಜೊತೆಗೆ ತಮ್ಮ ಅವಧಿಯಲ್ಲಿ ಬ್ಯಾಂಕಿನ ಅಭಿವೃದ್ಧಿ ಮತ್ತು ಸದಸ್ಯರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕೈಕೊಂಡಿರುವ ಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ.

ಚುನಾವಣೆ ಮುಗಿದ ನಂತರ ಅಂದೇ ಮತ ಎಣಿಕಾ ಕಾರ್ಯ ನಡೆಯಲಿದ್ದು, ರಾತ್ರಿ ವೇಳೆ ಫಲಿತಾಂಶ ಹೊರ ಬೀಳಲಿದೆ. ಈಗಾಗಲೇ ನಾಳಿನ ಚುನಾವಣೆಯಲ್ಲಿ ಮತದಾನ ವೇಳೆ ಮತದಾರರನ್ನು ಸೆಳೆಯಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು, ತೀವ್ರ ಕುತೂಹಲ ಮೂಡಿಸಿದೆ.

# ಒಳ ಮೀಸಲಾತಿ ಜಾರಿಯಾಗುವವರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬಾರದು

## ಹಿರಿಯ ವಕೀಲ ಅರುಣ್ ಕುಮಾರ್ ನೇತೃತ್ವದಲ್ಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಕೆ



ಬೆಂಗಳೂರು, ಅ.19–ರಾಜ್ಯ ಸರ್ಕಾರವು ಒಳ ಮೀಸಲಾತಿ ಜಾರಿ ಮಾಡುವವರೆಗೆ ಸಾರ್ವಜನಿಕ ವಲಯದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳಿಗೆ ತಡೆಯಾಜ್ಞೆ ನೀಡಬೇಕೆಂದು ಮೈಸೂರಿನ ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಅರುಣ್ ಕುಮಾರ್ ಅವರು ತಮ್ಮ ರಿಟ್ ಅರ್ಜಿಯಲ್ಲಿ ರಾಜ್ಯ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗದ ಕಾರ್ಯದರ್ಶಿ, ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರನ್ನು ಪ್ರತಿವಾದಿಗಳನ್ನಾಗಿ ಉಲ್ಲೇಖಿಸಿದ್ದಾರೆ.

ಈ ಸಂಬಂಧ ಶನಿವಾರ ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶ ಮತ್ತು ಸದಾಶಿವ ಆಯೋಗದ ವರದಿಯನ್ನು ಗಮನಿಸಿದಾಗ ಸರ್ಕಾರವು ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ 2024ರ ಆ.1ರ ನಂತರ ಭರ್ತಿ ಮಾಡಿದ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ರದ್ದುಪಡಿಸಲು ಸರ್ಕಾರಕ್ಕೆ ಆದೇಶ ನೀಡಬೇಕೆಂದು ತಾವು ರಿಟ್ ಅರ್ಜಿಯಲ್ಲಿ ಕೋರಿರುವುದಾಗಿ ತಿಳಿಸಿದರು.

ಸದಾಶಿವ ಆಯೋಗದ ವರದಿ ಜಾರಿಯಾಗುವವರೆಗೆ ಪರಿಶಿಷ್ಟ ಜಾತಿಗೆ ಮೀಸಲಾದ ಯಾವುದೇ ಹುದ್ದೆಗಳನ್ನು ಭರ್ತಿ ಮಾಡಬಾರದು. ಸರ್ಕಾರವು ಹೊಸ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯಲ್ಲಿ ಸುಪ್ರೀಂಕೋರ್ಟ್ ಆದೇಶ ಮತ್ತು ಸದಾಶಿವ ಆಯೋಗದ ವರದಿಯನ್ನು ಪಾಲಿಸಬೇಕು.

ಒಳ ಮೀಸಲಾತಿಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಅಧಿಕಾರ ನೀಡಿದ್ದರೂ, ಕರ್ನಾಟಕ ಸರ್ಕಾರವು ನ್ಯಾಯಾಲಯದ ನಿರ್ದೇಶನವನ್ನು ಜಾರಿಗೊಳಿಸಿಲ್ಲ ಎಂದ ಅವರು, ಪರಿಶಿಷ್ಟ ಜಾತಿಗಳಿಗೆ ಸಮಾನ ಅವಕಾಶ ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಒಳ ಮೀಸಲಾತಿ ಜಾರಿಗೊಳಿಸುವ ವರೆಗೂ ಪರಿಶಿಷ್ಟ ಜಾತಿಗೆ ಸಂಬಂಧಿಸಿದ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಬೇಕು ಎಂದ ಅವರು, ತುರ್ತಾಗಿ ಸಂಪುಟ ಸಭೆ ಕರೆದು ಒಳ ಮೀಸಲಾತಿ ಜಾರಿ ಮಾಡಬೇಕೆಂದು ಕರ್ನಾಟಕ ಸಾಮಾಜಿಕ ನ್ಯಾಯ ಪರ ವೇದಿಕೆಯು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಆಗ್ರಹಿಸುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಎಂ.ಶಿವಕುಮಾರ್, ಎಲ್.ರಾಜೇಂದ್ರ, ಎಂ.ದಾಸಯ್ಯ ಉಪಸ್ಥಿತರಿದ್ದರು.

# ಉಪ ಚುನಾವಣೆ: ಶಿಗ್ಗಾಂವಿ, ಸಂಡೂರು ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿ ಪ್ರಕಟ: ಎಲ್ಲರ ಚಿತ್ತ ಚನ್ನಪಟ್ಟಣದತ್ತ!



ಭರತ್ ಬೊಮ್ಮಾಯಿ ಬಂಗಾರು ಹನುಮಂತು

ನವದೆಹಲಿ, ಅ.19– ಕರ್ನಾಟಕದ ತೆರವಾಗಿರುವ 3 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ದಿನಾಂಕ ಘೋಷಣೆಯಾದ ಬೆನ್ನಲ್ಲೇ ಇದೀಗ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಆದರೆ ಮೂರು ಕ್ಷೇತ್ರಗಳ ಪೈಕಿ 2 ಕ್ಷೇತ್ರಕ್ಕೆ ಅಭ್ಯರ್ಥಿಗಳ ಘೋಷಿಸಿದೆ. ಚನ್ನಪಟ್ಟಣದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಹಗ್ಗಜಗ್ಗಾಟ ಜೋರಾಗಿರುವ ಕಾರಣ ಈ ಕ್ಷೇತ್ರದ ಅಭ್ಯರ್ಥಿ ಇನ್ನೂ ಅಂತಿಮಗೊಂಡಿಲ್ಲ.

ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಕ್ಷೇತ್ರವಾಗಿದ್ದ ಶಿಗ್ಗಾಂವಿ ಕ್ಷೇತ್ರಕ್ಕೆ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿ ಅವರಿಗೆ ಮತ್ತು ಸಂಡೂರು ಕ್ಷೇತ್ರಕ್ಕೆ ಬಿಜೆಪಿ ನಾಯಕ ಬಂಗಾರು ಹನುಮಂತುಗೆ ಟಿಕೆಟ್ ನೀಡಲಾಗಿದೆ.

ಚನ್ನಪಟ್ಟಣ ಕ್ಷೇತ್ರ ಜೆಡಿಎಸ್ ತೆಕ್ಕೆಗೆ ಜಾರಿದೆ ಎಂದು ಮೂಲಗಳು ಹೇಳುತ್ತಿದೆ. ಟಿಕೆಟ್‌ಗಾಗಿ ಭಾರೀ ಹೋರಾಟ ನಡೆಸಿದ ವಿಧಾನ ಪರಿಷತ್ ಸದಸ್ಯರೂ ಆದ ಬಿಜೆಪಿ ನಾಯಕ ಸಿಪಿ ಯೋಗೇಶ್ವರ್‌ಗೆ ತೀವ್ರ ನಿರಾಸೆಯಾಗಿದೆ. ಹೆಚ್‌ಡಿ ಕುಮಾರಸ್ವಾಮಿ ಸಂಸದರಾದ ಬಳಿಕ ರಾಜೀನಾಮೆ ನೀಡಿದ ಚನ್ನಪಟ್ಟಣ ಸ್ಥಾನಕ್ಕೆ ಇದೀಗ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸುವ ಸಾಧ್ಯತೆ ಬಹುತೇಕ ಪಕ್ಕಾ ಆಗಿದೆ.

ಕರ್ನಾಟಕದ ಮೂರು ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದೆ. ಶಿಗ್ಗಾಂವಿ ಕ್ಷೇತ್ರದಿಂದ ಶಾಸಕರಾಗಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಲೋಕಸಭೆ ಚುನಾವಣೆಯಲ್ಲಿ ಹಾವೇರಿ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾಗಿದ್ದರೆ ಹೀಗಾಗಿ ಶಿಗ್ಗಾಂವಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದೀಗ ಶಿಗ್ಗಾಂವಿ ಕ್ಷೇತ್ರವನ್ನು ತಮ್ಮ ಕುಟುಂಬ ಬಳಿ ಉಳಿಸಿಕೊಳ್ಳುವಲ್ಲಿ ಬಸವರಾಜ್ ಬೊಮ್ಮಾಯಿ ಯಶಸ್ವಿಯಾಗಿದ್ದಾರೆ ಇತ್ತ ಸಂಡೂರ್ ಕ್ಷೇತ್ರದಲ್ಲಿ ಭಾರೀ ಕುತೂಹಲ ಮನೆ ಮಾಡಿತ್ತು. ಈ ಕ್ಷೇತ್ರದಲ್ಲಿ ಬಂಗಾರು ಹನುಮಂತುಗೆ ಟಿಕೆಟ್ ನೀಡಲಾಗಿದೆ.

ಚನ್ನಪಟ್ಟಣ ಜಿದ್ದಾಜಿದ್ದಿನ ಕಣವಾಗಿದ್ದು, ಲೋಕಸಭೆಯಲ್ಲಿ ಡಿ.ಕೆ ಶಿವಕುಮಾರ್ ಹಾಗೂ ಕಾಂಗ್ರೆಸ್ ಆಗಿರುವ ನಷ್ಟವನ್ನು ಇದೀಗ ಉಪ ಚುನಾವಣೆಯಲ್ಲಿ ಬಡ್ಡಿ ಸಮೇತ ತೀರಿಸಲು ಡಿಕೆಶಿ ಬ್ರದರ್ಸ್ ಪ್ಲಾನ್ ಮಾಡುತ್ತಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿದೆ ಕಾರಣ ಕನಕಪುರ ಕ್ಷೇತ್ರದಲ್ಲಿ ಡಿಕೆಶಿ ಸಹೋದರ ಡಿಕೆ ಸುರೇಶ್ ಸೋಲು ಕಂಡಿದ್ದರು. ಇಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಗೆಲುವು ಸಾಧಿಸಿ ಸಂಸದರಾಗಿದ್ದಾರೆ ಹೀಗಾಗಿ ಉಪ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರ ಗೆಲ್ಲಲು ಕಾಂಗ್ರೆಸ್ ಪ್ಲಾನ್ ಮಾಡುತ್ತಿದೆ. ಇತ್ತ ಸಿಪಿ ಯೋಗೇಶ್ವರ್ ತಾವೇ ಅಭ್ಯರ್ಥಿ ಎಂದು ಘೋಷಿಸಿಕೊಂಡು ಕೆಲಸ ಆರಂಭಿಸಿದ್ದರು.

# ವಸ್ತುಪ್ರದರ್ಶನ ಆವರಣದಲ್ಲೇ ರಸ್ತೆ ಬದಿ ವ್ಯಾಪಾರಿಗಳ ಹಾವಳಿ

## ಪ್ರವಾಸಿಗರು, ಮಳಿಗೆದಾರರಿಗೆ ಕಿರಿಕಿರಿ



ದಸರಾ ವಸ್ತುಪ್ರದರ್ಶನದ ಮುಖ್ಯದ್ವಾರದಲ್ಲಿ ರಸ್ತೆ ಬದಿ ವ್ಯಾಪಾರಿಗಳ ಹಿಂಡು

ಮೈಸೂರು, ಅ.19(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದ ಹೊರ ಮತ್ತು ಒಳ ಆವರಣದಲ್ಲಿ ರಸ್ತೆ ಬದಿ ವ್ಯಾಪಾರಿಗಳ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದ್ದು, ಪ್ರವಾಸಿಗರು ಟಿಕೆಟ್ ಖರೀದಿಸಲೂ ಸಾಧ್ಯವಾಗಷ್ಟು ಕಿರಿಕಿರಿ ಅನುಭವಿಸುವಂತಾಗಿದೆ...!

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಆಕರ್ಷಣೆಗಳಲ್ಲೊಂದಾದ ವಸ್ತುಪ್ರದರ್ಶನದಲ್ಲಿ ಅನಧಿಕೃತವಾಗಿ ಹೆಜ್ಜೆ ಹೆಜ್ಜೆಗೂ ಸಣ್ಣ–ಪುಟ್ಟ ವ್ಯಾಪಾರಸ್ಥರು ತುಂಬಿ ತುಳುಕುತ್ತಿದ್ದು, ಜಾತ್ರೆಯಂತಾಗಿದೆ. ವಸ್ತುಪ್ರದರ್ಶನ ಮುಖ್ಯದ್ವಾರದ ಟಿಕೆಟ್ ಕೌಂಟರ್ ಬಳಿಯೇ ಹಿಂಡಿಂಡೂ ವ್ಯಾಪಾರಿಗಳು ತಲೆ ಎತ್ತಿದ್ದು, ಲಕ್ಷಾಂತರ ರೂ.ಕೊಟ್ಟು ಮಳಿಗೆ ಹಾಕಿದವರು ವ್ಯಾಪಾರವಿಲ್ಲದೆ ನಷ್ಟ ಅನುಭವಿಸುವಂತಾಗಿದೆ.

ಹೊರ ಭಾಗದಂತೆ ಒಳಗಡೆಯೂ ಇದೇ ಪರಿಸ್ಥಿತಿಯಾಗಿದ್ದು, ಮಳಿಗೆಗಳಿಗೆ ಹೋಗುವ ಮಾರ್ಗದುದ್ದಕ್ಕೂ ವ್ಯಾಪಾರಿಗಳು ಪ್ರವಾಸಿಗರನ್ನು ನೊಣಗಳಂತೆ ಮುತ್ತಿಕೊಳ್ಳುತ್ತಿದ್ದಾರೆ. ಸರ್ಕಾರಿ ಮಳಿಗೆಗಳು, ಫುಡ್‌ಸ್ಟಾಲ್, ಕಾರಂಜಿ, ಸೆಲ್ಫಿಸ್ಪಾಟ್ ಎಲ್ಲೆಂದರಲ್ಲಿ ಬೇಕಾಬಿಟ್ಟಿ ವ್ಯಾಪಾರ ನಡೆಯುತ್ತಿದೆ ಜನದಟ್ಟಣೆ ನಡುವೆ ಎದುರಾಗುವ ವ್ಯಾಪಾರಿಗಳಿಂದ ವಿಚಲಿತಗೊಂಡು ಮಕ್ಕಳು, ಹಿರಿಯ ನಾಗರಿಕರು ತಪ್ಪಿಸಿಕೊಳ್ಳುವುದು ಹೆಚ್ಚಾಗಿದೆ. ಇದರ ನಡುವೆ ಇಷ್ಟೊಂದು ಸಂಖ್ಯೆಯ ಅನಧೀಕೃತ ವ್ಯಾಪಾರಸ್ಥರಿಗೆ ಅನುಮತಿ ನೀಡಿದವರ್ಯಾರು ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

**ಒಬ್ಬೊಬ್ಬರ ಬಾಯಲ್ಲೂ ಒಬ್ಬೊಬ್ಬರ ಹೆಸರು!:** ಅನಧಿಕೃತ ವ್ಯಾಪಾರಿಗಳನ್ನು ನಿಮಗೆ ಇಲ್ಲೆಲ್ಲಾ ವ್ಯಾಪಾರ ಮಾಡಲು ಅನುಮತಿ ನೀಡಿದ್ದಾರೆಂಯೇ ಎಂದು ಕೇಳಿದರೆ ಒಬ್ಬೊಬ್ಬರು ಒಬ್ಬೊಬ್ಬರ ಹೆಸರನ್ನು ಹೇಳುತ್ತಾರೆ. ಕೆಲವರು ಅಧ್ಯಕ್ಷರೆಂದರೆ, ಮತ್ತೆ ಕೆಲವರು ಗುತ್ತಿಗೆದಾರರು ಎನ್ನುತ್ತಾರೆ. ಇನ್ನೂ ಕೆಲವರು ಪ್ರಾಧಿಕಾರಕ್ಕೆ ಸಂಬಂಧವೇ ಇಲ್ಲದವರ ಹೆಸರನ್ನು ಹೇಳುತ್ತಿದ್ದು, ವಸ್ತುಪ್ರದರ್ಶನ ಗೊಂದಲದ ಗೂಡಾಗಿದೆ.

ಸುಮಾರು 11 ಕೋಟಿ ರೂ. ನೀಡಿ ದಸರಾ ವಸ್ತುಪ್ರದರ್ಶನ ಗುತ್ತಿಗೆ ಪಡೆದಿರುವ ಫನ್‌ವರ್ಲ್ಡ್ ಇಂಡಿಯಾ ರೆಸಾರ್ಟ್ ಲಿ. ಟಿಕೆಟ್ ಕೌಂಟರ್, ಪಾರ್ಕಿಂಗ್, ಆಹಾರ ಮಳಿಗೆಗಳು ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್‌ಅನ್ನು ಗುತ್ತಿಗೆ ನೀಡಿ ಹಂಚಿಕೆ ಮಾಡಿದೆ. ಆದರೆ, ಟಿಕೆಟ್ ಕೌಂಟರ್‌ಗಳ ಎದುರು, ಒಳ ಆವರಣದ ರಸ್ತೆ ಬದಿಯಲ್ಲಿ ಅನುಮತಿ ನೀಡಲ್ಲವಾದರೂ ವ್ಯಾಪಾರ ಮಾಡಲು ಅವಕಾಶ ಮಾಡಿಕೊಟ್ಟಿರುವುದು ಪ್ರವಾಸಿಗರು ತೊಂದರೆ ಅನುಭವಿಸುವಂತಾಗಿದೆ.

**ಆಂಬುಲೆನ್ಸ್, ಅಧಿಕಾರಿಗಳ ಸೇವೆ ಅತ್ಯಲ್ಪ:** ದಸರಾ ವಸ್ತುಪ್ರದರ್ಶನದಲ್ಲಿ ತುರ್ತು ಸಂದರ್ಭಕ್ಕಾಗಿ ಆಂಬುಲೆನ್ಸ್ ಸೇವೆ ಸಮರ್ಪಕವಾಗಿಲ್ಲ. ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಇರಲೇಬೇಕಾದ ಅಂಬುಲೆನ್ಸ್ ಅನ್ನು ಸಂಜೆ ಐದಾರು ಗಂಟೆಗೆ ತಂದು ನಿಲ್ಲಿಸಿ ಕೆಲ ಗಂಟೆಗಳಲ್ಲೇ ತೆಗೆದುಕೊಂಡು ಹೋಗಲಾಗುತ್ತಿದೆ. ಹಾಗೆಯೇ ವಸ್ತುಪ್ರದರ್ಶನ ಮುಗಿಯುವವರೆಗೂ ಇರಬೇಕಾದ ಪ್ರಾಧಿಕಾರದ ಅಧಿಕಾರಿ–ಸಿಬ್ಬಂದಿಗಳು ಸಂಜೆಯಾಗುತ್ತಿದ್ದಂತೆ ತೆರಳುತ್ತಾರೆ. ಏನಾದರೂ ಸಮಸ್ಯೆ ತಿಳಿಸೋಣವೆಂದರೆ ಯಾರು ಇರುವುದಿಲ್ಲ ಎಂದು ಕೆಲವರು ಬೇಸರ ವ್ಯಕ್ತಪಡಿಸಿದ್ದಾರೆ.

### ಕತ್ತಲೆಯಲ್ಲಿ ಜನಸಮೂಹ...!

ವಾರ್‍ಯಾಂತ(ಶನಿವಾರ ಮತ್ತು ಭಾನುವಾರ) ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 10 ಗಂಟೆಯವರೆಗೆ ಹಾಗೂ ವಾರದ ದಿನಗಳಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 9.30ರವರೆಗೆ ವಸ್ತು ಪ್ರದರ್ಶನವಿರಲಿದೆ ಆದರೆ, ವಾರ್‍ಯಾಂತ ದಿನವಾದ ಶನಿವಾರ ರಾತ್ರಿ 9.30ಕ್ಕೆ ಎಲ್ಲಾ ವಿದ್ಯುತ್ ದೀಪಗಳನ್ನು ಆಫ್ ಮಾಡಲಾಯಿತು. ಇನ್ನೂ 30 ನಿಮಿಷ ಮುಂಚಿತವಾಗಿ ಎಲ್ಲಾ ಲೈಟ್ಸ್‌ಗಳನ್ನು ಆಫ್ ಮಾಡಿದ್ದರಿಂದ ಜನ ಸಮೂಹ ಕತ್ತಲೆಯಲ್ಲೇ ತಿಂಡಿ–ತಿನಿಸು ಸವಿದು ನಿರಾಸೆಯಿಂದ ಹೊರ ನಡೆಯುವಂತಾಯಿತು. ಆಗಷ್ಟೇ ವಸ್ತುಪ್ರದರ್ಶನಕ್ಕೆ ಬಂದಿದ್ದ ಪ್ರವಾಸಿಗರು ಏನನ್ನೂ ನೋಡಲು ಸಾಧ್ಯವಾಗದೆ ಪರದಾಡಿದರು. ಇಡೀ ವಸ್ತು ಪ್ರದರ್ಶನದಲ್ಲಿ ಕತ್ತಲು ಆವರಿಸಿತ್ತು ಎಂದು ಹಲವು ಮಳಿಗೆದಾರರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

### ಗಲಾಟೆ, ಗುದ್ದಾಟ...

ದಸರಾ ವಸ್ತುಪ್ರದರ್ಶನದ ಹೊರ ಆವರಣದಲ್ಲಿ ವ್ಯಾಪಾರ ಮಾಡುತ್ತಿದ್ದ ರಸ್ತೆ ಬದಿ ವ್ಯಾಪಾರಿಗಳು ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟವರೆಂದು ಕೆಲವೊಬ್ಬರ ಹೆಸರು ಹೇಳಿದ್ದರಿಂದ ಗುತ್ತಿಗೆದಾರರ ನಡುವೆಯೇ ಶನಿವಾರ ಸಂಜೆ ಗುದ್ದಾಟ ನಡೆಯಿತು.

ಗುತ್ತಿಗೆದಾರರ ಕಡೆಯವರು ಎನ್ನಲಾದ ಇಬ್ಬರು ಪರಸ್ಪರ ಬಟ್ಟೆ ಹರಿದುಹಾಕುವ ಮಟ್ಟಕ್ಕೆ ಗುದ್ದಾಡಿಕೊಂಡ ಘಟನೆಯೂ ನಡೆಯಿತು. ವ್ಯಾಪಾರಿಗಳಿಂದ ಕೇಳಿ ಬಂದ ಹೆಸರಿನ ವ್ಯಕ್ತಿ ನಾನು ಯಾರಿಗೂ ವ್ಯಾಪಾರ ಮಾಡಿ ಎಂದು ಹೇಳಿಲ್ಲ ಎಂದು ವಾದಿಸಿದರೆ, ಕೆಲ ಗುತ್ತಿಗೆದಾರರು ಬಂಡವಾಳ ಹಾಕಿ ಮಳಿಗೆ ಹಾಕಿದವರಿಗೆ ಮಾತ್ರ ಅವಕಾಶ ನೀಡಬೇಕು. ಬೇರೆಯವರಿಗೆ ಅನುಮತಿ ನೀಡಲು ನಿನ್ಯಾರು ಎಂದು ಪಟ್ಟು ಹಿಡಿದಿದ್ದರು. ಇದರಿಂದ ಕೆಲಕಾಲ ಆತಂಕ ವಾತಾವರಣ ಸೃಷ್ಟಿಯಾಗಿತ್ತು. ನಂತರ ಸ್ಥಳಕ್ಕೆ ಬಂದ ಪೊಲೀಸರು ಗಲಾಟೆ ಕುರಿತು ಪ್ರಶ್ನಿಸಿದಾಗ ಗುತ್ತಿಗೆದಾರರೇ ಏನೂ ಗಲಾಟೆ ಇಲ್ಲವೆಂದು ಸುಮ್ಮನಾದರು.

# ದೇಶ - ವಿದೇಶ

## ಖಲಿಸ್ತಾನಿ ಬಣ ಕಲಹದಲ್ಲಿ ನಿಜ್ಜಾರ್ ಹತ್ಯೆ: ಕೆನಡಾ ಪ್ರಧಾನಿ ಟ್ರುಡೊಗೆ ಮತ್ತೆ ಮುಖಭಂಗ



**ಒಟ್ಟಾವ:** ಸಿಖ್ ಪ್ರತ್ಯೇಕತಾವಾದಿ ನಾಯಕರ ನಡುವಿನ ಬಣ ಕಲಹದಲ್ಲಿ ಖಲಿಸ್ತಾನಿ ಉಗ್ರ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆಯಾಗಿದ್ದಾನೆಯೇ ಹೊರತು ಇದರಲ್ಲಿ ಭಾರತೀಯರ ಪಾತ್ರವಿರಲಿಲ್ಲ. ಆದರೆ, ಕೆನಡಾ ಪೊಲೀಸರು ತನಿಖೆಯ ಹಾದಿ ತಪ್ಪಿಸುವ ಮೂಲಕ ಕೃತ್ಯದ ಹೊಣೆಯನ್ನು ಭಾರತದ ತಲೆಗೆ ಕಟ್ಟುವ ಪ್ರಯತ್ನ ನಡೆಸಲಾಯಿತು ಎಂಬ ಸಂಗತಿಯನ್ನು ಕೆನಡಾದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ್ತಿ ಜೋಡಿ ಥಾಮಸ್ ಬಹಿರಂಗಪಡಿಸಿದ್ದಾರೆ. ಏರ್ ಇಂಡಿಯಾ ಕಾನಿಷ್ಕ ವಿಮಾನದಲ್ಲಿ (1985) ಬಾಂಬ್ ಸ್ಫೋಟದ ಆರೋಪಿ ರಿಪುದಮನ್ ಸಿಂಗ್ ಮಲಿಕ್ ಹತ್ಯೆಗೆ ಪ್ರತೀಕಾರವಾಗಿ ನಿಜ್ಜಾರ್‌ನನ್ನು ಮತ್ತೊಂದು ಗುಂಪು ಹತ್ಯೆ ಮಾಡಿತ್ತು. ಗುಪ್ತಚರ ಸಂಸ್ಥೆಗಳು ಸಹ ಇದೇ ಅಂಶವನ್ನು ಉಲ್ಲೇಖಿಸಿದ್ದವು. ಆದರೆ, ಪೊಲೀಸರು ತನಿಖೆಯ ದಿಕ್ಕು ತಪ್ಪಿಸಿದರು ಎಂದು ಜೋಡಿ ಥಾಮಸ್ ಸ್ಪಷ್ಟಪಡಿಸಿದ್ದಾರೆ.

ನಿಜ್ಜಾರ್ ಹತ್ಯೆ ಕುರಿತು ಕೆನಡಾದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರರು ಶುಕ್ರವಾರ ನೀಡಿರುವ ಹೇಳಿಕೆ ಪ್ರಕರಣಕ್ಕೆ ಹೊಸ ತಿರುವು ನೀಡಿದೆ. ಕೃತ್ಯದಲ್ಲಿ ಭಾರತದ ಯಾವುದೇ ಪಾತ್ರವಿರಲಿಲ್ಲ ಎಂಬುದು ದೃಢಪಟ್ಟಿದೆ.

## 40ಕ್ಕೂ ಅಧಿಕ ವಿಮಾನಗಳಿಗೆ ಬಾಂಬ್ ಬೆದರಿಕೆ




**ನವದೆಹಲಿ:** ಇಂಡಿಗೋ, ಎರಡು ಪ್ರತ್ಯೇಕ ಹೇಳಿಕೆಗಳಲ್ಲಿ, ಮುಂಬೈನಿಂದ ಇಸ್ತಾನ್‌ಬುಲ್‌ಗೆ 6ಇ 17 ಮತ್ತು ದೆಹಲಿಯಿಂದ ಇಸ್ತಾನ್‌ಬುಲ್‌ಗೆ 6ಇ 11 ವಿಮಾನಗಳಿಗೆ ಬಾಂಬ್ ಬೆದರಿಕೆ ಬಂದಿದೆ ಎಂದು ಹೇಳಿದೆ. ವಿಮಾನಯಾನ ಸಂಸ್ಥೆಯು ಸಂಬಂಧಿತ ಅಧಿಕಾರಿಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಇಂಡಿಗೋ ತಿಳಿಸಿದೆ. ವಿಮಾನ 6ಇ 184, ಜೋಧ್‌ಪುರದಿಂದ ದೆಹಲಿಗೆ ಕಾರ್ಯನಿರ್ವಹಿಸುತ್ತಿದ್ದು, ಭದ್ರತೆಗೆ ಸಂಬಂಧಿಸಿದ ಎಚ್ಚರಿಕೆಯನ್ನು ಸ್ವೀಕರಿಸಿದೆ ಎಂದು ಹೇಳಿದೆ. ಲ್ಯಾಂಡಿಂಗ್‌ಗೆ ಸ್ವಲ್ಪ ಮೊದಲು, ಉದಯಪುರದಿಂದ ಮುಂಬೈಗೆ ತೆರಳುತ್ತಿದ್ದ ಯುಕೆ 624 ವಿಮಾನವು ಭದ್ರತಾ ಆತಂಕ ಹೊಂದಿತ್ತು ಮತ್ತು ಮುಂಬೈ ವಿಮಾನ ನಿಲ್ದಾಣದಲ್ಲಿ ಇಳಿದ ನಂತರ, ವಿಮಾನವನ್ನು ಕಡ್ಡಾಯ ತಪಾಸಣೆಗೆ ಒಳಪಡಿಸಲಾಯಿತು ಎಂದು ವಿಸ್ತಾರಾ ಪ್ರಕಟಣೆಯಲ್ಲಿ ತಿಳಿಸಿದೆ. ಕಳೆದ ಕೆಲವು ದಿನಗಳಿಂದ ಭಾರತೀಯ ವಿಮಾನಯಾನ ಸಂಸ್ಥೆಗಳ 40ಕ್ಕೂ ಹೆಚ್ಚು ವಿಮಾನಗಳಿಗೆ ಬಾಂಬ್ ಬೆದರಿಕೆಗಳು ಬಂದಿವೆ. ತಪಾಸಣೆ ನಂತರ ಹುಸಿಬಾಂಬ್ ಎಂದು ಸಾಬೀತಾಗಿದೆ.

## ಕಂಪನಿ ಮಾರಿದ ಹಣದಲ್ಲಿ ತನ್ನ ಉದ್ಯೋಗಿಗಳಿಗೆ ತಲಾ 42 ಕೋಟಿ ರೂ. ಹಂಚಿದ ಮಾಲೀಕ



**ಸ್ಯಾನ್ ಫ್ರಾನ್ಸಿಸ್ಕೋ (ಅಮೆರಿಕ):** ಅವರ ಹೆಸರು ಜ್ಯೋತಿ ಬನ್ಸಾಲ್. ವರ್ಷಗಳ ಹಿಂದೆ ಭಾರತದಿಂದ ಅಮೆರಿಕಕ್ಕೆ ಹೋಗಿ ಅಲ್ಲಿಯೇ ಉದ್ಯಮಿಯಾಗಿ ಬೆಳೆದವರು. ಸುಮಾರು 9 ವರ್ಷಗಳ ಹಿಂದೆ ಅವರು ಸ್ಥಾಪಿಸಿದ ಕಂಪನಿ ಹೆಸರು ಆಪ್ ಡೈನಮಿಕ್ಸ್. ಇತ್ತೀಚೆಗೆ, ಆ ಕಂಪನಿಯನ್ನು ಅಮೆರಿಕದ ಖ್ಯಾತ ಸಿಸ್ಕೋ ಕಂಪನಿ ಖರೀದಿಸಿದೆ. ಇದರಿಂದ ಬಂದ ಹಣವನ್ನು ಬನ್ಸಾಲ್ ಅವರು ತನ್ನ ಕಂಪನಿಯ ಬೆಳವಣಿಗೆಗೆ ಕಾರಣವಾದ ತನ್ನ ಉದ್ಯೋಗಿಗಳ ಖಾತೆಗೆ 42 ಕೋಟಿ ರೂ.ಗಳನ್ನು ಹಂಚಿದ್ದು, ಆ ಎಲ್ಲಾ ಉದ್ಯೋಗಿಗಳ ಜೀವನವೇ ಬದಲಾಗಿದೆ. ಅವರೆಲ್ಲರೂ ಹೊಸ ಮನೆಗಳನ್ನು ಖರೀದಿಸಿದ್ದಾರೆ, ಕಾರುಗಳನ್ನು ಕೊಂಡಿದ್ದಾರೆ, ಸಾಲಗಳನ್ನು ತೀರಿಸಿಕೊಂಡು ನಿರುಮ್ಮಳವಾಗಿದ್ದಾರೆ. ಕಂಪನಿಯ ಒಬ್ಬ ಉದ್ಯೋಗಿಯಂತೂ, ಕಂಪನಿಗೆ 6 ತಿಂಗಳು ರಜೆ ಹಾಕಿ, ಒಂದು ಕ್ಯಾರವಾನ್ ಅನ್ನು ಬಾಡಿಗೆಗೆ ಪಡೆದು ಅಮೆರಿಕ ಸುತ್ತಲು ಹೋಗಿದ್ದಾನೆ. ಕಂಪನಿಯನ್ನು ಮಾರಾಟ ಮಾಡಿ ಬಂದ ಹಣವನ್ನು ತಾವೊಬ್ಬರೇ ಇಟ್ಟುಕೊಳ್ಳದೇ ಅದರಲ್ಲಿ ತಮಗೂ ಪಾಲು ನೀಡಿದ ಬನ್ಸಾಲ್ ಅವರನ್ನು ಮನಸಾರೆ ನೆನೆಯುತ್ತಿದ್ದಾರೆ ಕಂಪನಿ ಉದ್ಯೋಗಿಗಳು.


## ಮಣಿಪುರದಲ್ಲಿ ಮತ್ತೆ ಹಿಂಸಾಚಾರ: ಜಿರಿಬಾಮ್ ಜಿಲ್ಲೆಯ ಹಳ್ಳಿಯ ಮೇಲೆ ಉಗ್ರರ ದಾಳಿ



**ಇಂಫಾಲ್:** ಜಿರಿಬಾಮ್ ಜಿಲ್ಲೆಯ ಹಳ್ಳಿಯೊಂದರ ಮೇಲೆ ಉಗ್ರರು ಶನಿವಾರ ದಾಳಿ ನಡೆಸಿದ್ದರಿಂದ ಮಣಿಪುರದಲ್ಲಿ ಹೊಸ ಹಿಂಸಾಚಾರ ಭುಗಿಲೆದ್ದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ, ಇಂದು ಬೆಳಗಿನ ಜಾವ 5 ಗಂಟೆ ಸುಮಾರಿಗೆ ಬೊರೊಬೆಕ್ರಾ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವನ್ನು ಗುರಿಯಾಗಿಸಿಕೊಂಡು ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಹೇಳಿದ್ದಾರೆ.

ಸಿಆರ್‌ಪಿಎಫ್ ಮತ್ತು ಪೊಲೀಸ್ ಸಿಬ್ಬಂದಿ ಪ್ರತಿದಾಳಿ ನಡೆಸಿದ್ದು, ಭಾರಿ ಗುಂಡಿನ ಚಕಮಕಿ ನಡೆಯುತ್ತಿದೆ. ಸ್ಥಳಕ್ಕೆ ಹೆಚ್ಚುವರಿ ಭದ್ರತಾ ಪಡೆಗಳು ಧಾವಿಸುತ್ತಿವೆ. ಇದುವರೆಗೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಹಿಂಸಾಚಾರ ಭುಗಿಲೇಳುತ್ತಿದ್ದಂತೆ ವೃದ್ಧರು, ಮಹಿಳೆಯರು ಮತ್ತು ಮಕ್ಕಳನ್ನು ಭದ್ರತಾ ಪಡೆಗಳು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುತ್ತಿದ್ದಾರೆ. ಜಿರಿಬಾವ್ ಪಟ್ಟಣದಿಂದ ಸುಮಾರು 30 ಕಿಮೀ ದೂರದಲ್ಲಿರುವ ಬೊರೊಬೆಕ್ರಾ, ದಟ್ಟವಾದ ಕಾಡುಗಳು ಮತ್ತು ಪರ್ವತಮಯ ಭೂಪ್ರದೇಶದಿಂದ ಆವೃತವಾಗಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ರಾಜ್ಯದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ನಂತರ ಈ ಪ್ರದೇಶವು ಇಂತಹ ಹಲವಾರು ದಾಳಿಗಳಿಗೆ ಸಾಕ್ಷಿಯಾಗುತ್ತಿದೆ.

## ದೆಹಲಿಯಲ್ಲಿ ಈಗ ಜಲಮಾಲಿನ್ಯ: ಜೀವನದಿಗಳಲ್ಲಿ ವಿಷಕಾರಿ ನೊರೆ



**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚು ಪ್ರಮಾಣದ ಮಾಲಿನ್ಯ ಈ ಬಾರಿ ಕಂಡು ಬರುತ್ತಿದೆ. ವಾಯುಮಾಲಿನ್ಯ ಸೂಚ್ಯಂಕ AQI 300ರ ಗಡಿ ದಾಟಿದೆ ಎಂದು ವರದಿ ಆಗಿದೆ. ಇನ್ನೊಂದೆಡೆ ಜಲಮಾಲಿನ್ಯ ಕೂಡ ದೆಹಲಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಈಗಾಗಲೇ ಯಮುನಾ ನದಿಯಲ್ಲಿ ಭಾರೀ ಪ್ರಮಾಣದ ನೊರೆ ಉತ್ಪತ್ತಿಯಾಗಿದೆ. ಇನ್ನೇನು ದೀಪಾವಳಿ ಹಬ್ಬ ಹತ್ತಿರ ಬರುತ್ತಿದೆ. ದೆಹಲಿಯ ನಗರದಲ್ಲಿ ದೀಪಾವಳಿಗೂ ಮುನ್ನ ಮಾಲಿನ್ಯ ಪ್ರಮಾಣದಲ್ಲಿ ಹೆಚ್ಚಳ ಕಂಡು ಬಂದಿದೆ. ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬೆಳಗ್ಗೆ ಉಸಿರುಗಟ್ಟುವ ವಾತಾವರಣ ನಿರ್ಮಾಣಗೊಳ್ಳುತ್ತಿದೆ. ಗೌತಮ್ ಬುಧ್ ನಗರವು 11.4%, ಬುಲಂದ್ ಶಹರ್ 7.8%, ಗಾಜಿಯಾಬಾದ್ 6.6% ಮತ್ತು ಫರಿದಾಬಾದ್ 4.8% ಮಾಲಿನ್ಯಕ್ಕೆ ಕೊಡುಗೆ ನೀಡಿವೆ. ಅ.7ರಿಂದ ಧೂಳಿನ ಮಾಲಿನ್ಯದ ವಿರುದ್ಧ ಸರ್ಕಾರವು ಧೂಳು ವಿರೋಧಿ ಅಭಿಯಾನವನ್ನು ನಡೆಸುತ್ತಿದೆ. ಇದುವರೆಗೆ 523 ತಂಡಗಳು 2764 ನಿರ್ಮಾಣ ಸ್ಥಳಗಳನ್ನು ಪರಿಶೀಲಿಸಿದೆ. 17.40 ಲಕ್ಷ ರೂ. ದಂಡವನ್ನು ವಿಧಿಸಲಾಗಿದೆ. ಧೂಳು ವಿರೋಧಿ ಅಭಿಯಾನವನ್ನು ಗ್ರೀನ್ ವಾರ್ ರೂಮ್‌ನಿಂದ ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.

ಮೈಸೂರು ಮಿತ್ರ ಭಾನುವಾರ 20 ಅಕ್ಟೋಬರ್ 2024

# ಕಾಂಕ್ರೀಟ್, ಥಾರ್ ಮಿಶ್ರಣ ಘಟಕ ಸ್ಥಗಿತ

## ಕುಂದ-ಈಚೂರು ಗ್ರಾಮಸ್ಥರ ಪ್ರತಿಭಟನೆಗೆ ಮಣಿದ ತಹಸೀಲ್ದಾರ್ ಆದೇಶ



ಕುಂದ-ಈಚೂರು ಗ್ರಾಮದ ರಸ್ತೆಯಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು.



ಕಾಂಕ್ರೀಟ್ ಮಿಶ್ರಣ ಘಟಕದಲ್ಲಿ ತಹಸೀಲ್ದಾರ್ ಪರಿಶೀಲನೆ ನಡೆಸಿದರು.

ಗೋಣಿಕೊಪ್ಪ ಅ.19– ಕುಂದ-ಈಚೂರು ಗ್ರಾಮದಲ್ಲಿರುವ ಕಾಂಕ್ರೀಟ್, ಥಾರ್ ಮಿಶ್ರಣ ಘಟಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಪೊನ್ನಂಪೇಟೆ ತಹಸೀಲ್ದಾರ್ ಮೋಹನ್ ಕುಮಾರ್ ಆದೇಶಿಸಿದ್ದಾರೆ.

ಘಟಕದಿಂದ ಸಾಕಷ್ಟು ವರ್ಷಗಳಿಂದ ಮಾಲಿನ್ಯ ಎದುರಿಸುತ್ತಿರುವ ಬಗ್ಗೆ ಸ್ಥಳೀಯ ಗ್ರಾಮಸ್ಥರು ಶನಿವಾರ ರಸ್ತೆಯಲ್ಲಿ ನಡೆಸುತ್ತಿದ್ದ ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿ, ಸಮಸ್ಯೆ ಆಲಿಸಿದ ನಂತರ ಎನ್‌ಬಿಎನ್ ಘಟಕ ಪರಿಶೀಲಿಸಿ ಸ್ಥಳೀಯರ ಹೋರಾಟ ಅರಿತು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಸೂಚನೆ ನೀಡಿದರು.

ಘಟಕ ಆರಂಭ ಮತ್ತು ದಾಖಲಾತಿ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳಲಾಗುವುದು. ಗ್ರಾಮಸ್ಥರು ಮತ್ತು ಘಟಕದ ಮಾಲೀಕರು ಸೂಕ್ತ ದಾಖಲೆ ಸಲ್ಲಿಸುವಂತೆ ಸೂಚಿಸಿದರು. ಗ್ರಾಮಸ್ಥರ ಕೋರಿಕೆಯಂತೆ ಘಟಕವನ್ನು ಸ್ಥಗಿತಗೊಳಿಸಲಾಗಿದೆ ಸಾಧಕ-ಬಾಧಕ ಅರಿತು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸ್ಥಳೀಯರು ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ವಾಹನಗಳು ತೆರಳದಂತೆ ಮನವಿ ಮಾಡಿಕೊಂಡರು. ವಾಯುಮಾಲೀನ್ಯದಿಂದ ಗ್ರಾಮದಲ್ಲಿ ರೋಗಗಳು ಹೆಚ್ಚಾಗುತ್ತಿವೆ. ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದೆ ಎಂಬ ಅಭಿಪ್ರಾಯ ಸ್ಥಳೀಯರಿಂದ ವ್ಯಕ್ತವಾಯಿತು.

ಮಾಲೀನ್ಯ ಮಂಡಳಿ ಅಧಿಕಾರಿಗಳು ಘಟಕದ ಸಮೀಪ ಹೊಳೆಯನ್ನು ತೋಡು ಎಂದು ದಾಖಲಿಸಿ ಮಾಲಿನ್ಯ ರಹಿತವಾಗಿದೆ ಎಂದು ಪ್ರಮಾಣ ಪತ್ರ ನೀಡಿದೆ. ಗಿರಿಜನರ ಕಾಲೋನಿ ನಿವಾಸಿಗಳಿಗೆ ಮಾಲಿನ್ಯ ಹೆಚ್ಚಾಗುತ್ತಿದೆ. ಉಸಿರಾಟದ ಸಮಸ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ ಎಂದು ಸ್ಥಳೀಯರು ಅಧಿಕಾರಿಗಳ ಗಮನ ಸೆಳೆದರು.

ಹಾತೂರು ಗ್ರಾಪಂ ಪಿಡಿಒ ಉಜ್ಮಾ ಜಬೀನ್ ಮತ್ತು ಉಪಾಧ್ಯಕ್ಷ ಕುಲ್ಲಚಂಡ ಚಿಣ್ಣಪ್ಪ ಅವರನ್ನು ತರಾಟೆಗೆ ಒಳಪಡಿಸಿದರು. ಘಟಕದ ಮಾಲೀಕರು ಎರಡು ವರ್ಷಗಳ ಹಿಂದೆ ಗ್ರಾಮಸ್ಥರ ಒತ್ತಾಯಕ್ಕೆ ಮಣಿದು ಜೂನ್ ತಿಂಗಳಲ್ಲಿ ಘಟಕ ಸ್ಥಗಿತಗೊಳಿಸುವ ಬಗ್ಗೆ ಬರಹದ ಮೂಲಕ ಭರವಸೆ ನೀಡಿದ್ದರು. ಆದರೆ, ನಿರ್ಣಯಕ್ಕೆ ಸರಿಯಾಗಿ ನಡೆದುಕೊಂಡಿಲ್ಲ. ಗ್ರಾಮ ಪಂಚಾಯಿತಿ ಕೂಡ ಸೂಕ್ತ ಕ್ರಮಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು. ಪಿಡಿಒ ಉಜ್ಮಾ ಜಬೀನ್ ಮಾತನಾಡಿ, ಈ ಬಗ್ಗೆ ಇಒ ನ್ಯಾಯಾಲಯದಲ್ಲಿ ಪ್ರಕರಣ ಇದೆ. ಥಾರ್ ಮಿಶ್ರಣ ಘಟಕ ಈಗ ನಡೆಯುತ್ತಿಲ್ಲ. ಕಾಂಕ್ರೀಟ್ ಮಿಶ್ರಣವನ್ನು ನಿಲ್ಲಿಸಲು ಕ್ರಮಕೈಗೊಳ್ಳಲಾಗುವುದು ಎಂದರು. ಗ್ರಾಪಂ ಉಪಾಧ್ಯಕ್ಷ ಕುಲ್ಲಚಂಡ ಚಿಣ್ಣಪ್ಪ, ಸದಸ್ಯ ಗುಮ್ಮಟ್ಟೀರ ದರ್ಶನ್, ತೀತಮಾಡ ಪೂವಣ್ಣ, ತೀತಿಮಾಡ ಸುಜಿ, ಕೊಕ್ಕಂಡ ರೋಶನ್, ಅಮಿತ್, ಚಂಗಪ್ಪ ಮಾತನಾಡಿದರು.

## ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಪಂದ್ಯಕ್ಕೆ ಕೊಡಗಿನ ದಿಯಾ ಭೀಮಯ್ಯ ಆಯ್ಕೆ



ಮಡಿಕೇರಿ,ಅ.19– ಇದೇ ತಿಂಗಳು 20ರಿಂದ 25ರವರೆಗೆ ತಮಿಳುನಾಡಿನ ಚೆನ್ನೈನಲ್ಲಿ ನಡೆಯುವ 36ನೇ ಸಬ್ ಜೂನಿಯರ್ ಯೋನೆಕ್ಸ್ ಸನ್‌ರೈಸ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಪಂದ್ಯಾಟಕ್ಕೆ ಕೊಡಗಿನ ಬೊಪ್ಪಂಡ ದಿಯಾ ಭೀಮಯ್ಯ ಆಯ್ಕೆಯಾಗಿದ್ದಾರೆ.

ರಾಜ್ಯದ ಪ್ರಥಮ ಶ್ರೇಯಾಂಕಿತ ಆಟಗಾರ್ತಿಯಾದ ದಿಯಾ ಅವರು 17 ವರ್ಷದೊಳಗಿನ ಸಿಂಗಲ್ಸ್, ಡಬಲ್ಸ್ ಹಾಗೂ ಮಿಶ್ರ ಡಬಲ್ಸ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ. ಇವರು ಮಿಶ್ರ ಡಬಲ್ಸ್‌ನಲ್ಲಿ ಮೈಸೂರಿನ ಅಮಿತ್ ರಾಜ್ ನಟರಾಜ್ ಮತ್ತು ಡಬಲ್ಸ್‌ನಲ್ಲಿ ತಮಿಳುನಾಡಿನ ವರ್ನಾಪಿ ಅವರೊಂದಿಗೆ ಜೋಡಿಯಾಗಿ ಆಡಲಿದ್ದಾರೆ. ಬೊಪ್ಪಂಡ ದಿಯಾ ಭೀಮಯ್ಯ ಮೈಸೂರಿನ ವಿದ್ಯಾಶ್ರಮ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಮೈಸೂರಿನ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಮೇದುರ ಅರುಣ್ ಪೆಮ್ಮಯ್ಯ ಹಾಗೂ ಬೊಪ್ಪಂಡ ಭೀಮಯ್ಯ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ. ಮಡಿಕೇರಿಯ ದೇಚೂರಿನ ಬೊಪ್ಪಂಡ ಕುಸುಮ ಹಾಗೂ ಭೀಮಯ್ಯ ಅವರ ಪುತ್ರಿಯಾಗಿದ್ದಾರೆ.

## ಟೆಂಪೋ ಟ್ರಾವಲರ್‌ಗೆ ಬೈಕ್ ಡಿಕ್ಕಿ: ಓರ್ವ ಸಾವು, ಮತ್ತೊಬ್ಬನಿಗೆ ಗಾಯ



ದ್ವಿಚಕ್ರ ವಾಹನ ಟೆಂಪೋ ಟ್ರಾವಲರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿರುವುದು.

ಮಡಿಕೇರಿ,ಅ.19– ಮದುವೆಗೆ ಬಂದು ಊರಿಗೆ ಹಿಂದಿರುಗುತ್ತಿದ್ದ ದ್ವಿಚಕ್ರ ವಾಹನವೊಂದು ಟೆಂಪೋ ಟ್ರಾವಲರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸಾವನ್ನಪ್ಪಿರುವ ಘಟನೆ ನಗರದ ಚೈನ್‌ಗೇಟ್ ಬಳಿ ನಡೆದಿದೆ.

ಭಾಗಮಂಡಲ ನಿವಾಸಿ ಗಜೇಶ್ವರ ಮತ್ತು ನಾಪೋಕ್ಲುವಿನ ಕಿಶೋರ್ ಮದುವೆ ನಿಮಿತ್ತ ಮಡಿಕೇರಿಗೆ ಆಗಮಿಸಿ ಚೈನ್‌ಗೇಟ್ ಮಾರ್ಗವಾಗಿ ತಮ್ಮ ಊರುಗಳಿಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಟೆಂಪೋ ಟ್ರಾವಲರ್ ವಾಹನದ ಮುಂಭಾಗಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿದೆ.

ಪರಿಣಾಮ ಇಬ್ಬರು ಸವಾರರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಗಜೇಶ್ವರ ಎಂಬವರನ್ನು ಮೈಸೂರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಸಂದರ್ಭ ಕುಶಾಲನಗರದ ಮಾರ್ಗದಲ್ಲಿ ಮೃತಪಟ್ಟಿದ್ದಾರೆ.

ಮತ್ತೋರ್ವ ಗಾಯಾಳು ಕಿಶೋರ್‌ನನ್ನು ಮಂಗಳೂರು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈ ರಸ್ತೆ ಅಪಘಾತದ ದೃಶ್ಯ ಅಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಪ್ರಕರಣದ ಕುರಿತು ಮಡಿಕೇರಿ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಫಿ ತೋಟದಲ್ಲಿ ಗಾಂಜಾ ಬೆಳೆದಿದ್ದ ಆರೋಪಿ ಸೆರೆ

ಮಡಿಕೇರಿ,ಅ.19– ಮನೆಯ ಸುತ್ತಲಿನ ಕಾಫಿ ತೋಟದಲ್ಲಿ ನಿಷೇಧಿತ ಗಾಂಜಾ ಗಿಡಗಳನ್ನು ಬೆಳೆಸಿದ್ದ ಆರೋಪಿಯನ್ನು ಮಾಲು ಸಹಿತ ಸೆರೆ ಹಿಡಿಯುವಲ್ಲಿ ಕೊಡಗು ಪೊಲೀಸರು ಯಶಸ್ವಿಯಾಗಿದ್ದಾರೆ.

ಎಮ್ಮೆಮಾಡು ಗ್ರಾಮ ನಿವಾಸಿ ಕನ್ನಡಿಯಂಡ ಮಹಮದ್ ಕೆ.ಎಂ.(43) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತ ಬೆಳೆಸಿದ್ದ 35 ಕೆ.ಜಿ. 675 ಗ್ರಾಂ ಹಸಿ ಗಾಂಜಾದ 42 ಗಿಡಗಳು ಹಾಗೂ 755 ಗ್ರಾಂ ಒಣಗಿಸಿದ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಎಮ್ಮೆಮಾಡು ಗ್ರಾಮದ ಮಾಂದಲ್ ಅಂಗನವಾಡಿ ಕೇಂದ್ರದ ಸಮೀಪದ ನಿವಾಸಿ ಮಹಮದ್ ಕೆ.ಎಂ ಎಂಬಾತ ಸುತ್ತಮುತ್ತಲಿನ ಕಾಫಿ ತೋಟದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿರುವ ಕುರಿತು ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಗಾಂಜಾ ಪ್ರಕರಣವನ್ನು ಭೇದಿಸಿದ ಪೊಲೀಸರ ಕಾರ್ಯಕ್ಕೆ ಎಸ್.ಪಿ. ರಾಮರಾಜನ್ ಅವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ ಎಂದು ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.



ಗಾಂಜಾ ಬೆಳೆದಿದ್ದ ಆರೋಪಿಯನ್ನು ಮಾಲು ಸಮೇತ ಸೆರೆ ಹಿಡಿದಿರುವ ಪೊಲೀಸರು.

## ನಾಳೆ ಪೊಲೀಸ್ ಹುತಾತ್ಮರ ದಿನಾಚರಣೆ

**ಮಡಿಕೇರಿ:** ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಅ.21 ರಂದು ಬೆಳಗ್ಗೆ 8.30 ಗಂಟೆಗೆ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆ ನಡೆಯಲಿದೆ. ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆರಾಮರಾಜನ್ ಇತರರು ಪಾಲ್ಗೊಳ್ಳಲಿದ್ದಾರೆ.

## ಬಾಳುಗೋಡು ಕಂಡಿಮಕ್ಕಿ ದೇವಾಲಯದ ಭಕ್ತರಿಗಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವೆ: ಸುಜಾ ಕುಶಾಲಪ್ಪ



ಬಾಳುಗೋಡು ಕಂಡಿಮಕ್ಕಿ ತ್ರಿಮೂರ್ತಿ ದೇವಾಲಯದ ನೂತನ ಕಾಂಕ್ರೀಟ್ ರಸ್ತೆಯನ್ನು ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಉದ್ಘಾಟಿಸಿದರು.

ವಿರಾಜಪೇಟೆ ಅ.19– ತಾಲೂಕಿನ ಬಾಳುಗೋಡು ಕಂಡಿಮಕ್ಕಿ ತ್ರಿಮೂರ್ತಿ ದೇವಾಲಯ ಅಪಾರ ಭಕ್ತರನ್ನು ಹೊಂದಿದ್ದು, ಅವರ ಅನುಕೂಲಕ್ಕಾಗಿ ಕುಡಿಯುವ ನೀರಿನ ಸೌಲಭ್ಯ ಕೂಡಲೇ ಒದಗಿಸುವುದಾಗಿ ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ತಿಳಿಸಿದರು.

ಸಮೀಪದ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಳುಗೋಡು ಕಂಡಿಮಕ್ಕಿ ತ್ರಿಮೂರ್ತಿ ದೇವಾಲಯದಲ್ಲಿ ಭಕ್ತರು ಭೋಜನಕ್ಕೆ ತೆರಳುವ ರಸ್ತೆ 5 ಲಕ್ಷ ರೂ. ಅನುದಾನದಲ್ಲಿ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಈ ದೇವಾಲಯಕ್ಕೆ 2 ಲಕ್ಷ ರೂ. ಅನುದಾನದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು.

ತನಗೂ ಈ ದೇವಾಲಯಕ್ಕೂ 33 ವರ್ಷಗಳ ಒಡನಾಟವಿದ್ದು, ಹೆಸರಾಂತ ದೇವಾಲಯವಾಗಿದೆ. ದೇವಾಲಯದ ಆಡಳಿತ ಮಂಡಳಿ ಹಾಗೂ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಬಿ.ಎಂ.ಗಣೇಶ್ ಅವರ ಕೋರಿಕೆಯಂತೆ ಭೋಜನಕ್ಕೆ ಹೋಗುವ ರಸ್ತೆ ತೀರಾ ದುಸ್ಥಿತಿಯಲ್ಲಿದ್ದ ಕಾರಣ ನೂತನ ಕಾಂಕ್ರೀಟ್ ರಸ್ತೆಗೆ ಅನುದಾನ ನೀಡಿದ್ದೇನೆ. ಹಾಗೂ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು 2 ಲಕ್ಷ ರೂ. ಅನುದಾನ ಒದಗಿಸುತ್ತಿರುವುದಾಗಿ ಹೇಳಿದರು.

ಈ ವೇಳೆ ದೇವಾಲಯ ಆಡಳಿತ ಮಂಡಳಿಯಿಂದ ವಿಧಾನಪರಿಷತ್ ಸದಸ್ಯ ಸುಜಾಕುಶಾಲಪ್ಪ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ಸಿ.ಕೆ.ಭೀಮಯ್ಯ, ಕಾರ್ಯದರ್ಶಿ ಸುರೇಂದ್ರ, ಉಪಾಧ್ಯಕ್ಷ ಅನಿಲ್ ಹಾಗೂ ಸದಸ್ಯರು ಮತ್ತು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಬಿ.ಎಂ. ಗಣೇಶ್, ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

## ಮಹದೇಶ್ವರಬೆಟ್ಟ ಪ್ರಾಧಿಕಾರದ ಬಸ್‌ನಲ್ಲೇ ಅಕ್ರಮ ಮದ್ಯ ಸಾಗಾಟ

### ಚಾಲಕ ಬಂಧನ

ಹನೂರು, ಅ.19– ಮಲೆ ಮಹದೇಶ್ವರಬೆಟ್ಟ ಪ್ರಾಧಿಕಾರದ ಬಸ್‌ನಲ್ಲೇ ಮದ್ಯ ಮಾರಾಟ ನಿಷೇಧವಿರುವ ಪುಣ್ಯಕ್ಷೇತ್ರ ಮಹದೇಶ್ವರಬೆಟ್ಟಕ್ಕೆ ಅಕ್ರಮವಾಗಿ ಮದ್ಯ ಸಾಗಾಟ ನಡೆಯುತ್ತಿರುವುದು ಬೆಳಕಿಗೆ ಬಂದಿದ್ದು, ಪ್ರಾಧಿಕಾರದ ಬಸ್ ಚಾಲಕನನ್ನು ಬಂಧಿಸಲಾಗಿದೆ.

ಪ್ರಾಧಿಕಾರದ ಬಸ್ ಚಾಲಕ ರಾಜು ಬಂಧಿತ ಆರೋಪಿಯಾಗಿದ್ದು, ಬಸ್‌ನಲ್ಲಿ ಶ್ರೀ ಕ್ಷೇತ್ರಕ್ಕೆ ಬೆಂಗಳೂರು, ಮೈಸೂರು, ಕೊಳ್ಳೇಗಾಲದಿಂದ ಭಕ್ತಾದಿಗಳನ್ನು ಕರೆತರುವ ಜೊತೆಗೆ ಅಕ್ರಮವಾಗಿ ಮದ್ಯವನ್ನೂ ಸಾಗಾಟ ಮಾಡುತ್ತಿದ್ದ ಎಂದು ಆರೋಪಿಸಲಾಗಿದೆ.

ಮಹದೇಶ್ವರ ಬೆಟ್ಟಕ್ಕೆ ಬಸ್‌ನಲ್ಲಿ ಅಕ್ರಮ ಮದ್ಯ ಸಾಗಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಮದ್ಯದ ಪೌಚುಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ, ಚಾಲಕನ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಪೊಲೀಸರು ಪ್ರಾಧಿಕಾರಕ್ಕೆ ಪತ್ರ ಬರೆದಿದ್ದಾರೆ. ದೀಪದ ಕೆಳಗೆ ಕತ್ತಲು ಎಂಬಂತೆ ಪ್ರಾಧಿಕಾರದ ಬಸ್‌ನಲ್ಲೇ ಮದ್ಯ ಸಾಗಾಟ ನಡೆಸಿರುವುದಕ್ಕೆ ಭಕ್ತಾದಿಗಳು ಆಕ್ರೋಶ ಹೊರಹಾಕಿದ್ದಾರೆ.


ಬಸ್ ಚಾಲಕನ ವಿರುದ್ಧ ಮಲೆ ಮಹದೇಶ್ವರಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ಮಾಹಿತಿ ಬಂದಿದೆ. ಆತನ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಮೂಲಕ ಕ್ರಮ ವಹಿಸಲಾಗುವುದು. ಜೊತೆಗೆ ಇಂತಹ ಪ್ರಕರಣಗಳಲ್ಲಿ ಪ್ರಾಧಿಕಾರದ ಯಾವುದೇ ಸಿಬ್ಬಂದಿ ಭಾಗಿಯಾದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ತಿಳಿಸಿದ್ದಾರೆ.

## ಅ.22, ವಿದ್ಯುತ್ ವ್ಯತ್ಯಯ

**ಚಾಮರಾಜನಗರ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗುಂಡ್ಲುಪೇಟೆ ಉಪವಿಭಾಗ, ಗುಂಡ್ಲುಪೇಟೆ ಶಾಖೆಯ 11 ಕೆವಿ ಎಫ್–9 ಗುಂಡ್ಲುಪೇಟೆ ಅರ್ಬನ್ ಫೀಡರ್ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಅಕ್ಟೋಬರ್ 22ರಂದು ಹಮ್ಮಿಕೊಂಡಿರುವುದರಿಂದ ಗುಂಡ್ಲುಪೇಟೆ ಅರ್ಬನ್ ಫೀಡರ್ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೀಪಾವಳಿ ಜಾತ್ರೆಗಾಗಿ ಮಹದೇಶ್ವರಬೆಟ್ಟಕ್ಕೆ ಸಾವಿರಾರು ಭಕ್ತರ ದಂಡು

- ಹತ್ತು ದಿನ ಮುನ್ನವೇ ಪಾದಯಾತ್ರೆ ಮೂಲಕ ಮಾದಪ್ಪನ ಸನ್ನಿಧಿಗೆ ಭಕ್ತರು
- ಅಡಿಪಾಲಾರ್‌ನಲ್ಲಿ ಭಕ್ತಿ-ಭಾವದ ಗಂಗಾ ಆರತಿ





ಅಡಿಪಾಲಾರ್ ಕಾವೇರಿ ನದಿ ದಡದಲ್ಲಿ ಸಾಲೂರು ಮಠದ ಶ್ರೀಗಳ ನೇತೃತ್ವದಲ್ಲಿ ಗಂಗಾ ಆರತಿ ಪೂಜೆ ನೆರವೇರಿತು. ಬಲಚಿತ್ರದಲ್ಲಿ ವಿವಿಧೆಡೆಯಿಂದ ಸಾವಿರಾರು ಭಕ್ತರು ಪಾದಯಾತ್ರೆ ಮೂಲಕ ಬೆಟ್ಟಕ್ಕೆ ತೆರಳುತ್ತಿರುವುದು.

ಚಾಮರಾಜನಗರ, ಅ.19– ದೀಪಾವಳಿ ಹಬ್ಬಕ್ಕೆ ಇನ್ನೂ 10 ದಿನ ಬಾಕಿ ಇರುವಂತೆ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮಹದೇಶ್ವರ ಬೆಟ್ಟಕ್ಕೆ ರಾಜ್ಯದ ವಿವಿಧೆಡೆಯಿಂದ ಸಾವಿರಾರು ಭಕ್ತರು ಪಾದಯಾತ್ರೆ ಮೂಲಕ ಬರುತ್ತಿದ್ದಾರೆ.

ಬೆಟ್ಟದಲ್ಲಿ ನಡೆಯುವ ದೀಪಾವಳಿ ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸಿ ಅಲ್ಲಿಯೇ ನಾಲ್ಕೈದು ದಿನ ವಾಸ್ತವ್ಯ ಹೂಡಿ, ವಿವಿಧ ಉತ್ಸವಗಳು ಹಾಗೂ ಪೂಜಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ದೇವರ ದರ್ಶನ ಪಡೆಯುವುದು ವಾಡಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಹೆಚ್ಚಿನ ಭಕ್ತರು ಬೆಟ್ಟಕ್ಕೆ ಭೇಟಿ ನೀಡುತ್ತಿದ್ದಾರೆ. ಅ.29 ರಂದು ಜಾತ್ರೆ ಆರಂಭವಾಗಲಿದ್ದು, 10 ದಿನ ಬಾಕಿ ಇರುವಾಗಲೇ ರಾಜ್ಯದ ವಿವಿಧೆಡೆಯಿಂದ ಆಗಮಿಸಿರುವ ಸಾವಿರಾರು ಭಕ್ತರು ತಂಡೋಪತಂಡವಾಗಿ ಪಾದಯಾತ್ರೆಯ ಮೂಲಕ ಕೊಳ್ಳೇಗಾಲ– ಹನೂರು ಮಾರ್ಗವಾಗಿ ಬೆಟ್ಟಕ್ಕೆ ತೆರಳುತ್ತಿದ್ದಾರೆ. ತಾಳಬೆಟ್ಟದಲ್ಲಿ ರಾತ್ರಿ ವಾಸ್ತವ್ಯ ಹೂಡಿದ ನಂತರ ಬೆಳಗ್ಗೆ ಮಹದೇಶ್ವರ ಬೆಟ್ಟಕ್ಕೆ ತಲುಪಲಿದ್ದಾರೆ.

ಜಿಲ್ಲೆಯಲ್ಲದೇ ರಾಜ್ಯದ ನಾನಾ ಮೂಲೆಗಳಿಂದ ಹಾಗೂ ತಮಿಳುನಾಡಿನಿಂದಲೂ ಇಲ್ಲಿಗೆ ಭಕ್ತರು ಭೇಟಿ ನೀಡುತ್ತಿದ್ದಾರೆ. ಈಗಾಗಲೇ ಕಾಲ್ನಡಿಗೆಯಲ್ಲಿ ಬೆಟ್ಟದ ಕಡೆಗೆ ಭಕ್ತರ ದಂಡು ಸಾಗಿದೆ. ಯುಗಾದಿ, ಶಿವರಾತ್ರಿ ಹಾಗೂ ದೀಪಾವಳಿ ಹಬ್ಬಗಳಿಗೆ ಬೆಟ್ಟದಲ್ಲಿ ವಿಶೇಷ ರಥೋತ್ಸವ ನಡೆಯಲಿದ್ದು, ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಅಲ್ಲದೇ, ಅಮಾವಾಸ್ಯೆ ಅಂಗವಾಗಿ ಪ್ರತಿ ತಿಂಗಳು ಇಲ್ಲಿ ವಿಶೇಷ ಪೂಜೆಗಳು ನಡೆಯಲಿದ್ದು, ಆ ಸಂದರ್ಭದಲ್ಲೂ ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ಈಗಾಗಲೇ ಭಕ್ತರ ವಾಸ್ತವ್ಯಕ್ಕಾಗಿ ದೇವಾಲಯದ ಕೊಠಡಿಗಳಲ್ಲದೇ ದೇವಾಲಯದ ಸುತ್ತಮುತ್ತ ವ್ಯವಸ್ಥೆ ಮಾಡಲಾಗುತ್ತಿದ್ದು, ಜಾತ್ರೆಗೆ ಪ್ರಾಧಿಕಾರದಿಂದ ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ.

**ಕಾವೇರಿ ನದಿಯಲ್ಲಿ ಗಂಗಾ ಆರತಿ:** ಬೆಟ್ಟದ ಗಡಿಭಾಗದ ಪಾಲಾರ್ ಕಾವೇರಿ ನದಿ ದಡದಲ್ಲಿ ಶನಿವಾರ ಸಾಲೂರು ಮಠದ ಶ್ರೀಗಳಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರ ನೇತೃತ್ವದಲ್ಲಿ ಗಂಗಾ ಆರತಿ ಪೂಜೆ ಸಾಂಪ್ರದಾಯಿಕವಾಗಿ ನೆರವೇರಿತು.

ಉತ್ತಮ ಮಳೆ–ಬೆಳೆಯಾಗುವುದರ ಮೂಲಕ ನಾಡು ಸಮೃದ್ಧಿಯಿಂದ ಕೂಡಿರಲಿ. ಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಕಾವೇರಿ ಮಾತೆ ಎಲ್ಲರನ್ನು ಕಾಪಾಡಲೆಂದು ಪ್ರತಿ ವರ್ಷ ತಮಿಳುನಾಡಿನ ವಿವಿಧ ಮಠದ ಸ್ವಾಮೀಜಿಗಳು, ಸಾಲೂರು ಬೃಹನ್ಮಠದ ಶ್ರೀಗಳು ಹಾಗೂ ಭಕ್ತರ ಸಮ್ಮುಖದಲ್ಲಿ ಅಡಿಪಾಲಾರ್ ಬಳಿಯ ಕಾವೇರಿ ಹಿನ್ನೀರಿನ ನದಿ ದಡದಲ್ಲಿ ಗಂಗಾ ಆರತಿ ಪೂಜೆ ನೆರವೇರಿಸಲಾಯಿತು.

**ಸಾಮರಸ್ಯದ ಪ್ರತೀಕ:** ನಾಡಿನ ಸಮೃದ್ಧಿಯ ದೃಷ್ಟಿಯಿಂದ ಪ್ರತಿ ವರ್ಷವೂ ಕಾವೇರಿ ಮಾತೆಗೆ ಕರ್ನಾಟಕ ಹಾಗೂ ತಮಿಳುನಾಡಿನ ಭಕ್ತರು ಗಂಗಾ ಆರತಿ ಪೂಜೆ ನೆರವೇರಿಸಿಕೊಂಡು ಬರುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಸಾಮರಸ್ಯ, ಸಹಬಾಳ್ವೆಯಿಂದ ಪರಸ್ಪರ ಉತ್ತಮ ಒಡನಾಟ ಹೊಂದುವ ಮೂಲಕ ಜೀವನ ನಡೆಸಲು ಗಂಗೆ ಪೂಜೆ ಸಹಕಾರಿಯಾಗಿದೆ.

## ತಂತ್ರಾಂಶದಲ್ಲಿ ಫಲಾನುಭವಿಗಳ ಜಾತಿ ಮ್ಯಾಪಿಂಗ್ ಮಾಡಲು ಆಹಾರ ಇಲಾಖೆ ಸೂಚನೆ

ಚಾಮರಾಜನಗರ,ಅ.19– ಆಹಾರ ತಂತ್ರಾಂಶದಲ್ಲಿ ಪಡಿತರ ಚೀಟಿ ಫಲಾನುಭವಿಗಳ ಜಾತಿಯ ಮ್ಯಾಪಿಂಗ್ ಮಾಡುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸೂಚಿಸಿದ್ದು, ಮಾಹಿತಿಯನ್ನು ನ್ಯಾಯಬೆಲೆ ಅಂಗಡಿ ಮುಂದೆ ಪ್ರದರ್ಶಿಸಲು ತಿಳಿಸಲಾಗಿದೆ.

ಚಾಮರಾಜನಗರ ತಾಲೂಕು 21,603, ಗುಂಡ್ಲುಪೇಟೆ ತಾಲೂಕು 10,753, ಕೊಳ್ಳೇಗಾಲ ತಾಲೂಕು 12,485, ಯಳಂದೂರು ತಾಲೂಕು 4,398 ಹಾಗೂ ಹನೂರು ತಾಲೂಕು 11,228 ಸೇರಿದಂತೆ ಒಟ್ಟು 60,467 ಫಲಾನುಭವಿಗಳ ಜಾತಿ ಪ್ರಮಾಣ ಪತ್ರವನ್ನು ಮ್ಯಾಪ್ ಮಾಡುವ ಕಾರ್ಯ ಬಾಕಿ ಉಳಿದಿದೆ.

ತಾಲೂಕಿನ ಎಲ್ಲಾ ಆಹಾರ ಶಿರಸ್ತೇದಾರ್, ಆಹಾರ ನಿರೀಕ್ಷಕರಿಂದ ನ್ಯಾಯಬೆಲೆ ಅಂಗಡಿ ವಿತರಕರಿಗೆ ಫಲಾನುಭವಿಗಳ ಪಟ್ಟಿಯನ್ನು ನೀಡಲಾಗಿದ್ದು, ಪಟ್ಟಿಯನ್ನು ನ್ಯಾಯಬೆಲೆ ಅಂಗಡಿ ಮುಂದೆ ಪ್ರದರ್ಶಿಸಲು ಹಾಗೂ ಪಟ್ಟಿಯಲ್ಲಿರುವ ಫಲಾನುಭವಿಗಳಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದು ನ್ಯಾಯಬೆಲೆ ಅಂಗಡಿ ಲಾಗಿನ್‌ನ ಇ–ಕೆವೈಸಿ ತಂತ್ರಾಂಶದಲ್ಲಿ ಜಾತಿ ಪ್ರಮಾಣದ ಆರ್‌ಡಿ ಸಂಖ್ಯೆಯನ್ನು ನಮೂದಿಸಿ ಅಪ್‌ಡೇಟ್ ಮಾಡುವಂತೆ ಈಗಾಗಲೇ ಎಲ್ಲಾ ನ್ಯಾಯಬೆಲೆ ಅಂಗಡಿ ವಿತರಕರಿಗೆ ಸೂಚಿಸಲಾಗಿರುತ್ತದೆ. ಜಾತಿ ಪ್ರಮಾಣ ಪತ್ರವನ್ನು ಮ್ಯಾಪಿಂಗ್ ಮಾಡಿಸದೇ ಇರುವ ಪಡಿತರ ಚೀಟಿಯಲ್ಲಿ ಇರುವ ಫಲಾನುಭವಿಗಳ ಪೈಕಿ ಯಾರಾದರೂ ಒಬ್ಬರ ಜಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗೆ ನೀಡಿ ತಕ್ಷಣವೇ ಜಾತಿ ಪ್ರಮಾಣ ಪತ್ರವನ್ನು ಮ್ಯಾಪಿಂಗ್ ಮಾಡಿಸುವಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಯೋಗಾನಂದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೆಳಿಗ್ಗೆ 7 ರಿಂದ ರಾತ್ರಿ 10 ಗಂಟೆಯವರೆಗೆ ಪಡಿತರ ವಿತರಣೆ

**ಚಾಮರಾಜನಗರ:** ಪಡಿತರ ವಿತರಣೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ನ್ಯಾಯಬೆಲೆ ಅಂಗಡಿಗಳಲ್ಲಿ ಕೆಎಸ್‌ಡಿಸಿ ಸರ್ವರ್ ಮೂಲಕ ಪಡಿತರ ವಿತರಣೆ ಮಾಡುವ ಕಾರ್ಯವನ್ನು ಈಗಾಗಲೇ ಆರಂಭಿಸಲಾಗಿದೆ. ಈ ಸಂಬಂಧ ಹಲವು ತಾಂತ್ರಿಕ ಸಮಸ್ಯೆಗಳು ಎದುರಾಗಿರುವ ಹಿನ್ನೆಲೆಯಲ್ಲಿ ಪಡಿತರ ಚೀಟಿದಾರರಿಗೆ ಪಡಿತರ ಪಡೆಯಲು ಅನುಕೂಲವಾಗುವಂತೆ 2024ರ ಅಕ್ಟೋಬರ್ ಮಾಹೆಯ ಅಂತ್ಯದವರೆಗೆ ಮಾತ್ರ ಪಡಿತರ ವಿತರಣೆಯನ್ನು ಬೆಳಗ್ಗೆ 7 ರಿಂದ ರಾತ್ರಿ 10 ಗಂಟೆಯವರೆಗೆ ಸಮಯ ನಿಗದಿಪಡಿಸಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಯೋಗಾನಂದ್ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಸಭೆ ಮುಂದೂಡಿಕೆ

**ಚಾಮರಾಜನಗರ:** ಸಂಸದ ಸುನಿಲ್ ಬೋಸ್ ಅಧ್ಯಕ್ಷತೆಯಲ್ಲಿ ಅ.21 ರಂದು ನಿಗದಿಯಾಗಿದ್ದ ಜಿಲ್ಲಾಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಕಾರಣಾಂತರಗಳಿಂದ ನ.4ರಂದು ಬೆಳಗ್ಗೆ 10.30 ಗಂಟೆಗೆ ಮುಂದೂಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸದ್ಗುರು ಮಹದೇವ ತಾತ ಸೌಹಾರ್ದ ಸಹಕಾರ ಸಂಘ ಉದ್ಘಾಟನೆ



ಚಾಮರಾಜನಗರದಲ್ಲಿ ಶ್ರೀ ಸದ್ಗುರು ಮಹದೇವ ತಾತ ಸೌಹಾರ್ದ ಸಹಕಾರ ಸಂಘದ ಉದ್ಘಾಟನೆ ಹಾಗೂ ಸಂಘದ ವಾರ್ಷಿಕ ಮಹಾಸಭೆ ನಡೆಯಿತು.

ಚಾಮರಾಜನಗರ, ಅ.19– ಸೌಹಾರ್ದ ಸಹಕಾರ ಸಂಘಗಳ ಮೂಲಕ ಆರ್ಥಿಕ ಪ್ರಗತಿ ಹೊಂದಿ, ಸಂಘಟನೆಯನ್ನು ಬಲಗೊಳಿಸಿ, ಮಾದರಿ ಸಂಘವನ್ನಾಗಿಸಲು ಎಲ್ಲರು ಶ್ರಮಿಸೋಣ ಎಂದು ಸದ್ಗುರು ಮಹಾದೇವ ತಾತ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ ಕರೆ ನೀಡಿದರು.

ನಗರದಲ್ಲಿ ಶ್ರೀ ಸದ್ಗುರು ಮಹದೇವ ತಾತ ಸೌಹಾರ್ದ ಸಹಕಾರ ಸಂಘದ ಉದ್ಘಾಟನೆ ಹಾಗೂ ಸಂಘದ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕು ವ್ಯಾಪ್ತಿಯನ್ನು ಒಳಗೊಂಡಂತೆ ಸೌಹಾರ್ದ ಸಂಘವನ್ನು ರಚನೆ ಮಾಡಿದ್ದು, ಸಂಘದ ಸದಸ್ಯರಿಗೆ ಸಾಲ ಸೌಲಭ್ಯವನ್ನು ಕಲ್ಪಿಸುವ ಜೊತೆಗೆ ಇತರೇ ಚಟುವಟಿಕೆಯಲ್ಲಿ ಸಂಘವನ್ನು ಸಕ್ರಿಯಗೊಳಿಸಿ, ಸಂಘದ ಮೂಲಕ ಸದಸ್ಯರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ನಮ್ಮದಾಗಿದೆ. ಈ ನಿಟ್ಟಿನಲ್ಲಿ ಆಡಳಿತ ಮಂಡಲಿಯ ನಿರ್ದೇಶಕರು, ಸಂಘದ ಸದಸ್ಯರ ಸಹಕಾರ ಅತ್ಯಗತ್ಯವಾಗಿದೆ. ಸಂಗಮದಲ್ಲಿರುವ ಶ್ರೀ ಸದ್ಗುರು ಮಹಾದೇವ ತಾತ ಅವರ ಹೆಸರಿನಲ್ಲಿ ಸ್ಥಾಪನೆ ಮಾಡಿರುವ ಸಂಘವು ನಿಸ್ವಾರ್ಥ ಸೇವೆಯನ್ನು ಸಲ್ಲಿಸುವ ಮೂಲಕ ಮಾದರಿ ಸಂಘವಾಗಿ ಬೆಳೆಯಲಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಭವಿಷ್ಯ ನಿಧಿ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಕಾ.ಶಿ.ಮಹೇಶ್, ಸೌಹಾರ್ದ ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ ಬಲರಾಮ್ ಮಾತನಾಡಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎನ್.ಚಂದ್ರಪ್ಪ, ನಿರ್ದೇಶಕರಾದ ಕೆ.ಬಿ.ನಂದೀಶ್, ಬಿ.ಮಹೇಂದ್ರ, ಎಂ.ಸಂಪತ್ತು, ರಾಜು, ಕೆ.ಮೇಘ, ಎಚ್.ಎಂ.ಶೀಲಾ, ಸಿದ್ದರಾಜಪ್ಪ ಎಸ್.ನಂಜುಂಡಸ್ವಾಮಿ, ಪುಷ್ಪಮಾಲ, ಪ್ರಭಾರ ಕಾರ್ಯದರ್ಶಿ ಬಿ. ಮಲ್ಲಿಕಾರ್ಜುನ್, ಪಿ.ಹೊನ್ನಹಳ್ಳಿ ವೃಷಬೇಂದ್ರಪ್ಪ, ಪ್ರವೀಣ್, ಮೂಡ್ಲಾಕೂಡು ನಾಗೇಂದ್ರ ಪಿ.ಬಸಪ್ಪ ಕೂಸಣ್ಣ, ಮೋಹನ್, ಯಾನಗಳ್ಳಿ ಮಹದೇವಸ್ವಾಮಿ, ಗೌಡಿಕೆ ನಾಗರಾಜಪ್ಪ ಮೊದಲಾದವರು ಇದ್ದರು.

## ಕಾಳನಹುಂಡಿ ಕೆರೆಯಲ್ಲಿ ಯುವಕನ ಶವ ಪತ್ತೆ

**ಚಾಮರಾಜನಗರ:** ತಾಲೂಕಿನ ಕಾಳನಹುಂಡಿ ಕೆರೆಯಲ್ಲಿ ಶುಕ್ರವಾರ ಯುವಕನ ಶವವೊಂದು ಪತ್ತೆಯಾಗಿದೆ. ಗ್ರಾಮದ ಗಣೇಶ(22) ಮೃತಪಟ್ಟ ಯುವಕ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ವಿಷಯ ತಿಳಿದು ಸ್ಥಳಕ್ಕೆ ಗ್ರಾಮಾಂತರ ಠಾಣೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಸಿಮ್ಸ್ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆಯನ್ನು ಕೈಗೊಂಡಿದ್ದಾರೆ.

■ ಆರ್.ಯಶಸ್
ಮೊ.6366287446


# ಅಂಟಾರ್ಟಿಕಾ 'ಅಪಾಯ'!

**ಸರಿಸುಮಾರು ನಲವತ್ತು ವರ್ಷಗಳಿಂದ ಅಂಟಾರ್ಟಿಕಾದಲ್ಲಿ ಹಿಮ ಕರಗುತ್ತಿದೆ. ಹಾಗೆಯೇ ಸಸ್ಯವರ್ಗವೂ ಹೆಚ್ಚಾಗಿ, ಜಾಗತಿಕ ತಾಪಮಾನ ಏರಿಕೆಯಾಗುತ್ತಿರುವುದು ಅತ್ಯಂತ ಅಪಾಯಕಾರಿ ಸಂಗತಿ**



ಇಡೀ ವಿಶ್ವದಲ್ಲಿ ಐದನೇ ದೊಡ್ಡ ಖಂಡವಾದ ವಿಸ್ಮಯಕಾರಿ ಅಂಟಾರ್ಟಿಕಾ, ಇಡೀ ದಕ್ಷಿಣ ಧ್ರುವವನ್ನಾವರಿಸಿದೆ. ಸರಿಸುಮಾರು 35 ಮಿಲಿಯನ್ ವರ್ಷಗಳ ಹಿಂದೆ ಈ ಖಂಡದಲ್ಲಿ ಬೃಹತ್ ಗಾತ್ರದ ಮಂಜುಗಡ್ಡೆಗಳು ನಿರ್ಮಾಣಗೊಳ್ಳಲು ಪ್ರಾರಂಭವಾದವು. ಹಲವಾರು ಖಂಡಗಳ ವಿಭಜನೆ, ಜೀವ ಸಂಕುಲವು ಬಿಸಿಲು ಇರುವ ಕಡೆಗಳಿಗೆ ವಲಸೆ ಹೋದ ಕಾರಣ ಹಾಗೂ ಖಂಡ ವಿಭಜನೆ ಪ್ರಕ್ರಿಯೆಯಲ್ಲಿ ಉಂಟಾದ ಹಲವು ಭೂಕಂಪಗಳಿಂದ ಅಂಟಾರ್ಟಿಕಾದಲ್ಲಿ ಹಿಮಪದರಗಳು ನಿರ್ಮಾಣಗೊಂಡವು. ಈ ಒಂದು ಪರಿವರ್ತನೆ 'ಕಾಂಟಿನೆಂಟಲ್ ಡ್ರಿಫ್ಟ್' (Continental Drift) ಎಂದು ಕರೆಯಲ್ಪಡುತ್ತದೆ. ಇದರ ಅನುಸಾರ, ಅಂಟಾರ್ಟಿಕಾ ಖಂಡಕ್ಕೆ ಹೊಂದಿಕೊಂಡಿದ್ದ ಭೂಮಿಯು ಬೇರ್ಪಟ್ಟು ದಕ್ಷಿಣ ಅಮೆರಿಕಾ ಹಾಗೂ ಟಾಸ್ಮೇನಿಯಾ ಖಂಡವಾಗಿ ರೂಪಾಂತರಗೊಂಡು ಉತ್ತರ ಧ್ರುವದೆಡೆಗೆ ಸೇರಿಕೊಂಡಿವೆ. ಇದಲ್ಲದೇ, ಈ ವಿಭಜನೆಯಿಂದ ದಕ್ಷಿಣ ಅಮೆರಿಕಾ ಹಾಗೂ ಅಂಟಾರ್ಟಿಕಾ ಖಂಡಗಳ ನಡುವೆ ಹೊಸದಾದ ಸಾಗರ ಪ್ರವಾಹವಾದ (ಓಷನ್ ಕರೆಂಟ್) 'ಡ್ರೇಕ್ ಪ್ಯಾಸೇಜ್' ಸೃಷ್ಟಿಯಾಗಿ, ಮತ್ತಿನ್ನಷ್ಟು ತಂಗಾಳಿ ಹಾಗೂ ಕಡಿಮೆ ಉಷ್ಣಾಂಶದ ನೀರು ಅಂಟಾರ್ಟಿಕಾ ಖಂಡದ ಸುತ್ತಲೂ ಆವರಿಸುವಂತೆ ಅನುವು ಮಾಡಿಕೊಟ್ಟ ಕಾರಣ, ಖಂಡದ ಮೇಲ್ಪದರದ ಮೇಲೆ ಹೆಚ್ಚು ಹಿಮ ಪದರಗಳು ನಿರ್ಮಾಣಗೊಂಡವು. ಆದರೆ, ಭೌಗೋಳಿಕ ತಾಪಮಾನವು ಕಳೆದ 16 ಮಿಲಿಯನ್ ವರ್ಷಗಳಿಗೆ ಹೋಲಿಸಿದರೆ ಇತ್ತೀಚೆಗೆ ಸಾಕಷ್ಟು ಹೆಚ್ಚುತ್ತಿರುವ ಕಾರಣ, ಅಂಟಾರ್ಟಿಕಾ ವಾತಾವರಣವು ಚಿಂತಾಜನಕ ಪರಿಸ್ಥಿತಿ ತಲುಪುತ್ತಿದೆ. ಆದ್ದರಿಂದ, ಭೂಗೋಳಶಾಸ್ತ್ರಜ್ಞರು ಯಾವುದೋ ಸಮಯದಲ್ಲಿ ಅಂಟಾರ್ಟಿಕಾದ ಮಂಜಿನ ಘನಪದರಗಳಲ್ಲಿ ಹೂತುಹೋಗಿದ್ದ ಹಸಿರು ಸಸ್ಯವರ್ಗವು ಮತ್ತೆ ಮೇಲ್ಮೈ ಪದರವನ್ನು ನಿಧಾನವಾಗಿ ಆವರಿಸುತ್ತಿದೆ ಎಂದು ಶಂಕಿಸುತ್ತಿದ್ದಾರೆ. ಅದರಂತೆಯೇ, ವಿಜ್ಞಾನಿಗಳು ಈಗಿನ ಅಂಟಾರ್ಟಿಕಾ ಖಂಡವು ಮುಂಚೆ ಉತ್ತರ ಕೆನಡಾದಂತೆ ಕೋನಿಫೆರಸ್ ಕಾಡು (ದಟ್ಟ ಹಿಮ ಪದರಗಳಲ್ಲಿ ಹಾಗೂ ಕಡಿಮೆ ತಾಪಮಾನಗಳನ್ನು ತಡೆಯುವ ಸಾಮರ್ಥ್ಯವುಳ್ಳ ಕಾಡು) ಇದ್ದವು ಎಂದು ಉಲ್ಲೇಖಿಸುತ್ತಾರೆ. ಜಾಗತಿಕ ತಾಪಮಾನ ಏರಿಕೆಯಿಂದ ಸಹಿಸಿಕೊಳ್ಳಲಾಗದ ವಾತಾವರಣವಾಗಿ ಬದಲಾವಣೆಗೊಂಡು, ಹಲವಾರು ಜೀವಿ ಸಂಕುಲಕ್ಕೆ ಕಂಟಕವಾಗಿ ಉಲ್ಬಣಗೊಂಡಿದೆ. ಬೃಹತ್ ಹಿಮಪದರಗಳು ಬಿರುಕು ಬಿದ್ದು ಸಾಗರ ಸೇರುತ್ತಿರುವ ಪರಿಣಾಮ ಸಮುದ್ರ ಮಟ್ಟವು ಆತಂಕಕಾರಿ ರೀತಿಯಲ್ಲಿ ಏರಿಕೆಯಾಗುತ್ತಿದೆ. ಉತ್ತರ ಧ್ರುವ ಪ್ರಾಂತ್ಯದಲ್ಲಿ ಸಂಶೋಧನೆ ನಡೆಸಿದಾಗ, ಹಿಮಪದರಗಳು ಮಾನವ ಕ್ರಿಯೆಗಳಿಂದ ಕರಗುತ್ತಿವೆ ಎಂಬ ಉತ್ತರ ಸಿಕ್ಕಿತ್ತು. ಆದರೆ ಈಗ ಇಂತಹ ವಾತಾವರಣವು ಅಂಟಾರ್ಟಿಕಾ ಖಂಡದಲ್ಲಿಯೂ ಕಾಣಿಸುತ್ತಿರುವುದು ಚಿಂತಾಜನಕವಾಗಿದೆ. ಸಸ್ಯವರ್ಗದ (ವೆಜಿಟೇಷನ್) ಪ್ರಮಾಣವು ಅಂಟಾರ್ಟಿಕಾ ಖಂಡದಲ್ಲಿ ಕಳೆದ ನಾಲ್ಕು ದಶಕಗಳಲ್ಲಿ ಹತ್ತು ಪಟ್ಟು ಹೆಚ್ಚಾಗಿರುವುದು ಕಂಡು ಬಂದಿದೆ. ವಿಪರೀತ ಉಷ್ಣಾಂಶದಿಂದ ಹಾಗೂ ಜಾಗತಿಕ ಸಮುದ್ರದ ಸರಾಸರಿ ಪ್ರಮಾಣದ (ಓಷನ್ ಲೆವೆಲ್ ಆ್ಯವರೇಜ್) ಹೆಚ್ಚಳದಿಂದ ಹಿಮಪದರಗಳು ಕರಗಿ, ಅತ್ಯಂತ ಥಂಡಿ ವಾತಾವಾರಣದಲ್ಲಿ ಸಸ್ಯಸಂಕುಲ, ಮುಖ್ಯವಾಗಿ ಹಸಿರು ಪಾಚಿಯು 2016ರಿಂದ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿದೆ ಎಂದು ಸಂಶೋಧನೆಗಳು ಹೇಳುತ್ತಿವೆ. ಎಕ್ಸೆಟರ್ ಮತ್ತು ಹರ್ಟ್‌ಫೋರ್ಡ್‌ಶಯರ್ ವಿಶ್ವವಿದ್ಯಾಲಯಗಳು ಹಾಗೂ ಬ್ರಿಟೀಷ್ ಅಂಟಾರ್ಟಿಕ್ ಸರ್ವೆಯು 2021ರಲ್ಲಿ ನಡೆಸಿದ ಸ್ಯಾಟಲೈಟ್ ಸಂಶೋಧನೆ ಪ್ರಕಾರ, 1986ರಲ್ಲಿ ಅಂಟಾರ್ಟಿಕಾದ ಪರ್ಯಾಯ ದ್ವೀಪ (ಪೆನಿನ್‌ಸುಲಾ)ದಲ್ಲಿ ಹಸಿರು ಪ್ರಮಾಣ ಕೇವಲ 1 ಚದರ ಕಿ.ಮೀ ಗಿಂತಲೂ ಕಡಿಮೆಯಿತ್ತು. ಆದರೆ ಅದು ಈಗ 12 ಚದರ ಕಿ.ಮೀ.ವರೆಗೂ ಹರಡಿದೆ ಎಂಬ ಮಾಹಿತಿ ಹೊರಬಿದ್ದಿದೆ. ಇದರಿಂದ ಹಸಿರು ಪ್ರಮಾಣವು ಏರಿಕೆಯಾಗುತ್ತಿದೆ ಎಂಬುದು ದೃಢವಾಗುತ್ತಿದೆ. 'ನೇಚರ್ ಜಿಯೋಸೈನ್ಸ್' ಜರ್ನಲ್‌ನಲ್ಲಿ ಪ್ರಕಟಗೊಂಡಿದ್ದ ಅಧ್ಯಯನ ಪತ್ರಿಕೆ 'Satellites evidence sustained greening of the Antarctic Peninsula' ಪ್ರಕಾರ, ಈ ಹಸಿರಾಗುವ ಪ್ರಕ್ರಿಯೆಯು 30%ರಷ್ಟು ಹೆಚ್ಚಳವಾಗಿದೆ (2016–2021ರ ಅವಧಿ) ಎಂದು ಹೇಳುತ್ತದೆ. ಇದರನ್ವಯ, ಈ ಹಸಿರು ಪ್ರಕ್ರಿಯೆಯು 1986–2021ರ ಅವಧಿಯಲ್ಲಿ 4,00,000 ಚದರ ಕಿ.ಮೀ ನಷ್ಟು ಹರಡಿದೆ ಎಂದು ಈ ವರದಿ ಹೇಳುತ್ತದೆ. ಮತ್ತೊಂದು ಸಂಶೋಧನೆಯಲ್ಲಿ ಪರ್ಯಾಯ ದ್ವೀಪದಿಂದ ತೆಗೆದುಕೊಂಡ ಮಾದರಿ (ಸ್ಯಾಂಪಲ್)ಗಳಲ್ಲಿ ಸಸ್ಯವರ್ಗದ ಉತ್ಪತ್ತಿ ಕೆಲ ದಶಕಗಳಿಂದ ಹೆಚ್ಚಳವಾಗಿರುವುದು ದೃಢೀಕರಿಸಿದೆ. 'ಅಂಟಾರ್ಟಿಕಾ ಪೆನಿನ್‌ಸುಲಾ (ಪರ್ಯಾಯ ದ್ವೀಪದಲ್ಲಿ)ದಲ್ಲಿ ದೊರೆತ ಸಸ್ಯವರ್ಗ ಮುಖ್ಯವಾಗಿ ಹಸಿರು ಪಾಚಿಯು ಭೂಮಿಯ ಅತ್ಯಂತ ಕಠಿಣ ವಾತಾವರಣಗಳಲ್ಲಿ ಬೆಳೆಯುವುದುಂಟು. ಈಗಲೂ ಹೆಚ್ಚಿನ ಭಾಗಗಳಲ್ಲಿ ಹಿಮ ಪದರವಿದ್ದು ಈ ಹಸಿರು ಬೆಳವಣಿಗೆ ಒಂದು ನಿರ್ದಿಷ್ಟ ಭಾಗದಲ್ಲಿ ಬೆಳೆದಿದೆ. ಆದರೆ ಇದೇ ಭಾಗವು ಹರಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ' ಎಂದು ಎಕ್ಸೆಟರ್ ವಿಶ್ವವಿದ್ಯಾಲಯದ ಡಾ. ಥಾಮಸ್ ರೋಲೆಂಡ್‌ರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಅಂಟಾರ್ಟಿಕಾದಲ್ಲಿ ಮಣ್ಣಿನ ಪ್ರಮಾಣ ಸಾಕಷ್ಟು ಕಡಿಮೆಯಿದ್ದು, ಈ ಹಸಿರಾಗುವಿಕೆಯಿಂದ ಮತ್ತಿನ್ನಷ್ಟು ಸಸ್ಯವರ್ಗ ಉತ್ಪತ್ತಿಯಾಗಿ, ಅಲ್ಲಿನ ಸ್ಥಳೀಯ ಜೀವಿಗಳಿಗೆ ಕಂಟಕವಾಗಿ ಮಾರ್ಪಾಡಾಗುವುದಲ್ಲದೇ, ಅಲ್ಲಿನ ಪರಿಸರವು ಹಾಳಾಗಬಹುದು' ಎಂದು ಹರ್ಟ್‌ಫೋರ್ಡ್‌ಶೈರ್ ವಿಶ್ವವಿದ್ಯಾಲಯದ ಡಾ. ಆಲಿ ಬಾರ್ಟ್ಲೆಟ್ ಹೇಳಿದ್ದಾರೆ.

**ಏರುತ್ತಿರುವ ಸಮುದ್ರ ಮಟ್ಟ:** ಅಂಟಾರ್ಟಿಕಾದ ಹಿಮಪದರವು ಕರಗುತ್ತಿರುವುದರಿಂದ ಸಮುದ್ರ ಮಟ್ಟವು ಏರಿಕೆಯಾಗುತ್ತಿರುವುದು ಅತ್ಯಂತ ಚಿಂತಾಜನಕ ಸ್ಥಿತಿಯಾಗಿದೆ. ಅಂಟಾರ್ಟಿಕಾದ ಹಿಮಪದರವು ಎಲ್ಲಾ ಒಮ್ಮೆಲೆ ಕರಗಿದಲ್ಲಿ ಸಮುದ್ರ ಮಟ್ಟವು 60 ಮೀಟರ್‌ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಪ್ರತಿ ವರ್ಷ ಖಂಡದಲ್ಲಿ ಸರಿಸುಮಾರು 150 ಬಿಲಿಯನ್ ಮೆಟ್ರಿಕ್ ಟನ್‌ನಷ್ಟು ಮಂಜುಗಡ್ಡೆ ಕರಗಿ ಸಾಗರ ಪಾಲಾಗುತ್ತಿದೆ. 2016ರ ಒಂದು ಅಧ್ಯಯನ (ನೇಚರ್ ಮೀಡಿಯಾ) ಪ್ರಕಾರ ಅಂಟಾರ್ಟಿಕಾ ಖಂಡವು ಸಮುದ್ರ ಮಟ್ಟ ಹೆಚ್ಚಳದ ಪ್ರಮಾಣಕ್ಕೆ ಒಂದು ಕಾಲು ಭಾಗದಷ್ಟು ಕಾರಣವಾದರೆ 2100ರೊಳಗೆ ಸಮುದ್ರ ಮಟ್ಟವು ಪ್ರತೀ ವರ್ಷ ಒಂದು ಮೀಟರ್‌ನಂತೆ ಹೆಚ್ಚಾಗಿ ಹಾಗೂ 2500ರೊಳಗೆ 15 ಮೀಟರ್‌ನಷ್ಟು ಹೆಚ್ಚಾಗಬಹುದು ಎಂದು ತಮ್ಮ ಸಂಶೋಧನೆಯಲ್ಲಿ ರುಜುಪಡಿಸಿದ್ದಾರೆ. 2021ರ ಮತ್ತೊಂದು ಅಧ್ಯಯನದ ಪ್ರಕಾರ ಮಾನವ ಬೆಳವಣಿಗೆಯು ಇದೇ ರೀತಿ ಮುನ್ನಡೆದರೆ 2060 ರೊಳಗೆ ಪ್ರಳಯ ಎದುರಿಸಬೇಕಾಗುತ್ತದೆ ಎಂದು ಹೇಳಲಾಗುತ್ತಿದೆ. ಇದರಿಂದ ಕಡಲಿನ ಪ್ರಾಂತ್ಯಗಳಲ್ಲಿರುವ ನಗರ–ರಾಷ್ಟ್ರಗಳಿಗೆ ವಿಪರೀತ ಪ್ರಮಾಣದಲ್ಲಿ ನೀರು ನುಗ್ಗಿ ಸಂಪೂರ್ಣ ಕಣ್ಮರೆಯಾಗುವುದುಂಟು.


ಇವುಗಳ ಜೊತೆಗೆ ಅಂಟಾರ್ಟಿಕಾದ ಜೀವ ಸಮೂಹಕ್ಕೂ ಅಪಾರ ಪ್ರಮಾಣದ ಹಾನಿಯಾಗಬಹುದು. ಅಲ್ಲಿ ವಾಸವಿರುವ ಜೀವಿಗಳಾದ, ಪೆಂಗ್ವಿನ್, ನೀರಾನೆಗಳು ಆಹಾರದ ಕೊರತೆಯಿಂದ ಅಪಾರ ಪ್ರಮಾಣದಲ್ಲಿ ವಲಸೆ ಹೋಗುತ್ತವೆ ಅಥವಾ ಅವುಗಳ ಸಂತತಿ ನಶಿಸಿಹೋಗಬಹುದು. 2021 ರಿಂದ ಅಂಟಾರ್ಟಿಕಾದಲ್ಲಿ ಹಿಮದ ಮಳೆಯ ಬದಲು ನೀರಿನ ಮಳೆಯು ಬೀಳುತ್ತಿರುವುದರಿಂದ ತಾಪಮಾನ ಏರಿಕೆಯ ಊಹೆಗೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಹಾಗಾಗಿ, ಈಗ ನಾವು ಮನುಷ್ಯರು ಬುದ್ಧಿಜೀವಿಯಂತೆ ನಡೆದು ನಮ್ಮ ಸ್ವಾರ್ಥಗಳನ್ನೆಲ್ಲಾ ಬದಿಗಿಟ್ಟು ನಮ್ಮ ಪ್ರಕೃತಿಯನ್ನು ಸಂರಕ್ಷಿಸುವುದರಲ್ಲಿ ಕೈ ಜೋಡಿಸಬೇಕಿದೆ.

### ಅಂಟಾರ್ಟಿಕಾ ಹಸಿರಾದಷ್ಟು ಆತಂಕ


- ಹಸಿರಾಗುವಿಕೆಯಿಂದ ಮತ್ತಷ್ಟು ಮಣ್ಣು ರಚನೆಯಾಗುವುದರಿಂದ ಸಸ್ಯವರ್ಗದ ಆಕ್ರಮಣಕಾರಿ ಪ್ರಭೇದಗಳು ಬೆಳೆದು ಸ್ಥಳೀಯ ವನ್ಯಜೀವಿಗಳಿಗೆ ಹಾನಿಯುಂಟಾಗಬಹುದು.
- ಗಾಢ ಬಣ್ಣದ ಸಸ್ಯಗಳು ಅತ್ಯಂತ ಹೆಚ್ಚು ಸೂರ್ಯನ ಕಿರಣ ಹೀರಿಕೊಳ್ಳುವುದರಿಂದ, ಕಿರಣಗಳನ್ನು ಪ್ರತಿಬಿಂಬಿಸುವ ಸಾಮರ್ಥ್ಯವನ್ನು ಅಂಟಾರ್ಟಿಕಾ ಕಳೆದುಕೊಳ್ಳಬಹುದು.
- ಸ್ಥಳೀಯ ಪರಿಸರ ವ್ಯವಸ್ಥೆಯಲ್ಲಿ ಬದಲಾವಣೆಯಾಗುವುದರಿಂದ, ಮಣ್ಣು ಸಂಯೋಜನೆ, ಇಂಗಾಲ ಚಕ್ರ, ಅಲ್ಲಿ ಜೀವಿಸುತ್ತಿರುವ ಪ್ರಾಣಿಗಳು ಹಾಗೂ ಆಹಾರ ಸರಪಳಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.

## ಮಕ್ಕಳ ಚಿತ್ರಕಥೆ: 'ಶಾಲಾ ಬಾಲಕ ಮತ್ತು ಬೆನ್ನು ಬಾಗಿದ ಅಜ್ಜ'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199


ಒಬ್ಬ ಶಾಲಾ ಬಾಲಕ, ಒಮ್ಮೆ ಒಂದು ವಿಶಾಲವಾದ ಬರಡು ಪ್ರದೇಶದಲ್ಲಿ ನಡೆದು ಹೋಗುತಿದ್ದ. ಅದು ಮರ,ಗಿಡಗಳಿಲ್ಲದ ನಿರ್ಜನ ಪ್ರದೇಶ.




ಯುವಕನಿಗೆ ವಿಶಾಲ ಮೈದಾನದಲ್ಲಿ ಕೆಲಸ ಮಾಡುತಿದ್ದ ಒಬ್ಬ ಮುದುಕ ಕಂಡ. ವಯಸ್ಸಾಗಿದ್ದರಿಂದ ಬೆನ್ನು ಬಾಗಿದ್ದ ಮುದುಕ,ಮಾವಿನ ಸಸಿಗಳನ್ನು ನೆಡುತಿದ್ದ.




ಬಾಲಕನು, "ಅಜ್ಜಾ..... ಈಗಾಗಲೇ ಮುದುಕನಾಗಿರುವ ನೀನು ನೆಡುತ್ತಿರುವ ಸಸಿ, ಮರವಾಗಿ ಹಣ್ಣು ಬಿಡುವುದು ಯಾವಾಗ...? ನೀನು ತಿನ್ನುವುದು ಯಾವಾಗ...?" ಎಂದು ಕೇಳಿದ.



ಮುದುಕ ನಸುನಗುತ್ತಾ ಹೇಳಿದ, "ನನ್ನ ತಾತ–ಮುತ್ತಾತರು ನೆಟ್ಟ ಮರಗಳ ಫಲ ತಿಂದೇ ಬದುಕಿದ ನಾನು ಈಗ ಸಸಿಗಳನ್ನು ನೆಡುತ್ತಿದ್ದೇನೆ. ನನ್ನ ಹೆಂಡತಿ ಮಕ್ಕಳು ಸತ್ತು ಎಷ್ಟೋ ವರ್ಷಗಳಾದವು. ನನ್ನ ಕೊನೆಯ ದಿನಗಳನ್ನು ಎಲ್ಲರಿಗೂ ಉಪಯೋಗವಾಗುವಂತಹ ಏನಾದರೂ ಕೆಲಸ ಮಾಡಬೇಕೆಂದು ತೀರ್ಮಾನಿಸಿ ಈ ಸಸಿಗಳನ್ನು ನೆಡುತ್ತಿದ್ದೇನೆ....!"



ಮುದುಕ ಮಾತು ಮುಂದುವರೆಸುತ್ತಾ, "ಯಾರಾದರೂ ತಿನ್ನಲಿ ಬಿಡು.... ಈ ಬರಡು ಪ್ರದೇಶ ಮುಂದೆ ಎಂದಾದರು ಸುಂದರ ತೋಟವಾಗಲಿ ಬಿಡು...!" ಎಂದು ಹೇಳಿ ತನ್ನ ಕೆಲಸ ಮುಂದುವರೆಸಿದ. ಬಾಲಕ ಆತನನ್ನೇ ಸ್ವಲ್ಪ ಹೊತ್ತು ನೋಡುತ್ತಾ ನಿಂತು "ಒಬ್ಬೊಬ್ಬರಿಗೆ ಒಂದೊಂದು ಹವ್ಯಾಸ...!" ಎಂದು ತನಗೆ ತಾನೆ ಹೇಳಿಕೊಳ್ಳುತ್ತಾ ಹೊರಟುಹೋದ.




ಇದಾದ ಸುಮಾರು ಮೂವತ್ತು ವರ್ಷಗಳ ನಂತರ ಆ ಬಾಲಕನಾಗಿದ್ದ ಯುವಕ, ಅಕಸ್ಮಿಕವಾಗಿ ಆ ಪ್ರದೇಶಕ್ಕೆ ಬಂದು ಆ ದೃಶ್ಯ ನೋಡಿ ಆತನ ಕಣ್ಣರಳಿಸುವಂತೆ ಮಾಡಿತು. ಹಿಂದಿದ್ದ ಬೆಂಗಾಡು ಪ್ರದೇಶ ಸುಂದರ ಮಾವಿನ ತೋಟವಾಗಿ ಮಾರ್ಪಟ್ಟಿತ್ತು. ಅಲ್ಲಿ ಹಕ್ಕಿಗಳ ಚಿಲಿಪಿಲಿ, ಹಣ್ಣಿನ ಸುವಾಸನೆ ಆ ಪ್ರದೇಶವನ್ನೆಲ್ಲಾ ವ್ಯಾಪಿಸಿತ್ತು. ಆದರೆ ಆಗ ಕಂಡಿದ್ದ ಬೆನ್ನು ಬಾಗಿದ ಮುದುಕ ಅಲ್ಲಿರಲಿಲ್ಲ. ಆತನ ನೆನಪನ್ನು ಹೂವು–ಹಣ್ಣುಗಳಿಂದ ತುಂಬಿದ್ದ ಮರ–ಗಿಡಗಳು ಸಾರುತ್ತಿದ್ದವು.



# ವಾರಭವಿಷ್ಯ

**20.10.2024 ರಿಂದ 26.10.2024**

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ತುಲಾ, ಚಂದ್ರ–ವೃಷಭ, ಮಿಥುನ, ಕಟಕ, ಕುಜ–ಮಿಥುನ, ಕಟಕ, ಬುಧ–ತುಲಾ, ಗುರು–ವೃಷಭ, ಶುಕ್ರ–ವೃಶ್ಚಿಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.




ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720


### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ಆಪ್ತೇಷ್ಟರ ಮಿಲನ, ಅತಿಥಿ ಅಭ್ಯಾಗತರ ಆಗಮನ, ಅವರ ಸತ್ಕಾರಕ್ಕೆ ಹಾಗೂ ಸಂತೋಷ ಕೂಟಗಳಿಗೆ ಧಾರಾಳ ಹಣ ವ್ಯಯ. ಉಚ್ಚಚಂದ್ರನ ಪ್ರಭಾವದಿಂದ ಮಾತೃಶ್ರೀಯವರ ಆಶೀರ್ವಾದ, ಸಹಾಯಹಸ್ತದಿಂದ ಆಸ್ತಿ ಗಳಿಕೆಗೆ ಮುನ್ನುಡಿ. ನ್ಯಾಯಾಲಯ ವ್ಯವಹಾರಗಳಲ್ಲಿ ಅನುಕೂಲ. ಹೋಟೆಲ್, ಕೆಟರಿಂಗ್ ಉದ್ಯಮಿಗಳಿಗೆ ಹೇರಳ ಧನಲಾಭ, ಮಾನಸಿಕ ಉತ್ಸಾಹ.
ಶ್ರೀ ಗಣೇಶ ಆರಾಧನೆ. ಶುಭ ಸಂಖ್ಯೆ–5

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಈ ವಾರ ಚಂದ್ರ ಬಲ, ತಾರಾಬಲ ಚೆನ್ನಾಗಿದೆ. ಅದೃಷ್ಟ ಒಲಿದು ಬರುವುದು. ದಂಪತಿಗಳ ವಾದ–ವಿವಾದದಲ್ಲಿ ಸೋತವರು ಗೆದ್ದಂತೆ. ಸಮಾಜದಲ್ಲಿ ಪ್ರತಿಷ್ಠಿತ ಸ್ತ್ರೀ ವ್ಯಕ್ತಿಯೊಬ್ಬರ ಭೇಟಿಯಿಂದ ಕಾರ್ಯಸಾಧನೆ. ನಿರುದ್ಯೋಗಿಗಳಿಗೆ ಸಂತಸದ ಸುದ್ದಿ ಬರುವುದು. ವಾರದ ಕಡೆಗೆ ದುಂದುವೆಚ್ಚಗಳಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಬರುವುದು. ದೂರ ಪ್ರಯಾಣಗಳು ಸಂಭವಿಸುವುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–8

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಮನಸ್ಸು ಪ್ರಫುಲ್ಲವಾಗಿರುವುದು. ಆಸ್ತಿ ವಿಚಾರಗಳಲ್ಲಿ ಗಣ್ಯ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಅನುಕೂಲ. ಬ್ಯೂಟಿ ಪಾರ್ಲರ್‌ನವರಿಗೆ ಉತ್ತಮ ಸಂಪರ್ಕಗಳಿಂದ ಉತ್ತಮ ಆದಾಯ. ನೆರೆಹೊರೆಯಲ್ಲಿ ಸೌಹಾರ್ದತೆ ದೃಢವಾಗುವುದು. ನಿಮ್ಮ ಮನೋಭಿಲಾಷೆ ಈಡೇರಲು ಮಾತೃಶ್ರೀಯವರ ಆಶೀರ್ವಾದ ಪಡೆಯಿರಿ. ಮುದ್ರಣ ಉದ್ಯಮಿಗಳಿಗೆ ಉತ್ತಮ ಆರ್ಡರ್‌ಗಳು ದೊರೆಯುವುದು.
ಶ್ರೀ ಸತ್ಯನಾರಾಯಣ ವ್ರತ ಕಥೆ ಓದಿ. ಶುಭ ಸಂಖ್ಯೆ–6

### ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ಗುರುಬಲವಿದೆ. ಆದರೆ ಅದರ ಸದುಪಯೋಗವಾಗಲು ಅಷ್ಟಮ ಶನಿದೇವನ ಅಡ್ಡಿ. ಭಾಗ್ಯ ಬಂದಾಗ ಕಣ್ಣುಮುಚ್ಚಿ ಕೂರುವ ಅಗತ್ಯವಿಲ್ಲ. ನಿಮ್ಮ ರಾಶಿ ಗುಣದಂತೆ ಕಾರ್ಯತತ್ಪರರಾಗಿ ವಿಜಯಿಗಳಾಗುವಿರಿ. ಉದ್ಯೋಗ ಸಂಬಂಧಿ ಸಂದರ್ಶನಗಳು ಸಫಲವಾಗಲಿದೆ. ಮಕ್ಕಳ ವಿದ್ಯಾಭ್ಯಾಸದ ಖರ್ಚುಗಳು ಹೆಚ್ಚುವುದು. ವಾರದ ಕಡೆಗೆ ಅಧಿಕ ಪ್ರಯಾಣಗಳಿಂದ, ಕೆಲಸದ ಒತ್ತಡದಿಂದ ದೇಹಾಯಾಸ.
ಶ್ರೀ ದುರ್ಗಾಪರಮೇಶ್ವರಿ ದರ್ಶನ. ಶುಭ ಸಂಖ್ಯೆ–3

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದಾರಂಭಕ್ಕೆ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಮುಂದೆ ಸಾಗದು. ಉದ್ಯೋಗಾಕಾಂಕ್ಷಿಗಳಿಗೆ ತಡವಾಗಿ ಫಲ ದೊರಕುವುದು. ವಾಹನ ರಿಪೇರಿ ಖರ್ಚುಗಳು ಹೆಚ್ಚಾಗುವುದು. ವಾರದ ಉತ್ತರಾರ್ಧದಲ್ಲಿ ವಿಶ್ವಾಸಪಾತ್ರ ವ್ಯಕ್ತಿಯಿಂದ ಮಹತ್ವದ ಯೋಜನೆಯ ಸಫಲತೆ. ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ವಾಯು ಪ್ರಕೋಪ ಕಾಡಬಹುದು.
ಶ್ರೀ ಆದಿತ್ಯ ಹೃದಯಪಠಿಸಿ. ಶುಭ ಸಂಖ್ಯೆ–1

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಈ ವಾರ ಆದಾಯ–ವೆಚ್ಚಗಳು ಸಮನಾಗಿರುತ್ತವೆ. ಆಪ್ತಮಿತ್ರರ ಮಿಲನದಿಂದ ಸಂತೋಷ. ನೂತನ ವಾಹನ ಹೊಂದುವ ಕನಸು ನನಸಾಗಲಿದೆ. ದೈವಿಕ ಸೇವೆಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ. ರಾಹು–ಕೇತು ಕರ್ತರಿಯೋಗ ಇರುವ ಕಾರಣ ಸಮಾಜದಲ್ಲಿ ನಿಮ್ಮ ಪ್ರತಿಷ್ಠೆಗೆ ಧಕ್ಕೆ ಉಂಟಾಗಬಹುದು. ವಾರದ ಕಡೆಗೆ ವ್ಯರ್ಥ ಖರ್ಚುಗಳು ಹೆಚ್ಚಾಗುತ್ತದೆ.
ಶ್ರೀ ವಿಷ್ಣುಪೂಜೆ. ಶುಭ ಸಂಖ್ಯೆ–4

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಗ್ರಹಗತಿಗಳು ಅಷ್ಟೊಂದು ಅನುಕೂಲವಿಲ್ಲದ ಕಾರಣ ವೃತ್ತಿಪರ ವ್ಯವಹಾರಗಳಲ್ಲಿ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ. ಸ್ನೇಹಿತರ ಜೊತೆ ಮಾತಿನ ಚಕಮಕಿಯಿಂದ ಮನಸ್ಸಿಗೆ ಕಸಿವಿಸಿ ಉಂಟಾಗುವುದು. ಪಾಲುದಾರಿಕೆ ವ್ಯವಹಾರಗಳನ್ನು ಮಾಡದಿರುವುದು ಒಳ್ಳೆಯದು. ವಾರದ ಕಡೆಗೆ ಸಮಾಜದ ಪ್ರಮುಖ ವ್ಯಕ್ತಿಗಳೊಂದಿಗೆ ಸಂಪರ್ಕ ನಿಮ್ಮ ಅಭಿವೃದ್ಧಿಗೆ ಪೂರಕವಾಗಿರುತ್ತದೆ.
ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ–7

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ಈ ಸಪ್ತಾಹದಲ್ಲಿ ಬೆಲೆ ಬಾಳುವ ವಸ್ತು, ವಾಹನ ಖರೀದಿಸುವ ಯೋಗವಿದೆ. ಸ್ಥಿರಾಸ್ತಿ ಒಪ್ಪಂದಗಳು ಅನುಕೂಲಕರವಾಗಿರುತ್ತದೆ. ಸ್ನೇಹಿತರ ಸಹಾಯ ಒದಗಿ ಬರುವುದು. ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನಸ್ಸಿಗೆ ಹರ್ಷ. ಮನೆ ಆಳುಗಳ ಬಗ್ಗೆ ಎಚ್ಚರದಿಂದಿರಿ, ಮೋಸ ಹೋಗುವ ಸಾಧ್ಯತೆ ಇರುತ್ತದೆ. ಧರ್ಮಕ್ಷೇತ್ರ ಸಂದರ್ಶನದಿಂದ ಸಪ್ತಾಹಕ್ಕೆ ತೆರೆ.
ಶ್ರೀ ಲಕ್ಷ್ಮೀನೃಸಿಂಹ ದರ್ಶನ. ಶುಭ ಸಂಖ್ಯೆ–3

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಸ್ಟೀಲ್, ಸಿಮೆಂಟು ವ್ಯಾಪಾರಿಗಳಿಗೆ ದೊಡ್ಡ ಮೊತ್ತದ ಆರ್ಡರ್ ದೊರೆಯುವುದು. ವೈಯಕ್ತಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದುವಿರಿ. ಸರ್ಕಾರಿ ನೌಕರರು ಅಡ್ಡದಾರಿ ಹಿಡಿದು ಸಂಕಷ್ಟಕ್ಕೆ ಗುರಿಯಾಗುವರು. ಯೋಚಿಸಿದ್ದೆಲ್ಲವನ್ನೂ ಮಾತನಾಡಬೇಡಿ. ಯೋಚಿಸಿ ಮಾತನಾಡಿ, ದುಡುಕಿನ ನಿರ್ಧಾರಗಳಿಂದ ನಷ್ಟವನ್ನು ಅನುಭವಿಸುವಿರಿ.
ಶ್ರೀ ಗುರುರಾಘವೇಂದ್ರ ಪ್ರಾರ್ಥನೆ. ಶುಭ ಸಂಖ್ಯೆ–2

### ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ಈ ವಾರದಲ್ಲಿ ಪಂಚಮ ಗುರು ಹಾಗೂ ಉಚ್ಚ ಚಂದ್ರನ ಸಮಾಗಮ ನಿಮ್ಮ ಜೀವನದಲ್ಲಿ ಉತ್ತಮ ಐಹಿಕ ಸುಖ ಭೋಗಗಳು ನಿಮ್ಮನ್ನು ಹುಡುಕಿಕೊಂಡು ಬರಲಿದೆ. ಪ್ರೇಮ, ಪ್ರಣಯ ಪ್ರಸಂಗಗಳಲ್ಲಿ ಸಂತಸದ ಹೊನಲು ಹರಿಯಲಿದೆ. ಇದು ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿಬಂದಿದೆ. ಮಕ್ಕಳ ಸಾಧನೆಯಿಂದ ಮನೆಯಲ್ಲಿ ಎಲ್ಲರಿಗೂ ಹರ್ಷ.
ಶ್ರೀಮನ್ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ–5

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ನೀವು ಹೊಸ ಉದ್ಯೋಗ ಕಂಡುಕೊಳ್ಳುವ ಸಾಧ್ಯತೆ ಇರುತ್ತದೆ. ಆರ್ಥಿಕ ಸ್ಥಿರತೆಯನ್ನು ಸಾಧಿಸಲು ದೈವ ಬಲ ಬೇಕೆಂದರೆ ಪುರುಷ ಪ್ರಯತ್ನವೂ ಬೇಕು. ನಿಮ್ಮ ಜೀವನ ಸಂಗಾತಿಯ ನಡುವೆ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಸಹನೆ ಹಾಗೂ ತಾಳ್ಮೆ ಇರಲಿ, ಏಕೆಂದರೆ ಶನಿ–ರಾಹು ಶುಭರಿಲ್ಲ. ಕೆಲವರ ತೆರೆಮರೆ ಕೆಲಸಗಳಿಂದ ನಿಮ್ಮ ತಲೆ ಬಿಸಿಯಾಗುವುದು.
ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–4

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ನಿಮ್ಮ ರಾಶ್ಯಾಧಿಪತಿಯು ಉಚ್ಚ ಚಂದ್ರನ ಸಹಯೋಗದಲ್ಲಿರುವ ಕಾರಣ ಹಿತೈಷಿಗಳ ಸಹಕಾರದಿಂದ ಮುಖ್ಯ ಕೆಲಸವೊಂದು ಸುಖಾಂತ್ಯಗೊಳ್ಳುವುದು. ಫ್ಯಾನ್ಸಿ ಹಾಗೂ ಗಿಫ್ಟ್ ಅಂಗಡಿಯವರಿಗೆ ಭರಪೂರ ವ್ಯಾಪಾರ. ಸಂದರ್ಭೋಚಿತ ಮಾತಿನಿಂದ ಕಾರ್ಯಾನುಕೂಲ. ಷೇರು ವ್ಯವಹಾರಗಳಲ್ಲಿ ಚತುರತೆಗಿಂತ ವಿಧಿಯಾಟವೇ ಮೇಲು. ಆತುರದ ಡ್ರೈವಿಂಗ್ ತೊಂದರೆಗೆ ಆಹ್ವಾನ ಕೊಟ್ಟಂತೆ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–9

# ಮಹಿಳೆಯರು ಸರ್ಕಾರಿ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ

## ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಸಲಹೆ



ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಶಾಸಕ ಡಿ.ರವಿಶಂಕರ್ ವಿತರಿಸಿದರು.

ಕೆ.ಆರ್.ನಗರ, ಅ.19– ರಾಜ್ಯ ಸರ್ಕಾರ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಹತ್ತು ಹಲವು ಕಾರ್ಯಕ್ರಮಗಳು ಮತ್ತು ತರಬೇತಿ ಶಿಬಿರಗಳನ್ನು ಹಮ್ಮಿಕೊಂಡಿದ್ದು, ಎಲ್ಲರೂ ಇದರ ಪ್ರಯೋಜನ ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಶಾಸಕ ಡಿ.ರವಿಶಂಕರ್ ಕರೆ ನೀಡಿದರು.

ಪಟ್ಟಣದ ತಾಪಂನ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಶನಿವಾರ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ದಿಂದ ಮಹಿಳೆಯರಿಗೆ ನೀಡಲಾದ ಉಚಿತ ಹೊಲಿಗೆ ಯಂತ್ರಗಳನ್ನು ವಿತರಿಸಿ ಮಾತ ನಾಡಿದ ಅವರು, ಸ್ವಯಂ ಉದ್ಯೋಗ ಕೈಗೊಂಡು ಉತ್ತಮ ಜೀವನ ನಡೆಸಲಿ ಎಂಬ ಸದಾಶಯ ದಿಂದ ನಮ್ಮ ಸರ್ಕಾರ ಇಂತಹ ಕಾರ್ಯಕ್ರಮ ಜಾರಿಗೆ ತಂದಿದೆ ಎಂದರು.

ದೇಶದ ಸಮಗ್ರ ಅಭಿವೃದ್ಧಿಗೆ ಮಹಿಳೆಯರು ಶೈಕ್ಷಣಿಕ ಮತ್ತು ಆರ್ಥಿಕವಾಗಿ ಮುಂಚೂಣಿಗೆ ಬರಬೇಕು. ಹಾಗಾಗಿ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಗೃಹಲಕ್ಷ್ಮಿ ಯೋಜನೆ ಮೂಲಕ ತಾಯಂದಿರಿಗೆ ಆರ್ಥಿಕ ಶಕ್ತಿ ತುಂಬುತ್ತಿದ್ದು ಇದು ಚರಿತ್ರಾರ್ಹ ಚಿಂತನೆ ಎಂದರು.

ಐದು ವರ್ಷವರೆಗೂ ಪಂಚ ಗ್ಯಾರಂಟಿ ಯೋಜನೆಗಳು ಅಭಾದಿತವಾಗಿರಲಿದ್ದು, ಮುಂದಿನ ಅವಧಿಗೂ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನಮ್ಮದೇ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿ ಬಿಪಿಎಲ್ ಕುಟುಂಬಕ್ಕೆ ಮಾಸಿಕ 4 ರಿಂದ 5 ಸಾವಿರ ರೂ. ಸಹಾಯ ಧನ ನೀಡುತ್ತಿದ್ದು, ಇದರಿಂದ ಅವರ ಬದುಕು ಹಸನಾಗಿದೆ. ಹಾಗಾಗಿ ಸದಾ ಬಡವರ ಪರ ಚಿಂತಿಸುವ ಮತ್ತು ಕಾರ್ಯಕ್ರಮ ರೂಪಿಸುವವರನ್ನು ಜನತೆ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದರು.

ಇದೇ ವೇಳೆ 35 ಮಂದಿ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಶಾಸಕರು ವಿತರಿಸಿದರು. ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಹೆಚ್.ಹೆಚ್.ನಾಗೇಂದ್ರ, ತಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ, ಡಿ.ದೇವರಾಜು ಅರಸು ಅಭಿವೃದ್ಧಿ ನಿಗಮದ ಸಹಾಯಕ ಅಧಿಕಾರಿ ಎನ್.ರಂಗಸ್ವಾಮಿ, ತಾಪಂ ಸಹಾಯಕ ವ್ಯವಸ್ಥಾಪಕ ಕರೀಗೌಡ ಮತ್ತಿತರರಿದ್ದರು.

# ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಮುಂದಾಗಿ

## ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್



ಮೈಸೂರಿನ ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಸಾರ್ವಜನಿಕರ ಸಮಸ್ಯೆ ಆಲಿಸಿದರು.

ಸರಗೂರು, ಅ.19– ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆ ಆಲಿಸಿ ಅವುಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ಮೈಸೂರಿನ ಲೋಕಾಯುಕ್ತ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಸಾರ್ವಜನಿಕರ ಕುಂದು, ಕೊರತೆ ದೂರು ಸ್ವೀಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಸೇವೆಗಾಗಿ ಇರುವ ಇಲಾಖಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ದೂರುಗಳನ್ನು ಶೀಘ್ರದಲ್ಲೇ ಪರಿಹರಿಸಲು ಕ್ರಮವಹಿಸಬೇಕು. ಕಚೇರಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಮೀನಾ ಮೇಷ ಎಣಿಸಿದರೆ ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ವಹಿಸಲಾಗುವುದು. ಇದಕ್ಕೆ ಆಸ್ಪದ ನೀಡದೆ ಸಾರ್ವಜನಿಕರ ಸೇವೆಗೆ ಅಣಿಯಾಗಿ ಎಂದು ಕಿವಿಮಾತು ಹೇಳಿದರು.

ಲೋಕಾಯುಕ್ತರಿಗೆ ಹೆಚ್ಚು ದೂರು ಸಲ್ಲಿಕೆಯಾದರೆ ತಾಲೂಕು ಆಡಳಿತಾಧಿಕಾರಿಗಳು ದೂರಿನ ಕಡೆಗೆ ಹೆಚ್ಚು ಒತ್ತು ನೀಡಿ ಜನಸಾಮಾನ್ಯರ ನೋವಿಗೆ ಸ್ಪಂದಿಸುವ ಕೆಲಸ ಮಾಡುವ ಮೂಲಕ ವೃತ್ತಿಗೌರವ ಕಾಪಾಡಿಕೊಳ್ಳಬೇಕು ಎಂದ ಅವರು ಮುಂದಿನ ಸಭೆಯಲ್ಲಿ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿ ಬಾಕಿ ಇರುವ ಅರ್ಜಿಗಳನ್ನು ತರಬೇಕು. ಅಧಿಕಾರಿಗಳು ತಪ್ಪದೇ ಅರ್ಜಿ ಸ್ವೀಕಾರ ಕಾರ್ಯಕ್ರಮಕ್ಕೆ ಹಾಜರಾಗಬೇಕು. ಅದರಲ್ಲೂ ಪಿಡಿಓಗಳು ತಪ್ಪದೇ ಹಾಜರಾಗಬೇಕು ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ಮನೆ ಮಂಜೂರು, ನಿವೇಶನ ಹಂಚಿಕೆ ವಿವಾದ, ಸಾಗುವಳಿ ಪತ್ರ ವಿತರಣೆ, ಜಮೀನು ಅಳತೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಾರ್ವಜನಿಕರಿಂದ 29 ಅರ್ಜಿಗಳು ಸಲ್ಲಿಕೆಯಾದವು.

ಈ ವೇಳೆ ತಹಸೀಲ್ದಾರ್ ರುಕಿಯಾ ಬೇಗಂ, ಲೋಕಾಯುಕ್ತ ಇನ್ಸ್‌ಪೆಕ್ಟರ್ ರೂಪಶ್ರೀ, ಸಿಬ್ಬಂದಿಗಳಾದ ವೀಣಾ, ಗೋಪಿ, ಮೋಹನ್ ಗೌಡ, ತ್ರಿವೇಣಿ, ಲೋಕೇಶ್ ರಾಜ್ ಅರಸ್, ನೇತ್ರಾವತಿ, ಪರಶು ರಾಮ್, ವಿವಿಧ ಇಲಾಖಾಧಿಕಾರಿಗಳು, ಸಾರ್ವಜನಿಕರು ಇತರರಿದ್ದರು.

### ಅ.28ಕ್ಕೆ ಚುನಾವಣೆ

ನಂಜನಗೂಡು, ಅ.19– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಹಾಗೂ ಯೋಜನಾ ಶಾಖೆಗಳ ನಿರ್ದೇಶಕರ ಚುನಾವಣೆ ಅ.28 ರಂದು ನಡೆಯಲಿದೆ ಎಂದು ಚುನಾವಣಾಧಿಕಾರಿ, ನಿವೃತ್ತ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅ.28 ರಂದು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಚುನಾವಣೆ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು ಎಂದು ತಿಳಿಸಿದ್ದಾರೆ.

## ಕೂಡ್ಲಾಪುರ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನಂಜನಗೂಡು, ಅ.19– ತಾಲೂಕಿನ ಕೂಡ್ಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ದೊರೆಸ್ವಾಮಿ, ಉಪಾಧ್ಯಕ್ಷರಾಗಿ ಸಿದ್ದನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 12 ಸದಸ್ಯ ಬಲದ ಡೈರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ದೊರೆಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದನಾಯಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಚುನಾವಣಾಧಿಕಾರಿ ಪ್ರಸಾದ್ ಅವಿರೋಧ ಆಯ್ಕೆ ಘೋಷಿಸಿದರು.

ನೂತನ ಅಧ್ಯಕ್ಷ ದೊರೆಸ್ವಾಮಿ ಮಾತನಾಡಿ, ಸರ್ಕಾರದಿಂದ ಸಹಕಾರ ಸಂಘಕ್ಕೆ ದೊರೆಯುವ ಎಲ್ಲಾ ಸವಲತ್ತುಗಳನ್ನು ಪ್ರತಿ ಸದಸ್ಯರಿಗೆ ಹಂಚಿಕೆ ಮಾಡುವುದಲ್ಲದೆ, ಗ್ರಾಮೀಣ ಭಾಗದಲ್ಲಿ ಪಶು ಸಂಗೋಪನೆ ಮಾಡುವಂತೆ ರೈತರ ಮನವೊಲಿಸಿ ಹಾಲು ಉತ್ಪಾದಕರ ಸಂಖ್ಯೆ ಹೆಚ್ಚಿಸಲು ಕ್ರಮ ವಹಿಸುತ್ತೇನೆ ಎಂದರು.

ಈ ವೇಳೆ ಮುಖಂಡರಾದ ಎಂ.ರಾಜು, ಸಂಘದ ಸದಸ್ಯರಾದ ಶ್ರೀನಿವಾಸ, ಜವರಶೆಟ್ಟಿ, ಗುರುಸಿದ್ದಪ್ಪ, ಲಕ್ಷ್ಮಣಶೆಟ್ಟಿ, ಮಾರಶೆಟ್ಟಿ, ಗೌರಮ್ಮ, ಸುಬ್ಬಣ್ಣ, ಮಹದೇವಯ್ಯ, ಸಿದ್ದನಾಯಕ, ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

# ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸಿಐಟಿಯು ಪ್ರತಿಭಟನೆ




ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸಿಐಟಿಯು ವತಿಯಿಂದ ಪ್ರತಿಭಟನೆ ನಡೆಯಿತು

ಹುಣಸೂರು, ಅ.19– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಷನ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಕಾರ್ಮಿಕರು ಕಾರ್ಮಿಕ ಇಲಾಖೆ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಕಾರ್ಮಿಕ ಅಧಿಕಾರಿಗೆ ಮನವಿ ಸಲ್ಲಿಸಿದರು.

ಸಿಐಟಿಯು ತಾಲೂಕು ಸಂಚಾಲಕ ವಿ.ಬಸವರಾಜು ಮಾತನಾಡಿ, ದೇಶ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಅಪಾರವಾಗಿದೆ. ಆದರೆ ಕಾರ್ಮಿಕರು ಅಪಾಯದ ಪರಿಸ್ಥಿತಿ ಹಾಗೂ ಸುರಕ್ಷತೆ ಇಲ್ಲದ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದರು.


ಮೋದಿ ನೇತೃತ್ವದ ಕೇಂದ್ರ ಸರ್ಕಾರ 29 ಕಾರ್ಮಿಕ ಕಾನೂನುಗಳನ್ನು 4 ಸಂಹಿತೆಗಳನ್ನು ಮಾರ್ಪಡಿಸಲು ಹೊರಟಿದೆ. ಅಲ್ಲದೇ 1996ರಲ್ಲಿ ಜಾರಿಗೊಳಿಸಲಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಾಯ್ದೆ ಹಾಗೂ ಸೆಕ್ಷನ್ ಕಾಯ್ದೆಗಳೆರಡರ ಮೇಲೆ ಅಪಾಯದ ಕರಿ ನೆರಳು ಬಿದ್ದಿರುವ ಹಿನ್ನೆಲೆಯಲ್ಲಿ ಕಟ್ಟಡ ನಿರ್ಮಾಣ ವಲಯ, ಕಾರ್ಮಿಕರ ಬದುಕು ಹಾಗೂ ಅವರು ಹಾಲಿ ಇರುವ 2 ಕಾನೂನುಗಳ ಅಡಿಯಲ್ಲಿ ರಚಿಸಲಾದ ಕಲ್ಯಾಣ ಮಂಡಳಿಗಳು ಹಾಗೂ ಅವುಗಳಡಿ ದೊರಕುತ್ತಿದ್ದ ಕಲ್ಯಾಣ ಸೌಲಭ್ಯಗಳನ್ನು ಸಂರಕ್ಷಿಕೊಳ್ಳಲು ನಿರ್ಮಾಣ ವಲಯದ ಕಾರ್ಮಿಕರು ದೇಶಾದ್ಯಾಂತ ಒಂದು ದಿನದ ಪ್ರತಿಭಟನೆ ನಡೆಸಲು ಕರೆ ನೀಡಿದೆ ಎಂದರು.

ಕಟ್ಟಡ ಕಾರ್ಮಿಕರ ಸಂಘದ ಶಿವರಾಮ್ ಮಾತನಾಡಿ, ಕರ್ನಾಟಕದಲ್ಲಿಯೂ ಶೈಕ್ಷಣಿಕ ಧನಸಹಾಯ ಕಡಿತ, ನೋಂದಣಿ, ನವೀಕರಣ ಸಮಸ್ಯೆಗಳು, ಪಿಂಚಣಿ ಇತ್ಯಾದಿಗಳನ್ನು ಬಗೆಹರಿಸಲು ನಾವು ಸಂಘಟಿತರಾಗಿ ಹಾಗೂ ಇತರೆ ಕಟ್ಟಡ ಕಾರ್ಮಿಕ ಸಂಘಗಳ ಜತೆಗೂಡಿ ನಿರಂತರವಾದ ಹೋರಾಟ ನಡೆಸುತ್ತಿದ್ದರೂ, ಕಲ್ಯಾಣ ಮಂಡಳಿ ಹಾಗೂ ಸರ್ಕಾರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತಿಲ್ಲ ಎಂದು ದೂರಿದರು.

ಶೈಕ್ಷಣಿಕ ಸಹಾಯಧನ ಕಡಿತ ಮಾಡಿರುವುದನ್ನು ಹೈಕೋರ್ಟ್ ಆದೇಶದಂತೆ ವಾಪಸ್ ಪಡೆಯಬೇಕು. 2021ರ ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ಬಿಡುಗಡೆ ಮಾಡಬೇಕು. 2022–23–24 ಸಾಲಿನ ಬಾಕಿ ಅರ್ಜಿಗಳಿಗೂ ಧನ ಸಹಾಯ ಪಾವತಿಸಬೇಕು. ನೈಜ ಕಾರ್ಮಿಕರ ನೋಂದಣಿ ಮತ್ತು ಮರು ನೋಂದಣಿ ಅರ್ಜಿಗಳನ್ನು ಸಕಾರಣವಿಲ್ಲದೇ ತಿರಸ್ಕರಿಸುವುದು ನಿಲ್ಲಬೇಕು ಹಾಗೂ ವಿಳಂಬ ಮಾಡದೇ ಕಾರ್ಡು ವಿತರಣೆ ಆಗಬೇಕು. ಸೌಲಭ್ಯಗಳಿಗಾಗಿ ಸಲ್ಲಿಸಿರುವ ಸಾವಿರಾರು ಅರ್ಜಿಗಳಗಳನ್ನು ಶೀಘ್ರ ವಿಲೇವಾರಿ ಮಾಡಬೇಕು. ಪಿಂಚಣಿದಾರರಿಗೆ ಅವರ ಪಿಂಚಣಿ ಹಣ ಬಿಡುಗಡೆ ಮಾಡಬೇಕು. ಪಿಂಚಣಿಗೆ ಅರ್ಜಿ ಸಲ್ಲಿಸುವಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳನ್ನು ನಿವಾರಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳ ಮನವಿಯನ್ನು ಕಾರ್ಮಿಕ ಅಧಿಕಾರಿಗೆ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ವೆಂಕಟೇಶ್, ಚೆಲುವರಾಜು, ಚಂದ್ರೇಗೌಡ ಮಹದೇವ ವೆಂಕಟೇಶ್, ನಟರಾಜು, ಶ್ರೀನಿವಾಸ, ರವಿನಾಯ್ಕ, ರೇವಣ್ಣನಾಯಕ ಇತರರಿದ್ದರು.

### ನಾಮ ನಿರ್ದೇಶಿತ ಸದಸ್ಯರ ನೇಮಕ



ಜಾರ್ಜ್ ಜೋಸೆಫ್ ಹಂಟ್ ಎನ್.ಎಸ್.ನಿರಂಜನ್ ಕೆ.ಎಸ್.ಕುಮಾರ ನಾಗಪ್ರಕಾಶ್ ಮಹಾವೀರ್ ಜೈನ್

ಹುಣಸೂರು, ಅ.19– ಇಲ್ಲಿನ ನಗರಸಭೆಗೆ ವಿವಿಧ ಸಮುದಾಯಗಳ ಐವರು ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ನಗರದ ಅಲ್ಪಸಂಖ್ಯಾತ ಸಮುದಾಯದ ಜಾರ್ಜ್ ಜೋಸೆಫ್ ಹಂಟ್, ಲಿಂಗಾಯತ ಸಮುದಾಯದ ಎನ್.ಎಸ್.ನಿರಂಜನ್, ವಿಶ್ವಕರ್ಮ ಸಮುದಾಯದ ಕೆ.ಎಸ್.ಕುಮಾರ, ಸಾಮಾನ್ಯ ವರ್ಗದಿಂದ ನಾಗಪ್ರಕಾಶ್ ಶೆಟ್ಟಿ ಹಾಗೂ ಜೈನ್ ಸಮಾಜದಿಂದ ಮಹಾವೀರ್ ಜೈನ್ ಅವರನ್ನು ನೇಮಕ ಮಾಡಲಾಗಿದ್ದು, ಇವರೆಲ್ಲರೂ ಇತ್ತೀಚೆಗೆ ನಡೆದ ಸಾಮಾನ್ಯಸಭೆಯಲ್ಲಿ ಅಧಿಕಾರ ವಹಿಸಿಕೊಂಡರು.

### ಮುಚ್ಚಿರುವ ವಾಣಿಜ್ಯ ಮಳಿಗೆಗಳ ಬಾಗಿಲು ತೆರೆಸಿ

# ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಿ

## ಶಾಸಕರಿಗೆ ಎಂಎಲ್‌ಸಿ ಹೆಚ್.ವಿಶ್ವನಾಥ್ ಒತ್ತಾಯ



ಸಭೆಯಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ಮಾತನಾಡಿದರು.

ಕೆ.ಆರ್.ನಗರ, ಅ.19– ಕಳೆದ 8 ತಿಂಗಳಿಂದ ಮುಚ್ಚಿರುವ ಪಟ್ಟಣದ ಪುರಸಭೆಯ ವಾಣಿಜ್ಯ ಮಳಿಗೆಗಳ ಬಾಗಿಲು ತೆರೆಸಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಲು ಶಾಸಕರು ಗಮನ ಹರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಒತ್ತಾಯಿಸಿದರು.

ಪಟ್ಟಣದ ವಿನಾಯಕ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ನಡೆದ ವಾಣಿಜ್ಯ ಮಳಿಗೆಗಳ ಬಾಡಿಗೆದಾರರ ಸಭೆಯಲ್ಲಿ ಮಾತನಾಡಿದ ಅವರು, ನಾನು ತಿಂಗಳ ಹಿಂದೆಯೇ ಈ ವಿಚಾರವನ್ನು ಶಾಸಕರ ಗಮನಕ್ಕೆ ತಂದು ಮಳಿಗೆಗಳ ಬಾಗಿಲು ತೆರೆಸುವುದಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದು, ಈಗಲೂ ಅದಕ್ಕೆ ಬದ್ಧನಾಗಿದ್ದೇನೆ ಎಂದರು.

70ಕ್ಕೂ ಅಧಿಕ ವಾಣಿಜ್ಯ ಮಳಿಗೆಗಳು ಹಲವು ತಿಂಗಳಿಂದ ಬಾಗಿಲು ಹಾಕಿದ್ದು, ಇದರಿಂದ ವ್ಯಾಪಾರಿಗಳು ಬೀದಿ ಪಾಲಾಗಿದ್ದಾರೆ. ಹೀಗಾಗಿ ಅವರ ಕುಟುಂಬ ನಿರ್ವಹಣೆಗೆ ತುಂಬಾ ತೊಂದರೆಯಾಗಿದ್ದು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಮತ್ತು ಶಾಸಕರು ಈ ಬಗ್ಗೆ ಆಲೋಚಿಸಿ ಬಡ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮಳಿಗೆಗಳು ಬಾಗಿಲು ಹಾಕಿದ ಪರಿಣಾಮ ವ್ಯಾಪಾರಿಗಳಿಗೆ ತೊಂದರೆಯಾಗಿರುವುದರ ಜೊತೆಗೆ ಪಟ್ಟಣದ ಆರ್ಥಿಕ ವ್ಯವಹಾರದ ಮೇಲೂ ತೀವ್ರ ಪರಿಣಾಮ ಬೀರುತ್ತಿದ್ದು, ಹರಾಜಿನಲ್ಲಿ ಭಾಗವಹಿಸಿರುವ ಎಲ್ಲಾ ಬಿಡ್ಡುದಾರರು ಮತ್ತು ಪ್ರಸ್ತುತ ಇರುವ ವ್ಯಾಪಾರಿಗಳನ್ನು ಒಂದೆಡೆ ಕೂರಿಸಿ ಪರಸ್ಪರ ಮಾತನಾಡಿ ಸೌಹಾರ್ದತೆಯಿಂದ ಸಮಸ್ಯೆ ಪರಿಹರಿಸುವ ಕೆಲಸವನ್ನು ಎಲ್ಲರೂ ಪಕ್ಷಾತೀತವಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂಬಂಧ ನಾನು ಮಳಿಗೆದಾರರ ಸಮಸ್ಯೆಯನ್ನು ಸಂಬಂಧಿತ ಇಲಾಖೆ ಸಚಿವರು ಮತ್ತು ಇತರರೊಂದಿಗೆ ಮಾತನಾಡಿ ಪರಿಹಾರ ಮಾರ್ಗ ಕಂಡು ಹಿಡಿಯಲು ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ವ್ಯಾಪಾರಿಗಳಿಗೆ ವಾಗ್ದಾನ ಕೊಟ್ಟರು. ಇದೇ ವೇಳೆ ಪಟ್ಟಣದ ಪುರಸಭೆ ವಾಣಿಜ್ಯ ಮಳಿಗೆಗಳ ವ್ಯಾಪಾರಿಗಳ ಸಂಘದ ಗೌರವಾಧ್ಯಕ್ಷರಾಗಿ ಆಯ್ಕೆಯಾದ ಹೆಚ್.ವಿಶ್ವನಾಥ್ ಅವರನ್ನು ಮಳಿಗೆಗಳ ಬಾಡಿಗೆದಾರರು ಅಭಿನಂದಿಸಿದರು.

ಈ ವೇಳೆ ವ್ಯಾಪಾರಿಗಳ ಸಂಘದ ಕಾಮಧೇನು ಧರ್ಮ, ಉಪಾಧ್ಯಕ್ಷ ಜಾವೀದ್ ಆಲಿ, ಕಾರ್ಯದರ್ಶಿ ಎಸ್.ಮಹದೇವು, ಖಜಾಂಚಿ ಧನುಷ್, ಪದಾಧಿಕಾರಿಗಳಾದ ಈ.ಗಂಗಾಧರ್, ಶಿವಾಜಿ ಗಣೇಶನ್, ವಿಜಯ್, ರಾಘು, ಮುರುಗೇಶ್, ಮಹೇಶ್, ಅಕ್ರಂ, ರವೀಂದ್ರ, ಇನಾಯತ್, ನವಾಜ್ ಮತ್ತಿತರರಿದ್ದರು.

## ಹೆಮ್ಮಿಗೆಯಲ್ಲಿ ವಾಲ್ಮೀಕಿ ಜಯಂತಿ ಆಚರಣೆ



ಹೆಮ್ಮಿಗೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ನಡೆಯಿತು

ತಿ.ನರಸೀಪುರ, ಅ.19– ಆದಿಕವಿ ಮಹರ್ಷಿ ವಾಲ್ಮೀಕಿ ಅವರ ರಾಮಾಯಣ ಮಹಾಕಾವ್ಯ ಸಹಬಾಳ್ವೆ ಸಹಕಾರ, ಸೋದರತ್ವದ ಬಾಂಧವ್ಯ ಸೇರಿದಂತೆ ಉತ್ತಮ ಸಂದೇಶವನ್ನು ಒಳಗೊಂಡಿದ್ದು, ಪ್ರತಿಯೊಬ್ಬರೂ ವಾಲ್ಮೀಕಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದು ಹೆಮ್ಮಿಗೆ ಗ್ರಾಪಂ ಉಪಾಧ್ಯಕ್ಷ ಸೋಮಣ್ಣ ತಿಳಿಸಿದರು.

ತಾಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸುತ್ತಿದ್ದು, ಆ ಮೂಲಕ ಅವರ ವಿಚಾರಧಾರೆಗಳನ್ನು ಯುವ ಪೀಳಿಗೆಗಳಿಗೆ ಮನವರಿಕೆ ಮಾಡಿಕೊಡಲಾಗುತ್ತದೆ ಎಂದು ತಿಳಿಸಿದರು.

ಇದಕ್ಕೂ ಮುನ್ನಾ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಬಳಿಕ ರಾಮ, ಲಕ್ಷ್ಮಣ, ಆಂಜನೇಯ, ಸೀತೆ ಹಾಗೂ ವಿವಿಧ ವೇಷ ಭೂಷಣ ಧರಿಸಿದ್ದ ವೇಷಧಾರಿಗಳು ಹಾಗೂ ಎತ್ತಿನಗಾಡಿ ಮೇಲೆ ಸ್ತಬ್ಧ ಚಿತ್ರಗಳನ್ನು ಗ್ರಾಮದ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಜಯಂತಿಯಲ್ಲಿ ಸದಸ್ಯರಾದ ಹೊನ್ನನಾಯಕ, ಪದ್ಮ ಸೋಮಣ್ಣ ಡಿ. ಮಹದೇವಯ್ಯ, ಕಾವ್ಯರಾಮು, ಗೌರಮ್ಮ ಚೌಡಯ್ಯ, ಮುಖಂಡ ಲಾಡ್ಜ್ ಗೋವಿಂದರಾಜು, ದೊಡ್ಡ ಯಜಮಾನ ಚಿನ್ನಸ್ವಾಮಿ, ಚಿಕ್ಕ ಯಜಮಾನ ನಂಜುಂಡ ನಾಯಕ, ಚಿಕ್ಕಹೊನ್ನಯ್ಯ, ರಾಜಣ್ಣ ಮುತ್ತಿ ಚೌಡಯ್ಯ, ಚಿಕ್ಕ ಚೌಡಯ್ಯ, ವರದರಾಜು, ಚಿಕ್ಕ ವೆಂಕಟಯ್ಯ ಹಾಜರಿದ್ದರು.

### ಲೋಕಸಭೆ ಟಿಕೆಟ್ ಕೊಡಿಸುವುದಾಗಿ 2 ಕೋಟಿ ಸುಲಿಗೆ

# ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸಹೋದರ, ಆತನ ಪುತ್ರನ ಬಂಧನ

ಬೆಂಗಳೂರು, ಅ.19(ಕೆಎಂಶಿ)– ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಹಿರಿಯ ಸಹೋದರ ಹಾಗೂ ಅವರ ಪುತ್ರನನ್ನು ಪೊಲೀಸರು ಬಂಧಿಸಿದ್ದಾರೆ.

ಲೋಕಸಭಾ ಚುನಾವಣೆಗೆ ಟಿಕೆಟ್ ಕೊಡಿಸುವುದಾಗಿ 2 ಕೋಟಿ ರೂ. ಸುಲಿಗೆ ನಡೆಸಿದ ಆರೋಪದಡಿ ದಾಖಲಾಗಿದ್ದ ಪ್ರಕರಣದ ಹಿನ್ನೆಲೆಯಲ್ಲಿ ಗೋಪಾಲ್ ಜೋಷಿ ಹಾಗೂ ಅವರ ಪುತ್ರ ಅಜಯ್ ಜೋಷಿ ಅವರನ್ನು ಮಹಾರಾಷ್ಟ್ರದ ಪುಣೆಯಲ್ಲಿ ಬಂಧಿಸಿ, ಕರೆತರಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಬ್ಬರನ್ನು ಬಂಧಿಸಿದ್ದು ಒಟ್ಟಾರೆ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ. ಈ ಪ್ರಕರಣಕ್ಕೂ ನಮಗೂ ಸಂಬಂಧ ಇಲ್ಲ ಎಂದು ಪ್ರಹ್ಲಾದ್ ಜೋಷಿ ಸ್ಪಷ್ಟಪಡಿಸಿರುವುದಲ್ಲದೆ, ಕಳೆದ ಮೂರು ದಶಕಗಳಿಂದ ನಮ್ಮ ಮತ್ತು ಅವರ ನಡುವೆ ಸಂಪರ್ಕವೇ ಇಲ್ಲ ಎಂದಿದ್ದಾರೆ. ಕೇಂದ್ರ ಸಚಿವರ ಕುಟುಂಬದ ವಿರುದ್ಧ ದೂರು ಬರುತ್ತಿದ್ದಂತೆ ಬಿಜೆಪಿ ವರಿಷ್ಠರು ಪ್ರಹ್ಲಾದ್ ಜೋಷಿ ಅವರಿಂದ ವಿವರಣೆ ಪಡೆದಿದ್ದಾರೆ.

# ಪುರಸಭಾ ಮುಖ್ಯಾಧಿಕಾರಿಯಿಂದ ಸರ್ವಾಧಿಕಾರಿ ಆಡಳಿತ

## ತಿ.ನರಸೀಪುರ ಪುರಸಭಾ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ ಆರೋಪ




ತಿ.ನರಸೀಪುರ ಪುರಸಭೆ

ತಿ.ನರಸೀಪುರ, ಅ.19– ಪಟ್ಟಣದ ಸಮಗ್ರ ಅಭಿವೃದ್ಧಿಗೆ ಸರ್ವ ಸದಸ್ಯರ ಸಹಕಾರ ಮುಖ್ಯ. ಆದರೆ ಪುರಸಭೆ ಮುಖ್ಯಾಧಿಕಾರಿ ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ ಎಂದು ಪುರಸಭೆ ಉಪಾಧ್ಯಕ್ಷೆ ಎಂ.ರಾಜೇಶ್ವರಿ ರಾಘವೇಂದ್ರ ಆರೋಪಿಸಿದರು.

ಪಟ್ಟಣದ ಪುರಸಭೆಯ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಅಭಿವೃದ್ಧಿ ಸಂಬಂಧ ತಮಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಬಿಡುಗಡೆಯಾದ ಅನುದಾನದ ಮಾಹಿತಿ ಮರೆಮಾಚಿ ಕಳಪೆ ಕಾಮಗಾರಿ ಮಾಡಿ ಹಣ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಹಾಗೂ ಇಂಜಿನಿಯರ್ ನಾಗರಾಜು ಅವರ ಮೇಲೆ ಗಂಭೀರ ಆರೋಪ ಮಾಡಿದರು.

ಪಟ್ಟಣ ಪುರಸಭೆ ಅಭಿವೃದ್ಧಿಗಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕೋಟ್ಯಾಂತರ ರೂ. ಅನುದಾನ ನೀಡಿದ್ದಾರೆ. ಆದರೆ ಇಲ್ಲಿನ ಮುಖ್ಯಾಧಿಕಾರಿ ಹಾಗೂ ಇಂಜಿನಿಯರ್ ಅವರ ಕರ್ತವ್ಯ ನಿರ್ಲಕ್ಷ್ಯ, ಉದಾಸೀನತೆಯಿಂದ ಯಾವುದೇ ಕೆಲಸಗಳು ಪ್ರಗತಿ ಕಾಣುತ್ತಿಲ್ಲ. ಹಾಗಾಗಿ ಅನುದಾನ ಬಿಡುಗಡೆಯಾಗಿದ್ದರೂ, ಸಮರ್ಪಕ ಕಾಮಗಾರಿ ನಡೆಸದಿರುವುದರಿಂದ ಪುರಸಭೆ ಅಧಿಕಾರಿಗಳ ಬಗ್ಗೆ ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದಾರೆ ಎಂದು ದೂರಿದರು.

ಜು.31ರಂದು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ 89 ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲಾ ಸದಸ್ಯರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ ಸದರಿ ಸಭೆಯನ್ನು ಅ.9ಕ್ಕೆ ಮುಂದೂಡಿದಾಗ 89 ವಿಷಯಗಳಿಗೆ ಬದಲಾಗಿ ಕೇವಲ 21 ವಿಷಯಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಉಳಿದ ವಿಷಯಗಳನ್ನು ಸಭಾ ಸೂಚಿಯಿಂದ ಕೈಬಿಟ್ಟ ಬಗ್ಗೆ ಯಾವುದೇ ವಿವರಣೆ ನೀಡಿಲ್ಲ ಎಂದು ದೂರಿದರು.

ಮಾಂಸ ಮಾರುಕಟ್ಟೆ ದುರಸ್ತಿ ಕಾರ್ಯಕ್ಕೆ 7.5 ಲಕ್ಷ ರೂ. ಖರ್ಚು ಮಾಡಿರುವ ಬಗ್ಗೆ ಬಿಲ್ ತಯಾರಿಸಿ ಹಣ ಸಹ ಡ್ರಾ ಮಾಡಿದ್ದಾರೆ. ಮತ್ತೆ ಅದೇ ಮಾಂಸ ಮಾರುಕಟ್ಟೆ ಸ್ಥಳ ನವೀಕರಣಗೊಳಿಸುವ ಸಂಬಂಧ ಟೆಂಡರ್ ಕರೆಯುವುದಾಗಿ ಹೇಳಿ ನನ್ನನ್ನು ದಿಕ್ಕು ತಪ್ಪಿಸಿದ್ದಾರೆ. ಮುಖ್ಯಮಂತ್ರಿಗಳ ಮತಕ್ಷೇತ್ರ ವ್ಯಾಪ್ತಿಯ ಹೆಳವರಹುಂಡಿಯಿಂದ ಹಳೇ ತಿರುಮಕೂಡಲಿನ ವೃತ್ತದವರೆಗೆ 2 ಕಿಮೀ ವ್ಯಾಪ್ತಿಯ ಪಟ್ಟಣದ ಪ್ರಮುಖ ಜೋಡಿ ರಸ್ತೆಯಲ್ಲಿ ಪ್ರಮುಖ ಆಡಳಿತ ವ್ಯವಸ್ಥೆ ಕಚೇರಿಗಳಿದ್ದು, 2 ವರ್ಷಗಳಿಂದ ಬೀದಿ ದೀಪಗಳಿಲ್ಲದೇ ಕಗ್ಗತ್ತಲೆಯಲ್ಲಿ ಜನ ಸಂಚರಿಸುವಂತಾಗಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಾರ್ವಜನಿಕ ಸ್ಮಶಾನ ಅಭಿವೃದ್ಧಿಗೆ 15,15,000 ರೂ. ಹಾಗೂ 7,84,618 ರೂ. ಅನುದಾನ 2 ಕಂತಿನಲ್ಲಿ ಬಿಡುಗಡೆಯಾಗಿದೆ. ಆದರೆ ಕಾಮಗಾರಿ ಸಮರ್ಪಕವಾಗಿ ಮಾಡದೇ ಸ್ಮಶಾನ ಅಭಿವೃದ್ಧಿಯಲ್ಲೂ ಅವ್ಯವಹಾರ ಮಾಡಲಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ಕೆಲವು ಖಾಸಗಿ ಬಡಾವಣೆಗಳು ನಿಯಮ ಬಾಹಿರವಾಗಿ ತಲೆ ಎತ್ತಿ ಜನಸಾಮಾನ್ಯರನ್ನು ವಂಚಿಸುತ್ತಿದ್ದರೂ, ಮುಖ್ಯಾಧಿಕಾರಿಗಳು ಖಾಸಗಿ ಬಡಾವಣೆಗಳ ನಿಯಂತ್ರಣಕ್ಕೆ ಮುಂದಾಗದೇ ಅಕ್ರಮಗಳಿಗೆ ಉತ್ತೇಜನ ನೀಡುತ್ತಿದ್ದಾರೆ ಎಂದು ಆರೋಪಿಸಿದರು.


ಮುಖ್ಯಾಧಿಕಾರಿ ವಸಂತಕುಮಾರಿ ವಿರುದ್ಧ ತುರ್ತು ಕ್ರಮ ಕೈಗೊಂಡು ಪಟ್ಟಣ ದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಮುಖ್ಯಮಂತ್ರಿಗಳು ಹಾಗೂ ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ ಪಟ್ಟಣದ ಅಭಿವೃದ್ಧಿಗೆ ದಕ್ಷ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಮನವಿ ಮಾಡಿದರು.

2022–23ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆಯಡಿ ಪಟ್ಟಣದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ 5 ಕೋಟಿ ಅನುದಾನ ಮಂಜೂರಾಗಿ ಟೆಂಡರ್ ಕರೆದು ಕೆಲಸ ಪ್ರಾರಂಭಿಸಲಾಗಿತ್ತು. ಸದರಿ ಕೆಲಸ ಪೂರ್ಣಗೊಳಿಸದ ಗುತ್ತಿಗೆದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ಕಪ್ಪು ಪಟ್ಟಿಗೆ ಸೇರಿಸಬೇಕಿದ್ದ ಮುಖ್ಯಾಧಿಕಾರಿ ಉದ್ದೇಶಪೂರ್ವಕವಾಗಿ ಮರೆಮಾಚಿ ಮತ್ತೆ ಅದೇ ರಸ್ತೆಗಳಿಗೆ ಎಸ್‌ಎಫ್‌ಸಿ ಯೋಜನೆಯಡಿ ಕೋಟ್ಯಾಂತರ ರೂ. ಮಂಜೂರು ಮಾಡಿಸಿ ಒಂದೇ ಸ್ಥಳಕ್ಕೆ 2 ಯೋಜನೆ ಅಡಿ ಕಾಮಗಾರಿ ನಡೆಸಿದಂತೆ ಬಿಲ್ ತಯಾರಿಸಿ ಸರ್ಕಾರಕ್ಕೆ ವಂಚಿಸಿ ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ.




- ಎಂ.ರಾಜೇಶ್ವರಿ ರಾಘವೇಂದ್ರ, ಪುರಸಭೆ ಉಪಾಧ್ಯಕ್ಷೆ.

### ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿಗೆ ಸನ್ಮಾನ



ತಿ.ನರಸೀಪುರದ ಹೌಸಿಂಗ್ ಬೋರ್ಡ್‌ನಲ್ಲಿರುವ ಹಲಸಳ್ಳಿ ಮಹದೇವಸ್ವಾಮಿ ಅವರ ನಿವಾಸದಲ್ಲಿ ಆಗಮ ಶಾಸ್ತ್ರದಲ್ಲಿ ಪಿಹೆಚ್‌ಡಿ ಪಡೆದ ಮಹದೇಶ್ವರಬೆಟ್ಟದ ಸಾಲೂರು ಮಠದ ಪೀಠಾಧಿಪತಿ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಕನಕಪುರ ದೇಗುಲ ಮಠದ ಚನ್ನಬಸವಶ್ರೀಗಳು ಸನ್ಮಾನಿಸಿದರು. ಈ ವೇಳೆ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಹಲಸಹಳ್ಳಿ ಮಹದೇವಸ್ವಾಮಿ, ಕೆಬ್ಬೆಹುಂಡಿ ಶಿವಕುಮಾರ್, ಕೇಬಲ್ ರಾಜಶೇಖರ್, ಮಹದೇಶ್ವರ ಕಾಂಪ್ಲೆಕ್ಸ್ ಎನ್.ಎಲ್.ನಮಿತ್ ರಾಜ್, ಸಲೀಂ ನಂಜಪ್ಪ, ನಿಲಸೋಗೆ ಮಹಾದೇವಪ್ರಸಾದ್, ಆಡಿಟರ್ ಮಂಜುನಾಥ್ ಇನ್ನಿತರರಿದ್ದರು.

### ಡಿ.ಎಸ್.ರವಿ ನಿಧನ



ಕೆ.ಆರ್.ನಗರ, ಅ.19– ತಾಲೂಕಿನ ಹೊಸ ಅಗ್ರಹಾರ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯ ನಿರ್ವಹಣಾಧಿಕಾರಿ ಡಿ.ಎಸ್.ರವಿ(53) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ದೆಗ್ಗನಹಳ್ಳಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ



# ಶಾಸ್ತ್ರೀಯ ಸ್ಥಾನಮಾನ ಸಿಕ್ಕರೂ ಕನ್ನಡಕ್ಕೆ ನಿರೀಕ್ಷಿತ ಫಲ ದಕ್ಕಿಲ್ಲ

## 'ಕರ್ನಾಟಕ ಸುವರ್ಣ ಕರ್ನಾಟಕ-50 ಸಂಭ್ರಮಾಚರಣೆ' ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ವಿಷಾದ

ಮೈಸೂರು, ಅ.19(ಎಂಟಿವೈ)-ಶಾಸ್ತ್ರೀಯ ಸ್ಥಾನಮಾನ ದೊರೆತಿದ್ದರೂ, ಕನ್ನಡ ಭಾಷೆಗೆ ನಿರೀಕ್ಷಿತ ಪ್ರಮಾಣದಲ್ಲಿ ಪ್ರಯೋಜನವಾಗಿಲ್ಲ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಯುವರಾಜ ಕಾಲೇಜಿನ ಕನ್ನಡ ವಿಭಾಗವು ಅಮೃತ ಮಹೋತ್ಸವ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಕರ್ನಾಟಕ ಸುವರ್ಣ ಕರ್ನಾಟಕ-50 ಸಂಭ್ರಮಾಚರಣೆ' ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದ್ದರೂ, ಅದರಿಂದ ಯಾವ ಪ್ರಮಾಣದಲ್ಲಿ ಪ್ರಯೋಜನ ಆಗಬೇಕಿತ್ತೋ ಅದು ಆಗಿಲ್ಲ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬಗ್ಗೆ ಗಮನಹರಿಸಬೇಕು. ಭಾಷೆಗೆ ಸಿಕ್ಕಿರುವ ಶಾಸ್ತ್ರೀಯ ಸ್ಥಾನಮಾನದ ಸದುಪಯೋಗ ಮಾಡಿಕೊಳ್ಳುವುದರೊಂದಿಗೆ ಕೇಂದ್ರದಿಂದ ಅನುದಾನ ಪಡೆದು, ವಿದ್ವಾಂಸರಿಗೆ ಉದ್ಯೋಗ ನೀಡಿ, ಮಹತ್ವದ ಗ್ರಂಥಗಳು ಪ್ರಕಟ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ತಮಿಳು, ತೆಲುಗು ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಅಲ್ಲಿ ಭಾಷಾ ಬೆಳವಣಿಗೆಗೆ ಕೇಂದ್ರದಿಂದ ದೊರೆಯುವ ಅನುದಾನದ ಸದುಪಯೋಗವಾಗುತ್ತಿದೆ. ನಮ್ಮ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಿ ಅನುದಾನ ಪಡೆಯಬೇಕು. ತ್ರಿಭಾಷಾ ಸೂತ್ರ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಬಲವಂತವಾಗಿ ಹಿಂದಿ ಹೇರಬಾರದು. ಕೆಲವೊಂದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕನ್ನಡಕ್ಕೆ ಸರಿಯಾದ ಪ್ರಾಮುಖ್ಯತೆ ನೀಡುತ್ತಿಲ್ಲ. ಹಿಂದಿ ಹಾಗೂ ಇಂಗ್ಲಿಷ್ ಬಳಕೆಯಾಗುತ್ತಿದೆ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಆದ್ದರಿಂದ ಎಲ್ಲೆಡೆ ಕನ್ನಡ ಬಳಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

**ಅಂದು-ಇಂದು ಮೈಸೂರಿನವರೇ ಸಿಎಂ:** ವಿವಿಧೆಡೆ ಚದುರಿ ಹೋಗಿದ್ದ ಕನ್ನಡಿಗರನ್ನು ಭಾಷಾವಾರು ಪ್ರಾಂತ್ಯ ರಚನೆ ಮೂಲಕ ಒಂದುಗೂಡಿಸಲಾಯಿತು. ಅದಕ್ಕೆ ಮೈಸೂರು ರಾಜ್ಯ ಎಂದು ಹೆಸರಿಸಲಾಯಿತು. ಇದು ಇಡೀ ಕನ್ನಡನಾಡು ಹಾಗೂ ಕನ್ನಡಿಗರನ್ನು ಧ್ವನಿಸುವುದಿಲ್ಲ ಎಂಬ ಕಾರಣಕ್ಕಾಗಿ ಕರ್ನಾಟಕ ಎಂದು ಹೆಸರಿಸಬೇಕು ಎಂಬ ಚರ್ಚೆ ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿಯೇ ಆರಂಭವಾಯಿತು. ಅಂತಿಮವಾಗಿ ಡಿ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ 1973ರ ನ.1 ರಂದು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಕರ್ನಾಟಕ ಎಂದು ನಾಮಕರಣ ಮಾಡಿದಾಗ ಮೈಸೂರಿನವರೇ ಆದ ಡಿ. ದೇವರಾಜ ಅರಸು, ಇದೀಗ ಸುವರ್ಣ ಸಂಭ್ರಮಾಚರಣೆಯಲ್ಲಿ ಮೈಸೂರಿನವರೇ ಆದ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದು ವಿಶೇಷ ಎಂದರು.

ಕಳೆದ ಐವತ್ತು ವರ್ಷಗಳಲ್ಲಿ ವಿಕಾಸದೆಡೆಗೆ ಕರ್ನಾಟಕ ದಾಪುಗಾಲು ಹಾಕುತ್ತಿದೆ. ದೇಶದ ಆರ್ಥಿಕ ವಿಕಾಸಕ್ಕೆ ರಾಜ್ಯದ ಕೊಡುಗೆ ಅಪಾರವಾಗಿದೆ. ಜಿಎಸ್‌ಟಿ ಪಾವತಿಯಲ್ಲಿ ಇಡೀ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ ಎಂದರು.

ಧ್ವನಿ ಫೌಂಡೇಷನ್ ಸಂಸ್ಥಾಪಕಿ ಡಾ. ಶ್ವೇತ ಮಡಪ್ಪಾಡಿ ಮಾತನಾಡಿ, ತ್ರಿಭಾಷಾ ಸೂತ್ರದ ಬಗ್ಗೆ ಕುವೆಂಪು ಅವರು ಹಿಂದೆಯೇ ಹೇಳಿದ್ದಾರೆ. ಇಂಗ್ಲಿಷ್‌ನ ಕಾಲು ಮುರಿದು, ಹಿಂದಿಯ ಸೊಂಟ ಮುರಿದು ಇಟ್ಟುಕೊಂಡರೆ ನಮಗೆ ಹೇಗೆ ಬೇಕೋ ಹಾಗೇ ಬಳಸಿಕೊಳ್ಳಬಹುದು. ಮುಂಬರುವ ವರ್ಷಗಳಲ್ಲಿ ಸಣ್ಣ ಸಣ್ಣ ಭಾಷೆಗಳು ಅಳಿದು ಹೋಗುವ ಪರಿಸ್ಥಿತಿ ಎದುರಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಪ್ರೊ. ಎಚ್.ಸೋಮಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ. ಸಿ.ಬಸವರಾಜು ಜಟ್ಟಿಹುಂಡಿ, ಆಡಳಿತಾಧಿಕಾರಿ ಪ್ರೊ. ಎಂ.ಕೆ.ಮಹೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ. ಅಜಯ್ ಕುಮಾರ್, ಐಕ್ಯೂಎಸಿ ಸಂಚಾಲಕ ಪ್ರೊ. ಬಿ.ಎಂ.ವೆಂಕಟೇಶ್ ಉಪಸ್ಥಿತರಿದ್ದರು. ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಸಿ.ಡಿ.ಪರಶುರಾಮ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಾಧ್ಯಾಪಕಿ ಡಾ. ಕೋಕಿಲಾ ನಿರೂಪಿಸಿದರು. ವಿಭಾಗದ ಮುಖ್ಯಸ್ಥ ಡಾ. ಜಿ.ಶ್ರೀನಿವಾಸ್ ವಂದಿಸಿದರು. ಸಭಾ ಕಾರ್ಯಕ್ರಮದ ಬಳಿಕ ಡಿ.ಬನುಮಯ್ಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ಎಸ್.ಇಂದಿರಮ್ಮ ಅಧ್ಯಕ್ಷತೆಯಲ್ಲಿ ವಿಚಾರಗೋಷ್ಠಿ ಜರುಗಿದವು.



ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಕರ್ನಾಟಕ ಸುವರ್ಣ ಕರ್ನಾಟಕ-50 ಸಂಭ್ರಮಾಚರಣೆ' ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉದ್ಘಾಟಿಸಿದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ವಿಶ್ವಂ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ವೆಟ್ಟೈಯನ್ (ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಜಿಗ್ರಾ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಭೈರಾದೇವಿ (ಕ) | 4 ಪ್ರದರ್ಶನಗಳು |
| **ಸಂಗಂ** | |
| ಮಾರ್ಟಿನ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೃಷ್ಣಂ ಪ್ರಣಯ ಸಖಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸಿಂಹರೂಪಿಣಿ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭೀಮ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ. |
| ಸ್ಕ್ರೀನ್ 2 | ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ. |
| ಸ್ಕ್ರೀನ್ 3 | ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ. |
| ಸ್ಕ್ರೀನ್ 4 | ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ. |

### ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821-2973519

| | |
|---|---|
| ಸ್ಕ್ರೀನ್ 1 | ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ. |
| ಸ್ಕ್ರೀನ್ 2 | ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 3 | ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ. |
| ಸ್ಕ್ರೀನ್ 4 | ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# 97 ಲಕ್ಷ ಜನರಿಂದ ಮೈಸೂರು ದಸರಾ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆ; 1.82 ಲಕ್ಷ 'ಹಿಟ್ಸ್' ನೀಡಿ ದಾಖಲೆ

**ಪ್ರತಿ ದಿನ ಸರಾಸರಿ 60 ಸಾವಿರ ಜನರಿಂದ ವೀಕ್ಷಣೆ; ದಸರಾ ಉದ್ಘಾಟನೆ 1.80 ಲಕ್ಷ; ಅರಮನೆ ಸಾಂಸ್ಕೃತಿಕ ಕಾರ್ಯಕ್ರಮ 1 ರಿಂದ 1.75 ಲಕ್ಷ; ಜಂಬೂ ಸವಾರಿ 1.80 ಲಕ್ಷ; ಪಂಜಿನ ಕವಾಯತು 2.40 ಲಕ್ಷ ಮಂದಿ ಸವಿದಿದ್ದಾರೆ**



ಮೈಸೂರು, ಅ.19(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ 10 ದಿನಗಳ ವಿವಿಧ ಕಾರ್ಯಕ್ರಮಗಳ ನೇರ ಪ್ರಸಾರವು 97 ಲಕ್ಷ (9.7 ಮಿಲಿಯನ್) ವೀಕ್ಷಣೆ ಕಂಡಿದೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಕ್ಟೋಬರ್ 3 ರಂದು ವಿಶ್ವಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಯಿಂದ ಅಕ್ಟೋಬರ್ 12 ರಂದು ನಡೆದ ದಸರಾ ಜಂಬೂ ಸವಾರಿವರೆಗೆ ನಡೆದ ಎಲ್ಲಾ ಕಾರ್ಯಕ್ರಮಗಳ ವೀಕ್ಷಣೆಯನ್ನು ಜನರು ದಾಖಲೆ ಪ್ರಮಾಣದಲ್ಲಿ ವೀಕ್ಷಿಸಿದ್ದಾರೆ.

ಒಟ್ಟು 97 ಲಕ್ಷ ಜನರು ದಸರಾ ವೀಕ್ಷಣೆ ಮಾಡಿದ್ದು, ಎಲ್ಲಾ ಕಾರ್ಯಕ್ರಮಗಳು 1.82 ಲಕ್ಷ 'ಹಿಟ್ಸ್' ಕಂಡಿವೆ.

10 ದಿನದ ಅವಧಿಯಲ್ಲಿ ಪ್ರತಿ ದಿನ ಸರಾಸರಿ 60 ಸಾವಿರ ಜನರು ದಸರಾ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ನಡೆದ ದಸರಾ ಉದ್ಘಾಟನೆಯನ್ನು ನೇರ ಪ್ರಸಾರದಲ್ಲಿ 1.80 ಲಕ್ಷ ವೀಕ್ಷಿಸಿದ್ದರೆ, ಅರಮನೆ ಆವರಣದ ಸಾಂಸ್ಕೃತಿಕ ಕಾರ್ಯಕ್ರಮವನ್ನು 1 ಲಕ್ಷದಿಂದ 1.75 ಲಕ್ಷ ಜನರು ವೀಕ್ಷಣೆ ಮಾಡಿದ್ದಾರೆ. ದಸರಾ ಜಂಬೂ ಸವಾರಿ ಮೆರವಣಿಗೆಯನ್ನು 1.80 ಲಕ್ಷ ಜನರು ವೀಕ್ಷಿಸಿದ್ದರೆ, ಬನ್ನಿಮಂಟಪದ ಪಂಜಿನ ಕವಾಯತು ಕಾರ್ಯಕ್ರಮವನ್ನು 2.40 ಲಕ್ಷ ಜನರು ವೀಕ್ಷಣೆ ಮಾಡಿದ್ದಾರೆ.

ನಗರದ ಉತ್ತನಹಳ್ಳಿ ಬಳಿಯ ಮೈದಾನದಲ್ಲಿ ನಡೆದ ಯುವ ದಸರಾ ಕಾರ್ಯಕ್ರಮವನ್ನು ಕೂಡ ದಾಖಲೆ ಪ್ರಮಾಣದಲ್ಲಿ ಜನರು ವೀಕ್ಷಿಸಿದ್ದಾರೆ. ಯುವ ದಸರಾ ಉದ್ಘಾಟನೆ ದಿನದಂದು 2.30 ಲಕ್ಷ ಜನರು ವೀಕ್ಷಿಸಿದ್ದರೆ, ಗಾಯಕರಾದ ರವಿ ಬಸ್ರೂರ್, ಬಾದ್ ಷಾ, ಧ್ವನಿ ಬಾನುಲಿ ಹಾಗೂ ಇಳಿಯರಾಜಾ ಕಾರ್ಯಕ್ರಮವನ್ನು 2.65 ಲಕ್ಷ ಜನರು ವೀಕ್ಷಣೆ ಮಾಡಿ ದಾಖಲೆ ಬರೆದಿದ್ದಾರೆ.

ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಮ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳಿಂದ ದೇಶ-ವಿದೇಶದ ಒಟ್ಟು 9.70 ಲಕ್ಷ ಜನರು ದಸರಾ ವೀಕ್ಷಿಸಿದ್ದಾರೆ.

# ಸಮ್ಮಿಲನ ಸಭೆಯಲ್ಲಿ ಪರಿಶಿಷ್ಟ ಜಾತಿ ಮಹಿಳೆಯರ ಕುಂದುಕೊರತೆ ಚರ್ಚೆ

ಮೈಸೂರು,ಅ.19(ಎಂಟಿವೈ)- ವೇಶ್ಯಾವೃತ್ತಿ ಅವಲಂಭಿಸಿರುವ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರಿಗೆ ಸರ್ಕಾರದ ಸೌಲಭ್ಯಗಳ ತಲುಪಿಸಲು ಕ್ರಮ ಕೈಗೊಳ್ಳಬೇಕು ಎಂದು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಕಿಶೋರ್ ಮಕ್ವಾನಾ ಸಲಹೆ ನೀಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನ ಸಭಾಂಗಣದಲ್ಲಿ ಆಶೋದಯ ಸಮಿತಿಯ ಸಹಕಾರದಲ್ಲಿ ಮೈಸೂರು ಜಿಲ್ಲೆಯಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರ ಸಮ್ಮಿಲನ ಸಭೆ ನಡೆಸಿ, ಕುಂದುಕೊರತೆ ಆಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ವೇಶಾವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರಿಗೆ ವಿವಿಧ ಸೌಲಭ್ಯ ಒದಗಿಸುತ್ತಿದೆ. ಆದರೆ, ಸರ್ಕಾರದ ಸೌಲಭ್ಯ ಎಲ್ಲರಿಗೂ ತಲುಪುತ್ತಿಲ್ಲ. ಈ ಹಿನ್ನೆಲೆಯಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಸಮುದಾಯ ಮಹಿಳೆಯರಿಗೆ ಎಲ್ಲಾ ಸೌಲಭ್ಯ ತಲುಪಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲೆಯಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದ್ದೇನೆ. ಅಲ್ಲದೆ, ಜಿಲ್ಲಾಧಿಕಾರಿಯೊಂದಿಗೆ ಸಭೆ ನಡೆಸಿ ಸೂಕ್ತ ಸೌಲಭ್ಯಗಳನ್ನು ಒದಗಿಸುವಂತೆ ನಿರ್ದೇಶನ ನೀಡಿದ್ದೇನೆ. ಸಾಕಷ್ಟು ಮಹಿಳೆಯರ ಬಳಿ ಆಧಾರ್ ಕಾರ್ಡ್, ಪಡಿತರ ಚೀಟಿ, ಆಯುಷ್ಮಾನ್ ಕಾರ್ಡ್‌ಗಳಿಲ್ಲ. ಇವೆಲ್ಲವೂ ಪ್ರತಿಯೊಬ್ಬರ ಕನಿಷ್ಠ ಅವಶ್ಯಕತೆಗಳಾಗಿವೆ. ಸೂಕ್ತ ದಾಖಲೆಗಳು ಇಲ್ಲದ ಕಾರಣಕ್ಕೆ ಆಧಾರ್ ಕಾರ್ಡ್, ಪಡಿತರ ಚೀಟಿ, ಆಯುಷ್ಮಾನ್ ಕಾರ್ಡ್‌ಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಅಂತಹ ಮಹಿಳೆಯರನ್ನು ಗುರುತಿಸಿ ಅವರಿಗೆ ಅಗತ್ಯ ದಾಖಲೆಗಳನ್ನು ಒದಗಿಸಿ ಸರ್ಕಾರದ ಎಲ್ಲ ಸೌಲಭ್ಯಗಳು ದೊರೆಯುವಂತೆ ಮಾಡಬೇಕು ಎಂದರು.

ವೇಶ್ಯಾವಾಟಿಕೆಯಲ್ಲಿ ತೊಡಗಿರುವವರು ಸಹ ಸಮಾಜದಲ್ಲಿ ಗೌರವಯುತವಾದ ಬದುಕು ನಡೆಸಬೇಕು. ಅವರಿಗೂ ಎಲ್ಲರಂತೆ ಸೌಲಭ್ಯಗಳು ದೊರೆಯಬೇಕು. ಆ ಮೂಲಕ ಅವರು ಆರ್ಥಿಕ ಹಾಗೂ ಸಾಮಾಜಿಕವಾಗಿ ಸದೃಢರಾಗುವಂತೆ ಮಾಡುವುದು ಸರ್ಕಾರದ ಜವಾಬ್ದಾರಿ ಯಾಗಿದೆ. ಒಂದು ರಾಜ್ಯದಲ್ಲಿ ಎಸ್‌ಸಿ ಪಟ್ಟಿಯಲ್ಲಿರುವ ಕೆಲವು ಜಾತಿಗಳು ಮತ್ತೊಂದು ರಾಜ್ಯದಲ್ಲಿ ಎಸ್‌ಸಿ ಪಟ್ಟಿಯಲ್ಲಿ ಇಲ್ಲ. ಅಂತಹ ಜಾತಿಯವರು ತಮ್ಮನ್ನು ಎಸ್‌ಸಿ ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಹಣದ ಬೇಡಿಕೆ ಇಡುತ್ತಿರುವ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಕಿಶೋರ್ ಮಕ್ವಾನಾ ದೆಹಲಿಗೆ ತುರ್ತಾಗಿ ತೆರಳಬೇಕಾಗಿದೆ ಎಂದು ಹೇಳಿ ಸುದ್ದಿಗೋಷ್ಠಿಯನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿದರು. ಇದಕ್ಕೆ ಪತ್ರಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.






ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಮಹಿಳೆಯರ ಕುಂದುಕೊರತೆ ಆಲಿಸುವ ಸಮ್ಮಿಲನ ಸಭೆಯಲ್ಲಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಕಿಶೋರ್ ಮಕ್ವಾನಾ ಮಾತನಾಡಿದರು.

## ದಿಢೀರ್ ಅನಾರೋಗ್ಯ: ಮಾಜಿ ಸಿಎಂ ಎಸ್‌ಎಂ ಕೃಷ್ಣ ಆಸ್ಪತ್ರೆಗೆ ದಾಖಲು



**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಅವರ ಆರೋಗ್ಯ ತಪಾಸಣೆ ಮತ್ತು ಆಪ್ಟಿಮೈಸೇಶನ್‌ಗಾಗಿ ಬೆಂಗಳೂರಿನ ಓಲ್ಡ್ ಏರ್‌ಪೋರ್ಟ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿರವಾಗಿದ್ದು, ಸೋಮವಾರ ಡಿಸ್ಚಾರ್ಜ್ ಆಗುವ ನಿರೀಕ್ಷೆಯಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ. 92 ವರ್ಷದ ಎಸ್‌ಎಂ ಕೃಷ್ಣ ಅವರು, 2009ರಿಂದ 2012ರವರೆಗೆ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಕಳೆದ ಆಗಸ್ಟ್‌ನಲ್ಲಿ ಉಸಿರಾಟದ ತೊಂದರೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

# ದಸರಾ ವೇಳೆ ರಸ್ತೆ ಅಪಘಾತದಲ್ಲಿ ಆರು ಮಂದಿ ಸಾವು



ಮೈಸೂರು, ಅ.19(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಂದರ್ಭ ಏಳು ದಿನದ ಅವಧಿಯಲ್ಲಿ ರಸ್ತೆ ಅಪಘಾತದಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ.

ಮೈಸೂರು ನಗರದ 135 ಕಿಲೋಮೀಟರ್, 84 ವೃತ್ತಗಳಲ್ಲಿ ದಸರಾ ವಿದ್ಯುತ್ ದೀಪಲಂಕಾರ ಮಾಡಲಾಗಿದೆ. ವರ್ಣರಂಜಿತ ವಿದ್ಯುತ್ ದೀಪಲಂಕಾರ ವೀಕ್ಷಿಸಲು ಸಂಚಾರ ದಟ್ಟಣೆಯ ಕಾರಣ ನಗರದ ಹೃದಯ ಭಾಗ ಸೇರಿದಂತೆ ಇತರೆಡೆ ಏಕ ಮುಖ ಸಂಚಾರ ಮಾಡಲಾಗಿತ್ತು.

ಅದಾಗಿಯೂ ಬಹಳಷ್ಟು ವಾಹನ ಸವಾರರು ಸಂಚಾರ ನಿಯಮ ಉಲ್ಲಂಘಿಸಿದ್ದಾರೆ. ಬಹಳಷ್ಟು ಜನರು ಸಾಲು ಸಾಲು ವಾಹನಗಳ ಸಂಚಾರವಿದ್ದರೂ ಅಪಾಯ ಲೆಕ್ಕಿಸದೆ ರಸ್ತೆ ಮಧ್ಯೆ ನಿಂತು ಸೆಲ್ಫಿ ಹಾಗೂ ಫೋಟೋ ಕ್ಲಿಕ್ಕಿಸಿದ್ದಾರೆ ಇದರಿಂದ ಕೆಲವೆಡೆ ಅಪಘಾತಗಳು ಸಂಭವಿಸಿದೆ.

ನಗರದ ದಟ್ಟಗಳ್ಳಿಯ ವರ್ತುಲ ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಮಂಜುನಾಥ್(27) ಮೃತಪಟ್ಟರೆ, ಲಲಿತಾದ್ರಿಪುರದ ರಿಂಗ್ ರಸ್ತೆಯಲ್ಲಿ ಬೈಕ್‌ಗೆ ಕಾರು ಡಿಕ್ಕಿಯಾಗಿ ಶಿವಪ್ರಸಾದ್ (51) ಮತ್ತು ಕುಮಾರಿ(40) ಮೃತಪಟ್ಟಿದ್ದಾರೆ. ಆರ್‌ಬಿಐ ಜಂಕ್ಷನ್ ಬಳಿ ಡಿವೈಡರ್‌ಗೆ ಬೈಕ್ ಡಿಕ್ಕಿಯಾಗಿ ಸುನೀಲ್ ಕುಮಾರ್ (32) ಮೃತರಾಗಿದ್ದಾರೆ.

ಜಲದರ್ಶಿನಿ ಅತಿಥಿ ಗೃಹದ ಬಳಿಯ ಫುಟ್‌ಪಾತ್‌ಗೆ ಬೈಕ್ ಡಿಕ್ಕಿ ಹೊಡೆದು ಸಿ.ಕೆ.ರೇಣುಕುಮಾರ್ (40) ಮೃತಪಟ್ಟಿದ್ದಾರೆ. ಆರ್ ಟಿ ನಗರ ಬಳಿ ಸಂಭವಿಸಿದ ಅಪಘಾತದಲ್ಲಿ ಸೀತಾರಾಮ ಭಟ್ (70) ಸಾವನ್ನಪ್ಪಿದ್ದಾರೆ.

ದಸರಾ ವೇಳೆ ಸಾವಿರಾರು ವಾಹನಗಳ ಸಂಚಾರದಿಂದ ಅಪಘಾತಗಳು ಸಂಭವಿಸುತ್ತವೆ ಎಂಬ ಕಾರಣಕ್ಕೆ ಏಕ ಮುಖ ಸಂಚಾರ ಸೇರಿದಂತೆ ಹಲವು ಸುರಕ್ಷಿತ ಸಂಚಾರ ನಿಯಮವನ್ನು ಸಂಚಾರಿ ಪೊಲೀಸರು ಜಾರಿಗೊಳಿಸಿದ್ದರೂ ಆರು ಮಂದಿ ಬಲಿಯಾಗಿದ್ದಾರೆ.

# ಪಶುಪಾಲನಾ ಇಲಾಖೆಯಲ್ಲಿ ಸದ್ಯದಲ್ಲೇ 700 ಡಿ-ಗ್ರೂಪ್ ನೌಕರರ ನೇಮಕ

## • ಇಲಾಖಾ ಸಚಿವ ಕೆ.ವೆಂಕಟೇಶ್ ಮಾಹಿತಿ • ಪಶು ವೈದ್ಯಕೀಯ ವ್ಯವಸ್ಥೆಯಲ್ಲಿ ಹಲವು ಸುಧಾರಣೆ ನಿರ್ಧಾರ

ಮೈಸೂರು, ಅ.19(ಎಂಟಿವೈ)- ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿಯಿರುವ ವೈದ್ಯರು, ವೈದ್ಯಕೇತರ ಹುದ್ದೆಗಳನ್ನು ಭರ್ತಿ ಮಾಡಿ ಸುಧಾರಣೆ ತರುವುದರೊಂದಿಗೆ 700 ಡಿ-ಗ್ರೂಪ್ ನೌಕರರ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಶುಪಾಲನ ಇಲಾಖೆ ಸಚಿವ ಕೆ.ವೆಂಕಟೇಶ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಪಶು ವೈದ್ಯಕೀಯ ಸಂಘ ಸಹಯೋಗದೊಂದಿಗೆ ಆಯೋಜಿಸಿದ್ದ ಪಶುವೈದ್ಯರ ರಾಜ್ಯ ಮಟ್ಟದ ತಾಂತ್ರಿಕ ವಿಚಾರ ಸಂಕಿರಣ ಹಾಗೂ 6ನೇ ಸುತ್ತಿನ ಕಾಲುಬಾಯಿಜ್ವರ ಲಸಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 700 ಮಂದಿ ಡಿ-ಗ್ರೂಪ್ ನೌಕರರ ನಿಯೋಜನೆಗೆ ಹಣಕಾಸು ಇಲಾಖೆಯಿಂದ ಅನುಮೋದನೆ ದೊರೆತಿದ್ದು, ಆ ಪ್ರಕ್ರಿಯೆ ಶೀಘ್ರದಲ್ಲೇ ಆರಂಭಿಸಲಾಗುತ್ತದೆ. ಪಶುವೈದ್ಯರ ಕೊರತೆಯನ್ನು ನೀಗಿಸಲು 400 ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 400 ಖಾಯಂ ವೈದ್ಯರ ನೇಮಕಕ್ಕೆ ಪ್ರಕ್ರಿಯೆ ನಡೆದಿದೆ. ಹಂತ ಹಂತವಾಗಿ ಅಗತ್ಯವಿರುವ ಪಶು ವೈದ್ಯರು, ಸಿಬ್ಬಂದಿ ನಿಯೋಜನೆಗೆ ಸರ್ಕಾರ ಕ್ರಮಕೈಗೊಂಡಿದೆ ಎಂದರು.

ಕರ್ನಾಟಕದಲ್ಲಿ ಪಶು ವೈದ್ಯರ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಪಶು ವೈದ್ಯಕೀಯ ಕಾಲೇಜಿನಿಂದ ಹೊರ ಬರುವ 450 ವೈದ್ಯರಲ್ಲಿ 50 ಮಂದಿ ಮೀನುಗಾರಿಕೆಗೆ, 100 ಮಂದಿ ಹಾಲು ಒಕ್ಕೂಟಕ್ಕೆ ಹೋದರೆ, ಉಳಿದ 300 ಮಂದಿ ಪಶುಪಾಲನಾ ಇಲಾಖೆಗೆ ಉಳಿಯಲಿದ್ದಾರೆ. ಇದರಿಂದ ರಾಜ್ಯದಲ್ಲಿ ಹೊಸ ದಾಗಿ ಪಶುಪಾಲನಾ ಕಾಲೇಜುಗಳನ್ನು ಆರಂಭಿಸಲು ಚಿಂತನೆ ನಡೆಸಲಾಗಿದೆ ಎಂದರು.

ಕಳೆದ ವರ್ಷ ಖಾಸಗಿ ಪಶುವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಮೂವರು ಖಾಸಗಿ ಯವರು ಪ್ರಸ್ತಾಪ ಸಲ್ಲಿಸಿದ್ದರು. ಈ ಬಗ್ಗೆ ಸಿಎಂ ಅವರೊಂದಿಗೆ ಚರ್ಚಿಸಿದಾಗ ಖಾಸಗಿಯವರಿಗೆ ಅನುಮೋದನೆ ಕೊಡುವ ಬದಲಿಗೆ ಸರ್ಕಾರದಿಂದಲೇ ತೆರೆಯುವುದು ಸೂಕ್ತವೆಂದು ಹೇಳಿದ್ದರಿಂದ ಈಗ ಅಥಣಿ ಮತ್ತು ಪುತ್ತೂರಿನಲ್ಲಿ ತೆರೆಯಲಾಗುತ್ತಿದೆ ಮುಂದಿನ ದಿನಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಿ ಅಗತ್ಯವಿರುವ ಕಡೆಗಳಲ್ಲಿ ತೆರೆಯಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಪಶುಸಂಗೋಪನಾ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರಿಂದ ಸಾಕಷ್ಟು ಅನುಭವ ಹೊಂದಿದ್ದಾರೆ. ಅವರ ಮಾರ್ಗದರ್ಶನ ಪಡೆದು ಇಲಾಖೆಯಲ್ಲಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಡಿ-ಗ್ರೂಪ್ ನೌಕರರ ಕೊರತೆ ನೀಗಿಸಲು ಮೊದಲ ಹಂತದಲ್ಲಿ ನೇಮಕ ಮಾಡುತ್ತಿದ್ದೇವೆ. ಸಿಎಂ ಅವರಿಂದ ಒಪ್ಪಿಗೆ ಪಡೆದು ಉಳಿದ ಖಾಲಿ ಹುದ್ದೆಗಳನ್ನು ನೇಮಕ ಮಾಡಲಾಗುತ್ತದೆ ಎಂದರು.

ಕಾಲುಬಾಯಿ ಜ್ವರದ ಲಸಿಕೆಯನ್ನು ಒಂದು ತಿಂಗಳಲ್ಲಿ ಮುಗಿಸಬೇಕು. ಔಷಧ ಕೊರತೆ, ಸಕಾಲಕ್ಕೆ ವೈದ್ಯರು ಬರುವುದಿಲ್ಲ ಎನ್ನುವ ದೂರುಗಳನ್ನು ರೈತರು ಹೇಳುತ್ತಾರೆ. ಪ್ರಾಣಿಗಳಿಗೆ ಏನು ತೊಂದರೆ ಇದೆ ಎನ್ನುವುದನ್ನು ಹೇಳಲಾಗದು. ನಾವು ನೋಡಿ ಸ್ಪಂದಿಸಬೇಕು. ಒಂದು ದಿನ ತಡವಾದರೂ ಪರಿಣಾಮ ಬೀರಲಿದೆ. ರೈತರಿಂದ ದೂರುಗಳು ಬರದಂತೆ ಪಶುವೈದ್ಯರು ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.


ಪಶುವೈದ್ಯರ ಬೇಡಿಕೆಗಳ ಬಗ್ಗೆ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಎರಡು ಬಾರಿ ಚರ್ಚಿಸಿದ್ದೇನೆ. ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಿಎಂ ಗಮನಕ್ಕೂ ತಂದಿದ್ದೇನೆ. ಮತ್ತೆ ಸಿದ್ದರಾಮಯ್ಯ ಅವರೊಡನೆ ಚರ್ಚಿಸಿ ಪರಿಹರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸಿದ್ದರು. ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಆಯುಕ್ತರಾದ ಶ್ರೀರೂಪ, ನಿರ್ದೇಶಕ ಮಂಜುನಾಥ್ ಎಸ್.ಪಾಳೇಗಾರ್, ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಕೆ.ಸಿ.ವೀರಣ್ಣ, ಭಾರತೀಯ ಪಶು ವೈದ್ಯಕೀಯ ಪರಿಷತ್ತು ಸದಸ್ಯ ಡಾ.ಸುಶಾಂತ್ ರೈ ಬೆಳ್ಳಿಪಾಡಿ, ಜಂಟಿ ನಿರ್ದೇಶಕ ಡಾ.ಶಿವಣ್ಣ, ಉಪ ನಿರ್ದೇಶಕ ನಾಗರಾಜು, ಕರ್ನಾಟಕ ಪಶುವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಶಿವಶರಣಪ್ಪ ಜಿ.ಯಲಗೋಡ, ಕೆಎಂಎಫ್ ನಿರ್ದೇಶಕ ಬಸವರಾಜು, ಡಿಸಿಎಫ್ ಡಾ. ಕೆ.ಎನ್. ಬಸವರಾಜು, ಕರ್ನಾಟಕ ವೈದ್ಯಕೀಯ ಸಂಘದ ಜಿಲ್ಲಾಧ್ಯಕ್ಷ ಡಾ. ವೈ.ಡಿ.ರಾಜಣ್ಣ ಇನ್ನಿತರರು ಉಪಸ್ಥಿತರಿದ್ದರು.





ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಪಶುವೈದ್ಯರ ರಾಜ್ಯ ಮಟ್ಟದ ತಾಂತ್ರಿಕ ವಿಚಾರ ಸಂಕಿರಣ ಹಾಗೂ 6ನೇ ಸುತ್ತಿನ ಕಾಲುಬಾಯಿ ಜ್ವರ ಲಸಿಕಾ ಕಾರ್ಯಕ್ರಮವನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.











9ನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀಯುತ ಬಿ. ಪರಮೇಶ್‌ರವರು
(ಕಾಂಗ್ರೆಸ್ ಹಿರಿಯ ಮುಖಂಡರು)
ನಿಧನ : 20-10-2015



1ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಲಕ್ಷ್ಮಿರವರು
ದುಃಖತಪ್ತರು: ಪತಿ ಆರ್.ಪ್ರಕಾಶ್ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮೈಸೂರು

ನಾಲ್ಕನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮಾನ್ ಎನ್. ಮರಿಯಪ್ಪನವರು
ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಅಲಮೇಲು, ...

---

ಉತ್ತರ ಕ್ರಿಯಾದಿ ಭೂಶಾಂತಿ ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 01.01.1954 ನಿಧನ : 11.10.2024

## ಶ್ರೀಮಾನ್ ಮುನೀಗೌಡರವರು
ಮಾಜಿ ಅಧ್ಯಕ್ಷರು, ಹಾಲು ಉತ್ಪಾದಕರ ಸಹಕಾರ ಸಂಘ

**ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ**

ಮೈಸೂರು ತಾಲ್ಲೂಕು, ಇಲವಾಲ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಲೇಟ್ ಕಲ್ಯಾಣಮ್ಮ ಮತ್ತು ಶ್ರೀ ಲೇಟ್ ಒಕಳಗುಂಡಿ ನಿಂಗೇಗೌಡರ ಕುಟುಂಬ ಶ್ರೀಮತಿ ಮಂಜುಳ ಮಾಡುವ ವಿಜ್ಞಾಪನೆಗಳು
ದಿನಾಂಕ 11-10-2024ನೇ ಶುಕ್ರವಾರದಂದು ನನ್ನ ಪೂಜ್ಯ ಪತಿಯವರಾದ

**ಶ್ರೀಮಾನ್ ಮುನೀಗೌಡರವರು**

ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 21-10-2024ನೇ ಸೋಮವಾರ ಮಧ್ಯಾಹ್ನ 12 ಗಂಟೆಗೆ ಹಾಗೂ ವೈಕುಂಠ ಸಮಾರಾಧನೆಯನ್ನು ದಿನಾಂಕ: 22-10-2024ನೇ ಮಂಗಳವಾರ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮತ್ತು ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ಬಂದು ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಭೋಜನ : ಮಧ್ಯಾಹ್ನ 12-30 ಗಂಟೆಗೆ | 21.11.2024 ಸೋಮವಾರ ರಾತ್ರಿ 8.30 ಗಂಟೆಗೆ ಹರಿಕಥೆ : ಭರತ್ ಶಿವಕುಮಾರ್ ಶಾಸ್ತ್ರಿ ತಂಡದವರಿಂದ

ಇಂತಿ ದುಃಖತಪ್ತರು
ಮೃತರ ಪತ್ನಿ ಶ್ರೀಮತಿ ಮಂಜುಳ ಮತ್ತು ಮಕ್ಕಳಾದ ರಾಜೇಶ್ ಎಂ.ಸುರೇಶ್ ಎಂ. ಸೊಸೆ ಶ್ರೀಮತಿ ಜಿ.ಆರ್.ರಶ್ಮಿ ರಾಜೇಶ್, ಮಗಳು ಶ್ರೀಮತಿ ವೈ.ಎಂ. ಪ್ರಭಾವತಿ ಸಿ.ಎಸ್. ಲೋಕೇಶ್ ಹಾಗೂ ಅಕ್ಕತಂಗಿಯರು, ಭಾವಂದಿರು, ಮೊಮ್ಮಕ್ಕಳು, ಮಾಸ್ತಿಗೌಡರು, ಪುಟ್ಟೇಗೌಡರು, ಚಲುವೇಗೌಡರು, ನೆಲಮನೆ ದ್ಯಾವರಸೇಗೌಡರು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು. ಇಲವಾಲ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು

ಎಂ. ರಾಜೇಶ್
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಇಲವಾಲ ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್ ಸಮಿತಿ, ಮೈಸೂರು

---

## ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



## ಶ್ರೀ ನಂಜಪ್ಪರವರು
(ಮರದ ವ್ಯಾಪಾರಿಗಳು)

ಶ್ರೀಯುತರು ದಿನಾಂಕ 09-10-2024ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 20-10-2024ರ ಭಾನುವಾರ ಬೆಳಗ್ಗೆ 9-00 ರಿಂದ ಮಧ್ಯಾಹ್ನ 12-00 ಗಂಟೆಗೆ ನಮ್ಮ ಸ್ವಗೃಹ, #504, 4ನೇ ಕ್ರಾಸ್, ಹೊಸ ಬಡಾವಣೆ, ಯರಗನಹಳ್ಳಿ ಇಲ್ಲಿ ಉತ್ತರ ಕ್ರಿಯಾದಿ ಕಾರ್ಯವನ್ನು ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಪತ್ನಿ ಚಿಕ್ಕತಾಯಮ್ಮ, ಮಗ-ಮಂಜುನಾಥ, ಸೊಸೆ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮೊಸನಬಾಯನಹಳ್ಳಿ, ಯರಗನಹಳ್ಳಿ ಗ್ರಾಮಸ್ಥರು, ಸ್ನೇಹವರ್ಗ ಹಾಗೂ ಅಪಾರ ಬಂಧು-ಬಳಗ. ಮೊ :7204001000

ಭೋಜನ : ಮಧ್ಯಾಹ್ನ 1-00 ಗಂಟೆಗೆ, ಹರಿಕಥೆ : ರಾತ್ರಿ 9-00 ಗಂಟೆಗೆ